1974 ರ ಕರ್ನಾಟಕ ಅಧಿನಿಯಮ ಸಂಖ್ಯೆ 25

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973

## ಮತ್ತು

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ನಿಯಮಗಳು, 1974

# ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

## ಅಧಿಸೂಚನೆ

ಸಂಖ್ಯೆ : ಸಂವ್ಯಶಾಇ 33 ರಾಶಾಪ್ರ 2005, ಬೆಂಗಳೂರು
ದಿನಾಂಕ : 22ನೇ ಮಾರ್ಚ್ 2006

ಕರ್ನಾಟಕ ರಾಜಭಾಷಾ ಅಧಿನಿಯಮ, 1963 ರ (1963 ರ ಕರ್ನಾಟಕ ಅಧಿನಿಯಮ 26) ರ 5ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ಶ್ರೀ ಟಿ. ಎನ್. ಚತುರ್ವೇದಿ ಎಂಬ ನಾನು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973 (1974 ರ 25) ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ನಿಯಮಗಳು, 1974 ರ ಈ ಮುಂದಿನ ಭಾಷಾಂತರವು, ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದೆಂದು ಈ ಮೂಲಕ ನಿರ್ದಿಷ್ಟಪಡಿಸಿರುತ್ತೇನೆ.

ಟಿ. ಎನ್. ಚತುರ್ವೇದಿ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

# ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973

## ಪ್ರಕರಣಗಳ ವಿಷಯಾನುಕ್ರಮಣಿಕೆ

**ಪ್ರಕರಣಗಳು:** **ಪುಟಗಳು**


### ಅಧ್ಯಾಯ- I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1
2. ಪರಿಭಾಷೆಗಳು 1

### ಅಧ್ಯಾಯ- II
### ಮಂಡಲಿಯ ರಚನೆ

3. ಮಂಡಲಿಯನ್ನು ಸೃಜಿಸುವುದು ಮತ್ತು ನಿಗಮಿತಗೊಳಿಸುವುದು 4
4. ಮಂಡಲಿಯ ರಚನೆ 4
5. ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ನಿರ್ದೇಶಕರುಗಳ ನೇಮಕಾತಿಯನ್ನು ಅಧಿಸೂಚಿಸತಕ್ಕದ್ದು 4
6. ನಿರ್ದೇಶಕರ ಪದಾವಧಿ ಮತ್ತು ಸೇವಾ ಷರತ್ತುಗಳು 4
7. ಮಂಡಲಿಯ ನಿರ್ದೇಶಕನಾಗಿ ನೇಮಕವಾಗುವುದಕ್ಕೆ ಅನರ್ಹತೆ 5
8. ಅಧ್ಯಕ್ಷ ಮತ್ತು ಇತರ ಅಧಿಕಾರೇತರ ನಿರ್ದೇಶಕರನ್ನು ತೆಗೆದುಹಾಕುವುದು 5

### ಅಧ್ಯಾಯ- III
### ಮಂಡಲಿಯ ಸಿಬ್ಬಂದಿ ವರ್ಗದ ಅಧಿಕಾರಿಗಳು ಮತ್ತು ಸದಸ್ಯರು

9. ಮಂಡಲಿಯ ಕಾರ್ಯದರ್ಶಿ, ಮುಖ್ಯ ಇಂಜನಿಯರು, ಲೆಕ್ಕಪತ್ರಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರ ನೇಮಕಾತಿ 6
10. ಸಿಬ್ಬಂದಿ ವರ್ಗದ ಪಟ್ಟಿಯನ್ನು ಇಟ್ಟುಕೊಂಡು ಬರುವುದು 6
11. ವ್ಯವಸ್ಥಾಪಕ ನಿರ್ದೇಶಕರಿಂದ ನಿಯಂತ್ರಣ. 7

### ಅಧ್ಯಾಯ- IV
### ಮಂಡಲಿಯ ಕಾರ್ಯಕಲಾಪ ಮತ್ತು ವ್ಯವಹಾರ

12. ಮಂಡಲಿಯ ಸಭೆ 7
13. ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹಯೋಗ 7
14. ಸಮಿತಿಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳು 7
15. ಮಂಡಲಿಯ ಕಾರ್ಯಗಳು ಅನೌಪಚಾರಿಕತೆಯ ಅಥವಾ ಸ್ಥಾನಗಳು ಖಾಲಿ ಇರುವ ಕಾರಣದಿಂದ ಅಸಿಂಧುವಾಗದಿರುವುದು 7

### ಅಧ್ಯಾಯ- V
### ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

16. ಮಂಡಲಿಯ ಕಾರ್ಯಗಳು 8
17. ಮಂಡಲಿಯ ಇತರ ಪ್ರಕಾರ್ಯಗಳು 8
18. ಮಂಡಲಿಯ ಸಾಮಾನ್ಯ ಅಧಿಕಾರಗಳು 9

### ಅಧ್ಯಾಯ- VI
### ಮಂಡಲಿಯ ಕಾರ್ಯ ಯೋಜನೆಗಳನ್ನು ತನಿಖೆ ಮಾಡುವುದು, ಸಿದ್ಧಪಡಿಸುವುದು, ಮತ್ತು ಜಾರಿಗೊಳಿಸುವುದು ಹಾಗೂ ನಿರ್ವಹಿಸುವುದು, ಇತ್ಯಾದಿ

19. ಕಾರ್ಯಯೋಜನೆಗಳ ತನಿಖೆಯ ವೆಚ್ಚ 9
20. ಮಂಡಲಿಯಿಂದ ಕರಡು ಯೋಜನೆಗಳ ತಯಾರಿಕೆ 9
21. ಸರ್ಕಾರದಿಂದ ಯೋಜನೆಯ ಅನುಮೋದನೆ 10
22. ರಾಜಪತ್ರದಲ್ಲಿ ಕರಡು ಯೋಜನೆಯ ಅನುಮೋದನೆಯ ಪ್ರಕಟಣೆ 10
23. ಮಂಡಲಿಯು ಅನುಮೋದಿತ ಕಾರ್ಯ ಯೋಜನೆಯನ್ನು ಕಾರ್ಯಗತ ಗೊಳಿಸುವುದು 10
24. ಕಾರ್ಯ ಯೋಜನೆಯ ವೆಚ್ಚದ ವಸೂಲಿ 10
25. ಯಾವುದೇ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಕಾರ್ಯಗತಗೊಳಿಸಲು ಮಂಡಲಿಗೆ ನಿರ್ದೇಶಿಸುವುದಕ್ಕೆ ಸರ್ಕಾರದ ಅಧಿಕಾರ 10

| | | |
|---|---|---|
| 26. | ಕಾರ್ಯಯೋಜನೆಯನ್ನು ತಯಾರಿಸಲು ಅಥವಾ ಕಾರ್ಯಗತಗೊಳಿಸಲು ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಮಂಡಲಿಗೆ ಇರುವ ಅಧಿಕಾರ | 11 |
| 27. | ಸ್ಥಳೀಯ ಪ್ರಾಧಿಕಾರವು ಮಂಡಲಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದು | 11 |
| 28. | ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸ್ಥಳೀಯ ಪ್ರಾಧಿಕಾರದ ಅಧಿಕಾರ | 11 |
| 28ಎ. | ಮಂಡಲಿಯಿಂದ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ಇತ್ಯಾದಿ | 11 |
| 28ಬಿ. | ಗೃಹಬಳಕೆ ಮತ್ತು ಇತರ ಉದ್ದೇಶಗಳಿಗೆ ನೀರು ಸರಬರಾಜು | 12 |
| 28ಸಿ. | ಮುಖ್ಯ ಕೊಳಾಯಿ-ಇತ್ಯಾದಿಗಳನ್ನು ಹಾಕುವ ಅಧಿಕಾರ | 13 |
| 28ಡಿ. | ಮೀಟರುಗಳು, ಇತ್ಯಾದಿಗಳನ್ನು ಒದಗಿಸುವ ಅಧಿಕಾರ | 14 |
| 28ಇ. | ಆವರಣಗಳನ್ನು ಪ್ರವೇಶಿಸುವುದು ಮತ್ತು ನೀರು ಸರಬರಾಜನ್ನು ತೆಗೆದು ಹಾಕುವುದು ಇತ್ಯಾದಿ ಅಧಿಕಾರ | 14 |
| 28ಎಫ್. | ಕಾಮಗಾರಿಗಳನ್ನು ಲೈಸೆನ್ಸು ಪಡೆದ ಕೊಳಾಯಿಗಾರನೇ ಮಾಡುವುದು | 15 |
| 28ಜಿ. | ಕೆಲವೊಂದು ಕೃತ್ಯಗಳಿಗೆ ನಿಷೇಧ | 16 |
| 28ಹೆಚ್. | ಆವರಣದ ಚರಂಡಿ ವ್ಯವಸ್ಥೆ, ಇತ್ಯಾದಿ | 17 |


## ಅಧ್ಯಾಯ - VII
## ಹಣಕಾಸು, ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ


| | | |
|---|---|---|
| 29. | ಮಂಡಲಿಯ ನಿಧಿಗಳು | 19 |
| 30. | ಮಂಡಲಿಗೆ ಧನಸಹಾಯಗಳು, ಸಾಲಗಳು ಮತ್ತು ಅನುದಾನಗಳು | 20 |
| 31. | ಸಾಲ ಪಡೆಯಲು ಮತ್ತು ಸಾಲ ನೀಡಲು ಮಂಡಲಿಯ ಅಧಿಕಾರ | 20 |
| 31ಎ. | ದರಗಳು, ಇತ್ಯಾದಿಗಳನ್ನು ವಿಧಿಸಲು ಮಂಡಲಿಯ ಅಧಿಕಾರ | 20 |
| 32. | ಸಾಲಗಳಿಗಾಗಿ ಸರ್ಕಾರದ ಖಾತರಿ | 21 |
| 33. | ಡಿಬೆಂಚರುಗಳ ನಮೂನೆ, ಸಹಿ, ವಿನಿಮಯ, ವರ್ಗಾವಣೆ ಮತ್ತು ಪರಿಣಾಮ | 21 |
| 34. | ಮಂಡಲಿಯ ಆದಾಯ ಮತ್ತು ವೆಚ್ಚದ ಅಂದಾಜುಗಳನ್ನು ಪರಿಗಣನೆಗಾಗಿ ವಾರ್ಷಿಕವಾಗಿ ಮಂಡಲಿ ಮುಂದೆ ಮಂಡಿಸುವುದು | 21 |
| 35. | ಅಂದಾಜುಗಳಿಗೆ ಸರ್ಕಾರದ ಅನುಮೋದನೆ | 21 |
| 36. | ಪೂರಕ ಅಂದಾಜು | 22 |
| 37. | ಮಂಡಲಿಯಿಂದ ಸಾಲಗಳ ಮರುಸಂದಾಯ | 22 |
| 38. | ಋಣತೀರಿಕೆ ಮತ್ತು ಇತರ ನಿಧಿಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ | 22 |
| 39. | ವಾರ್ಷಿಕ ವರದಿಗಳು, ಅಂಕಿ ಅಂಶ ಮತ್ತು ವಿವರಣೆಗಳು | 22 |
| 40. | ಲೆಕ್ಕ ಮತ್ತು ಲೆಕ್ಕಪರಿಶೋಧನೆ | 22 |
| 41. | ಲೆಕ್ಕ ಪರಿಶೋಧಕರಿಗೆ ಪರಿಶ್ರಮ ಧನ | 23 |
| 42. | ಸರ್ಕಾರಕ್ಕೆ ಕಳುಹಿಸಬೇಕಾದ ಮತ್ತು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾದ ಲೆಕ್ಕಗಳು ಮತ್ತು ಲೆಕ್ಕಪರಿಶೋಧನಾ ವರದಿ | 23 |
| 43. | ವಸೂಲಾಗದ ಮೊತ್ತಗಳನ್ನು ಲೆಕ್ಕದಿಂದ ತೆಗೆದುಹಾಕುವುದಕ್ಕೆ ಅಧಿಕಾರಗಳು | 23 |


## ಅಧ್ಯಾಯ - VIII
## ದಂಡನೆಗಳು ಮತ್ತು ಕಾರ್ಯವಿಧಾನ


| | | |
|---|---|---|
| 44. | ಕೆಲವು ಸಂದರ್ಭಗಳಲ್ಲಿ ಯಾವುದೇ ಅನರ್ಹತೆ ಇಲ್ಲದಿರುವುದು | 23 |
| 44ಎ. | ನೀರು ಸರಬರಾಜು ಸಂಬಂಧವಾದ ಅಪರಾಧಕ್ಕಾಗಿ ಮಾಲೀಕರ ಮತ್ತು ಅನುಭವದಾರರ ಜಂಟಿ ಮತ್ತು ಪ್ರತ್ಯೇಕ ಹೊಣೆಗಾರಿಕೆ | 23 |
| 45. | ಕಂಟ್ರಾಕ್ಟರನಿಗೆ ಅಡ್ಡಿಪಡಿಸುವುದಕ್ಕಾಗಿ ಅಥವಾ ಗುರುತನ್ನು ತೆಗೆದು ಹಾಕಿದುದಕ್ಕಾಗಿ ದಂಡನೆ | 23 |
| 46. | ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡನೆ | 24 |
| 47. | ಪ್ರಾಸಿಕ್ಯೂಷನ್ ಮತ್ತು ಅಪರಾಧಗಳ ಅಧಿವಿಚಾರಣೆ | 24 |
| 48. | ಅಪರಾಧಿಗಳ ದಸ್ತಗಿರಿ | 24 |
| 49. | ಕಂಪನಿಗಳಿಂದ ಅಪರಾಧಗಳು | 24 |

## ಅಧ್ಯಾಯ - IX
### ಸಂಕೀರ್ಣ


| | | |
|---|---|---|
| 50. | ವ್ಯವಸ್ಥಾಪಕ ನಿರ್ದೇಶಕನ ತುರ್ತು ಅಧಿಕಾರಗಳು | 25 |
| 51. | ಕಾನೂನು ವ್ಯವಹರಣೆಗಳ ಹೂಡುವಿಕೆ, ರಾಜಿ, ಮುಂತಾದವುಗಳು ಮತ್ತು ಕಾನೂನು ಸಲಹೆಯನ್ನು ಪಡೆಯುವುದು ಇವುಗಳಿಗೆ ಸಂಬಂಧಿಸಿ ದಂತೆ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರಗಳು | 25 |
| 52. | ಅಧಿಕಾರಗಳ ಪ್ರತ್ಯಾಯೋಜನೆ | 25 |
| 53. | ಮಂಡಲಿಗೆ ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ಆದೇಶಗಳು ಮತ್ತು ನಿರ್ದೇಶನಗಳನ್ನು ನೀಡುವುದಕ್ಕೆ ಸರ್ಕಾರದ ಅಧಿಕಾರ | 26 |
| 54. | ಪೊಲೀಸ್ ಅಧಿಕಾರಿಗಳ ಕರ್ತವ್ಯಗಳು | 26 |
| 55. | ಮಂಡಲಿ ಮತ್ತು ಸ್ಥಳೀಯ ಪ್ರಾಧಿಕಾರಗಳ ನಡುವಿನ ವಿವಾದಗಳ ನ್ಯಾಯ ನಿರ್ಣಯ | 26 |
| 55ಎ. | ಕೆಲವು ಸಂದರ್ಭಗಳಲ್ಲಿ ಸರಬರಾಜು ಕಡಿಮೆಯಾದಾಗ ಅಥವಾ ಸರಬರಾಜು ಮಾಡದಿದ್ದಾಗ ಮಂಡಲಿಯ ಹೊಣೆಗಾರಿಕೆ ಆಗದಿರುವುದು | 26 |
| 55ಬಿ. | ಕೊಳವೆಗಳು, ಸಾಲುಕೊಳಾಯಿಗಳು, ಮೊದಲಾದವುಗಳನ್ನು ಉಪಯೋಗಿಸುವ ಹಕ್ಕು | 27 |
| 56. | ಇತರ ಕಾನೂನುಗಳ ಪರಿಣಾಮ | 27 |
| 57. | ಮಂಡಲಿಯ ವಿರುದ್ಧ ದಾವೆಯ ನೋಟೀಸು | 27 |
| 58. | ಪರಿಹಾರ ಸಂದಾಯ ಮಾಡಲು ಮಂಡಲಿಯ ಸಾಮಾನ್ಯ ಅಧಿಕಾರ | 27 |
| 59. | ಅಪರಾಧಿಗಳು ತಮ್ಮಿಂದ ಉಂಟಾದ ಹಾನಿಗಳಿಗೆ ಸಂದಾಯ ಮಾಡಬೇಕಾದ ಪರಿಹಾರ | 27 |
| 60. | ಬಾಕಿಗಳನ್ನು ವಸೂಲು ಮಾಡುವ ವಿಧಾನ | 28 |
| 61. | ಮಂಡಲಿಯ ಆದೇಶಗಳು ಮತ್ತು ಇತರ ಲಿಖಿತಗಳನ್ನು ಅಧಿಪ್ರಮಾಣೀಕರಿಸುವುದು | 28 |
| 62. | ನೋಟೀಸುಗಳ ಅಥವಾ ಬಿಲ್ಲುಗಳ ಸಹಿಗೆ ಮುದ್ರೆಯೊತ್ತುವುದು | 28 |
| 63. | ಪ್ರವೇಶಾಧಿಕಾರ | 28 |
| 64. | ಸದ್ಭಾವನೆಯಿಂದ ಮಾಡಿದ ಕ್ರಮದ ರಕ್ಷಣೆ | 29 |
| 65. | ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು | 29 |
| 66. | 1894ರ ಕೇಂದ್ರ ಅಧಿನಿಯಮ I ಮತ್ತು 1914ರ ಕೇಂದ್ರ ಅಧಿನಿಯಮ IXರ ಮೇರೆಗೆ ಮಂಡಲಿಯು ಸ್ಥಳೀಯ ಪ್ರಾಧಿಕಾರವಾಗಿರುವುದು | 29 |
| 66ಎ. | ರಾಜ್ಯ ಸರ್ಕಾರದ ನಿರ್ದೇಶನಗಳು | 29 |
| 66ಬಿ. | ಲೈಸೆನ್ಸುಗಳು ಮತ್ತು ಲಿಖಿತ ಅನುಮತಿಗಳು | 29 |
| 66ಸಿ. | ಯುಕ್ತ ಕಾಲವನ್ನು ನಿಗದಿಪಡಿಸಲು ನೋಟೀಸುಗಳು, ಇತ್ಯಾದಿ | 30 |
| 66ಡಿ. | ನೋಟೀಸುಗಳ ಜಾರಿ, ಇತ್ಯಾದಿ | 31 |
| 66ಇ. | ಚಾರ್ಜುಗಳಿಗಾಗಿ ಮಾಡಿದ ಬಿಲ್‌ಗಳು ಅಥವಾ ತಗಾದೆ ನೋಟೀಸನ್ನು ಸಾಮಾನ್ಯ ಅಂಚೆಯ ಮೂಲಕ ಜಾರಿಮಾಡುವುದು | 32 |
| 66ಎಫ್. | ನೋಟೀಸು, ಮುಂತಾದವುಗಳನ್ನು ಪಾಲಿಸದಿದ್ದ ಸಂದರ್ಭದಲ್ಲಿ ಅಧಿಕಾರ | 32 |
| 66ಜಿ. | ಅಪರಾಧಗಳ ಬಗೆಗಿನ ರಾಜಿ | 32 |
| 66ಹೆಚ್. | ನೋಟೀಸುಗಳ ಮತ್ತು ಇತರ ದಸ್ತಾವೇಜುಗಳ ಸಿಂಧುತ್ವ | 32 |
| 67. | ಪುನರ್ ಅವಲೋಕನ | 33 |


## ಅಧ್ಯಾಯ - X
### ನಿಯಮಗಳು ಮತ್ತು ವಿನಿಯಮಗಳು


| | | |
|---|---|---|
| 68. | ನಿಯಮ ರಚನಾಧಿಕಾರ | 33 |
| 69. | ವಿನಿಯಮ ರಚನಾಧಿಕಾರ | 34 |
| 70. | ನೀರು ಪೂರೈಕೆ ಮತ್ತು ಒಳಚರಂಡಿ ಕಾಮಗಾರಿಗಳ ಸಂಬಂಧದಲ್ಲಿ ನಿಯೋಜಿತರಾದ ಸ್ಥಳೀಯ ಪ್ರಾಧಿಕಾರಗಳ ನೌಕರರಿಗೆ ಸಂಬಂಧಿಸಿದ ಉಪಬಂಧಗಳು | 36 |

71. ನೇಮಕಾತಿಗಳು, ಅಧಿಸೂಚನೆಗಳು, ನಿಯಮಗಳು, ಉಪ-ವಿಧಿಗಳು, ಮುಂತಾದವುಗಳನ್ನು ಮುಂದುವರಿಸುವುದು 36
72. ಅಧಿಸೂಚನೆಗಳು 37

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**1974ರ ಅಧಿನಿಯಮ 25.-** ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆಯ ಸೌಲಭ್ಯಗಳನ್ನು ವಿನಿಯಮಿಸಲು ಮತ್ತು ಅಭಿವೃದ್ಧಿಪಡಿಸಲು ಯೋಜನೆಗಳ ಶೋಧನೆ, ಸಿದ್ಧತೆ ಮತ್ತು ಕಾರ್ಯಾಚರಣೆ ಕೈಗೊಳ್ಳಲು ಅಂಥ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳಲ್ಲಿ ಸಮನ್ವಯ ತರುವುದಕ್ಕೆ ಸಹಾಯವಾಗಬಹುದಾದಂಥ ರಾಜ್ಯ ಮಟ್ಟದ ಒಂದು ಶಾಸನಬದ್ಧ ಮಂಡಲಿಯನ್ನು ರಚಿಸುವುದು ಅವಶ್ಯವಾಗಿದೆ ಎಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ- IV 2ಎ, ದಿನಾಂಕ 26.2.1973, ಸಂಖ್ಯೆ 180, ಪುಟ 37 ರಲ್ಲಿ ಪ್ರಕಟವಾಗಿದೆ.)

### II

**1976ರ ತಿದ್ದುಪಡಿ ಮಾಡುವ ಅಧಿನಿಯಮ 7.-** ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ವಿಧೇಯಕ, 1973 ಇದು ಭಾರತ ರಾಷ್ಟ್ರಪತಿಯವರ ಅನುಮತಿ ಪಡೆದಿದೆ ಮತ್ತು ಇದನ್ನು 1974ರ ಕರ್ನಾಟಕ ಅಧಿನಿಯಮ 25 ಎಂಬುದಾಗಿ ಪ್ರಕಟಿಸಲಾಗಿದೆ.

ಸದರಿ ವಿಧೇಯಕಕ್ಕೆ ಅನುಮತಿ ನೀಡುವಾಗ, ಭಾರತ ಸರ್ಕಾರವು, ಕೆಲವು ತಿದ್ದುಪಡಿಗಳನ್ನು ಮಾಡಲು ಸೂಚಿಸಿತ್ತು. ಅದರಲ್ಲಿ ಒಂದು, ಅಧಿನಿಯಮದ 9ನೇ ಪ್ರಕರಣದ ತಿದ್ದುಪಡಿಗೆ ಸಂಬಂಧಿಸಿದ್ದಾಗಿದೆ

9ನೇ ಪ್ರಕರಣದ (1)ನೇ ಉಪ ಪ್ರಕರಣವು, ಮಂಡಲಿಯ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ, ತಾನು ಅವಶ್ಯವೆಂದು ಪರಿಗಣಿಸಿದಲ್ಲಿ ಒಬ್ಬ ಕಾರ್ಯದರ್ಶಿ, ಮುಖ್ಯ ಇಂಜಿನಿಯರು, ಲೆಕ್ಕಪತ್ರಾಧಿಕಾರಿ ಮತ್ತು ಅಂಥ ಇತರ ಅಧಿಕಾರಿ ಮತ್ತು ನೌಕರರನ್ನು ನೇಮಕ ಮಾಡಿಕೊಳ್ಳಲು ಅದಕ್ಕೆ ಅಧಿಕಾರವನ್ನು ನೀಡುತ್ತದೆ. ಮಂಡಲಿಯು, ಸರ್ಕಾರದ ಪೂರ್ವ ಅನುಮೋದನೆ ಇಲ್ಲದೆ, ಒಂದು ಸಾವಿರದ ಆರು ನೂರು ರೂಪಾಯಿಗಳನ್ನು ಮೀರುವ ಗರಿಷ್ಠ ಮಾಸಿಕ ವೇತನದ ಯಾವುದೇ ಹುದ್ದೆಯ ಸೃಜನೆಗೆ ಅಥವಾ ಯಾವುದೇ ಹುದ್ದೆಗೆ ಯಾರೇ ವ್ಯಕ್ತಿಯ ನೇಮಕಾತಿಗೆ ಮಂಜೂರಾತಿ ನೀಡತಕ್ಕದ್ದಲ್ಲ ಎಂದು ಪರಂತುಕ ಗೊತ್ತುಪಡಿಸುತ್ತದೆ.

ಭಾರತ ಸರ್ಕಾರವು, ಮಂಡಲಿಯ ಕಾರ್ಯದರ್ಶಿ, ಮುಖ್ಯ ಇಂಜಿನಿಯರ್ ಮತ್ತು ಲೆಕ್ಕಪತ್ರಾಧಿಕಾರಿಯ ನೇಮಕಾತಿಯನ್ನು ಸರ್ಕಾರದ ಅನುಮೋದನೆಯೊಂದಿಗೆ ಮಾಡತಕ್ಕದ್ದೆಂದು ಸೂಚಿಸಿದೆ. ಆದ್ದರಿಂದ, ಈ ಮೂರು ಹುದ್ದೆಗಳು ಮಂಡಲಿಯಲ್ಲಿ ಪ್ರಮುಖ ಹುದ್ದೆಗಳಾಗಿರುವುದರಿಂದ, ಈ ಹುದ್ದೆಗಳ ನೇಮಕಾತಿಯ ಮೇಲೆ ಸರ್ಕಾರದ ನಿಯಂತ್ರಣ ಇರತಕ್ಕದ್ದೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ - IV 2ಎ, ದಿನಾಂಕ 31.1.1976, ಸಂಖ್ಯೆ 626ರ ಪುಟ 3 ರಲ್ಲಿ ಪ್ರಕಟವಾಗಿದೆ.)

### III

**1977ರ ತಿದ್ದುಪಡಿ ಮಾಡುವ ಅಧಿನಿಯಮ 20.-** ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973ರ 29 (4) ನೇ ಪ್ರಕರಣವು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿಯ ನಿಧಿಯ ಭಾಗವಾಗಿರುವ ಎಲ್ಲಾ ಹಣಗಳನ್ನು ಮತ್ತು ಸ್ವೀಕೃತಿಗಳನ್ನು ಸರ್ಕಾರದ ಸಾರ್ವಜನಿಕ ಲೆಕ್ಕಪತ್ರಗಳಲ್ಲಿ ಆಗಲಿ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಥವಾ ಭಾರತೀಯ ಸ್ಟೇಟ್ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 ರಲ್ಲಿ ಪರಿಭಾಷಿಸಲಾದಂತೆ ಯಾವುದೇ ಸಂವಾದಿ ಹೊಸ ಬ್ಯಾಂಕಿಂಗ್ ನಲ್ಲಾಗಲಿ ಠೇವಣಿ ಇಡುವುದಕ್ಕೆ ಉಪಬಂಧ ಕಲ್ಪಿಸುತ್ತದೆ. ಅನುಸೂಚಿತ ಬ್ಯಾಂಕುಗಳು ಪಟ್ಟಿಯಲ್ಲಿ ಸೇರಿರುವುದಿಲ್ಲ. ಅನೇಕ ಅನುಸೂಚಿತ ಬ್ಯಾಂಕುಗಳು, ಮಂಡಲಿಗೆ ಬ್ಯಾಂಕಿಂಗ್ ಸೇವೆಗಳನ್ನು ನೀಡಲು ಮುಂದೆ ಬಂದಿರುವುದರಿಂದ, ಅನುಸೂಚಿತ ಬ್ಯಾಂಕುಗಳು ಸಹ ಅದರ ವ್ಯಾಪ್ತಿಯೊಳಗೆ ಸೇರಲು ಸಾಧ್ಯವಾಗುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮದ 29 (4) ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ– IV 2ಎ, ದಿನಾಂಕ 3.2.1977, ಸಂಖ್ಯೆ 16743, ಪುಟ 2 ರಲ್ಲಿ ಪ್ರಕಟವಾಗಿದೆ.)

IV

**1961ರ ತಿದ್ದುಪಡಿ ಮಾಡುವ ಅಧಿನಿಯಮ 45.–** ರಾಜ್ಯದ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯನ್ನು ಈಗ ಸಂಬಂಧಪಟ್ಟ ಸ್ಥಳೀಯ ನಿಕಾಯದ ಮೂಲಕ ನಿರ್ವಹಿಸಿಕೊಂಡು ಬರಲಾಗುತ್ತಿದೆ. ನಗರ ಸ್ಥಳೀಯ ನಿಕಾಯಗಳಿಂದ ನೀರು ಸರಬರಾಜು ನಿರ್ವಹಣೆಯ ಗುಣಮಟ್ಟವು ಒಟ್ಟಾರೆ ಅಸಮರ್ಪಕವಾಗಿದೆ. ನೀರು ಸರಬರಾಜಿನಲ್ಲಿನ ದೋಷಗಳ ನಿವಾರಣೆಗಾಗಿ ಅಥವಾ ಸಂಗ್ರಹಣೆ ಮತ್ತು ವಿತರಣೆಯ ವ್ಯವಸ್ಥೆಗಳ ಮೇಲೆ ಯುಕ್ತ ಮೇಲ್ವಿಚಾರಣೆಗಾಗಿ, ನೀರು ಸರಬರಾಜು / ಚರಂಡಿ ವ್ಯವಸ್ಥೆಗೆ ಸ್ಥಾಪಿಸಲಾದ ಯಂತ್ರೋಪಕರಣ ಮತ್ತು ಅತ್ಯಾಧುನಿಕ ಸಾಧನ ಸಲಕರಣೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ, ಅರ್ಹ ತಾಂತ್ರಿಕ ಸಿಬ್ಬಂದಿಯನ್ನು ಈ ಸ್ಥಳೀಯ ನಿಕಾಯಗಳು ಸಾಮಾನ್ಯವಾಗಿ ಹೊಂದಿರುವುದಿಲ್ಲ. ಬಹುಪಾಲು ಸ್ಥಳೀಯ ನಿಕಾಯಗಳು ನಿರ್ವಹಣೆಯ ವೆಚ್ಚವನ್ನು ಭರಿಸಲು ಸಾಕಷ್ಟು ನೀರಿನ ದರಗಳನ್ನು ವಿಧಿಸಲು ವಿಫಲವಾಗಿವೆ ಮತ್ತು ತತ್ಪರಿಣಾಮವಾಗಿ ನೀರು ಸರಬರಾಜು / ಚರಂಡಿ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡುವುದಕ್ಕೆ ಅವುಗಳು ಸಾಕಷ್ಟು ನಿಧಿಗಳನ್ನು ಹೊಂದಿಲ್ಲ.

ಈ ತೊಂದರೆಗಳ ಹಿನ್ನೆಲೆಯಲ್ಲಿ, ನಗರ ಪ್ರದೇಶಗಳಲ್ಲಿನ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯ ಯೋಜನೆಗಳನ್ನು ತಾಂತ್ರಿಕ ತಿಳಿವಳಿಕೆ ಮತ್ತು ಯೋಜನೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಾಮರ್ಥ್ಯ ಹೊಂದಿರುವಂಥ, ಕರ್ನಾಟಕ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿಗೆ ಹಂತ ಹಂತವಾಗಿ ವಹಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮದ ಉಪಬಂಧಗಳ ಮೇರೆಗೆ, ಮಂಡಲಿಯು, ಸ್ಥಳೀಯ ಪ್ರಾಧಿಕಾರಗಳ ಪರವಾಗಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಯೋಜನೆಗಳನ್ನು ಮತ್ತು ಸರ್ಕಾರವು ತನಗೆ ವಹಿಸಿಕೊಡಬಹುದಾದ ಅಂಥವೇ ಯೋಜನೆಗಳನ್ನು ಸಹ ಕೈಗೊಂಡಿದೆ. ಈ ಅಧಿನಿಯಮವು ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಯೋಜನೆಗಳ ನಿರ್ವಹಣೆಗೆ ಅಥವಾ ಸರಬರಾಜು ಮಾಡಿದ ನೀರಿಗೆ ಸಂಬಂಧಿಸಿದಂತೆ ನೀರಿನ ದರಗಳ ಸಂಗ್ರಹಣೆಗೆ ಈ ಅಧಿನಿಯಮವು ಮಂಡಲಿಗೆ ಅಧಿಕಾರವನ್ನು ಕೊಟ್ಟಿಲ್ಲ. ಆದುದರಿಂದ, ಮಂಡಲಿಗೆ, ಈ ಪ್ರಕಾರ್ಯಗಳನ್ನು ವಹಿಸಿಕೊಡುವುದಕ್ಕೆ ಮತ್ತು ಮಂಡಲಿಯು, ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಗಳನ್ನು ವಹಿಸಿಕೊಳ್ಳುವುದಕ್ಕೆ ಉಪಬಂಧ ಕಲ್ಪಿಸಲು ಅಧಿನಿಯಮಕ್ಕೆ ತಿದ್ದುಪಡಿ ತರುವುದು ಅಗತ್ಯವಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ – IV 2ಎ, ದಿನಾಂಕ 25.3.1981, ಸಂಖ್ಯೆ 194, ಪುಟ 31 ರಲ್ಲಿ ಪ್ರಕಟವಾಗಿದೆ.)

V

**1993ರ ತಿದ್ದುಪಡಿ ಮಾಡುವ ಅಧಿನಿಯಮ 19.–** ಪೌರಾಡಳಿತ ಇಲಾಖೆಯ ನಿರ್ದೇಶಕರನ್ನು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿಯ ನಿರ್ದೇಶಕರಲ್ಲಿ ಒಬ್ಬರನ್ನಾಗಿ ಮಾಡುವುದಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973 ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಆರೋಗ್ಯ ಮತ್ತು ಪೌರಾಡಳಿತ ಇಲಾಖೆಯನ್ನು, ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎಂಬುದಾಗಿ ವಿಭಜನೆ ಮಾಡಿದ ಕಾರಣ ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಕ್ರಮ ಕೈಗೊಳ್ಳಲಾಗಿದೆ.)

ಆದುದರಿಂದ ಈ ವಿಧೇಯಕ.

(ಎಲ್‌ಎ. ವಿಧೇಯಕ 1993ರ 10, ಕಡತ ಲಾ 64 ಎಲ್‌ಜಿಎನ್ 91 ರಿಂದ ಪಡೆಯಲಾಗಿದೆ.)

## 1974ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 25

(1974ರ ಆಗಸ್ಟ್ ಇಪ್ಪತ್ತೊಂದನೇ ದಿವಸದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು).

# [1][ಕರ್ನಾಟಕ][1] ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973

(1974ರ ಆಗಸ್ಟ್ ಹದಿನೈದನೇ ದಿನದಂದು ರಾಷ್ಟ್ರಪತಿಯವರ ಒಪ್ಪಿಗೆಯನ್ನು ಪಡೆದಿದೆ).

(1976ರ 7, 1977ರ 20, 1981ರ 45 ಮತ್ತು 1993ರ 19 ಈ ಅಧಿನಿಯಮಗಳಿಂದ ತಿದ್ದುಪಡಿ ಮಾಡಲಾಗಿದೆ).

[1][ಕರ್ನಾಟಕ][1] ರಾಜ್ಯದ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿಯ ಸ್ಥಾಪನೆಗಾಗಿ ಮತ್ತು ಕುಡಿಯುವ ನೀರಿನ ಮತ್ತು ಚರಂಡಿ ಸೌಲಭ್ಯಗಳನ್ನು ಸಕ್ರಮಗೊಳಿಸುವುದು ಮತ್ತು ಅಭಿವೃದ್ಧಿಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

[1][ಕರ್ನಾಟಕ][1] ರಾಜ್ಯದ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿಯ ಸ್ಥಾಪನೆ ಮತ್ತು ಕುಡಿಯುವ ನೀರಿನ ಮತ್ತು ಚರಂಡಿ ಸೌಲಭ್ಯಗಳನ್ನು ಸಕ್ರಮಗೊಳಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಇಪ್ಪತ್ನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಅಧ್ಯಾಯ- I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು [1][ಕರ್ನಾಟಕ][1] ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973 ಎಂದು ಕರೆಯತಕ್ಕದ್ದು.

(2) ಇದು ಬೆಂಗಳೂರು ನಗರವನ್ನು ಬಿಟ್ಟು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [2][ದಿನಾಂಕ][2] ದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. ಈ ಅಧಿನಿಯಮವು ಅಧಿಸೂಚನೆಯ ಮೂಲಕ 15.10.1974 ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

[1][2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

(1) "ಮಂಡಲಿ" ಎಂದರೆ 4ನೇ ಪ್ರಕರಣದ ಮೇರೆಗೆ ರಚಿಸಲಾದ [1][ಕರ್ನಾಟಕ][1] ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ;

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) "ಕಟ್ಟಡ" ಎಂದರೆ ಯಾವುದೇ ಮನೆ, ಹೊರಮನೆ, ಕೊಟ್ಟಿಗೆ, ಶೌಚಗೃಹ, ಮೂತ್ರಿ, ಷಡ್ಡು, ಗುಡಿಸಲು ಅಥವಾ ಗಾರೆಯ, ಇಟ್ಟಿಗೆಯ, ಮರದ, ಮಣ್ಣಿನ, ಲೋಹದ ಅಥವಾ ಇತರ ವಸ್ತುವಿನಿಂದ ರಚಿತವಾದ ಯಾವುದೇ ಕಟ್ಟಡ, ಆದರೆ ಅದರಲ್ಲಿ ಎತ್ತಿ ಸಾಗಿಸಬಹುದಾದ ಯಾವುದೇ ಆಶ್ರಯವು ಸೇರುವುದಿಲ್ಲ;

(3) "ಉಪವಿಧಿಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಿದ ಉಪವಿಧಿಗಳು;

(4) "ಅಧ್ಯಕ್ಷ" ಎಂದರೆ ಮಂಡಲಿಯ ಅಧ್ಯಕ್ಷ;

(5) "ಸಮಿತಿ" ಎಂದರೆ 14ನೆಯ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಯಾವುದೇ ಸಮಿತಿ;

(6) "ಸಂಪರ್ಕದ ಕೊಳಾಯಿ" ಎಂದರೆ,-

(ಎ) ನೀರು ಸರಬರಾಜಾಗಿರುವ ಆವರಣವು ಮುಖ್ಯ ಕೊಳಾಯಿಯನ್ನು ಹಾಕಿರುವ ಬೀದಿಗೆ ಹೊಂದಿಕೊಂಡಿರುವಲ್ಲಿ, ಮತ್ತು ನೀರೊದಗಿಸುವ ಕೊಳಾಯಿಯ ಬೀದಿಯಲ್ಲಿರುವ ಕಟ್ಟಡದ ಹೊರ ಗೋಡೆಯ ಮುಖಾಂತರವಾಗಿ ಅಲ್ಲದೆ ಅನ್ಯಥಾ ಆ ಆವರಣವನ್ನು ಪ್ರವೇಶಿಸುತ್ತಿದ್ದಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಆ ಮನೆಯಲ್ಲಿ

ನಿಲುಬಿರುಡೆ ಹಾಕಲ್ಪಟ್ಟಿದ್ದು ಅದು ಆ ಬೀದಿಯ ಎಲ್ಲೆಗೆ ಸಾಧ್ಯವಿರುವಷ್ಟು ಮಟ್ಟಿಗೆ ಸಮೀಪದಲ್ಲಿರುವುದಾದರೆ, ಆ ಮುಖ್ಯ ಕೊಳಾಯಿಯ ಮತ್ತು ಆ ನಿಲುಬಿರುಡೆಯ ಮಧ್ಯದಲ್ಲಿರುವಂಥ ಒಂದು ಸರಬರಾಜು ಪೈಪು;

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಮುಖ್ಯ ಕೊಳಾಯಿ ಮತ್ತು ಮುಖ್ಯ ಕೊಳಾಯಿ ಹಾಕಿರುವಂತಹ ಬೀದಿಯ ಎಲ್ಲೆ – ಇವುಗಳ ನಡುವೆ ಹಾಕಿರುವಷ್ಟು ಸರ್ವೀಸ್ ಪೈಪು, ಮತ್ತು ಮುಖ್ಯ ಕೊಳಾಯಿಯೊಂದಿಗೆ ಸರ್ವಿಸ್ ಪೈಪ್ ಸಂಧಿಸುವ ಸ್ಥಳದಲ್ಲಿರುವ ಅಣಸು (ಫೆರೋಲ್) ಕೂಡ ಸೇರಿರುತ್ತದೆ; ಮತ್ತು

(i) ಸಂಪರ್ಕ ಕೊಳಾಯಿಯು ನಿಲುಬಿರುಡೆಯವರೆಗೆ ಇದ್ದು ಅಂತ್ಯವಾಗುವುದಾದರೆ ನಿಲುಬಿರುಡೆಯೂ ಸೇರುತ್ತದೆ; ಮತ್ತು

(ii) ಸಂಪರ್ಕ ಕೊಳಾಯಿಯ ಕೊನೆ ಹಾಗೂ ಮುಖ್ಯ ಕೊಳಾಯಿ ಮಧ್ಯೆ ಜೋಡಿಸಲಾಗಿರುವ ಯಾವುದೇ ನಿಲುಬಿಡುಗಡೆಯೂ ಸೇರುತ್ತದೆ;

(7) "ನಿರ್ದೇಶಕರು" ಎಂದರೆ ಮಂಡಲಿಯ ನಿರ್ದೇಶಕರು ಮತ್ತು ಅದರಲ್ಲಿ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಸೇರಿರುತ್ತಾರೆ;

(8) "ಚರಂಡಿ"ಎಂದರೆ ಇದರಲ್ಲಿ ಒಳಚರಂಡಿ, ಸುರಂಗ, ಅಡಿಕಾಲುವೆ, ಮೋರಿ, ನಾಲೆ ಮತ್ತು ಇದರಲ್ಲಿ ಗ್ರಾಮಸಾರ, ಹೊಲಸು ಪದಾರ್ಥ, ಕೊಳೆ ನೀರು, ನಿರುಪಯುಕ್ತ ನೀರು, ಮಳೆ ನೀರು, ಭೂಮಿಯ ಒಳಪದರಿನ ಮಣ್ಣಿನ ನೀರು–ಇವುಗಳನ್ನು ಸಾಗಿಸಲು ಏರ್ಪಟ್ಟ ಇತರ ಯಾವುದೇ ಸಾಧನವೂ ಸೇರುತ್ತದೆ;

(9) "ಚರಂಡಿ ವ್ಯವಸ್ಥೆ" ಎಂದರೆ, ಗ್ರಾಮಸಾರ ಹೊಲಸು ಪದಾರ್ಥ, ಕೊಳೆ ನೀರು, ನಿರುಪಯುಕ್ತವಾದ ನೀರು, ಮಳೆ ನೀರು ಅಥವಾ ಭೂಮಿಯ ಮಣ್ಣಿನ ಅಡಿಯ ನೀರು ಸಾಗಿಸಲು ಮಾಡಿರುವ ಒಂದು ವ್ಯವಸ್ಥೆ;

(10) "ಕಾರ್ಯ ನಿರ್ವಾಹಕ ಇಂಜನಿಯರು" ಎಂದರೆ ಕಾರ್ಯ ನಿರ್ವಾಹಕ ಇಂಜನಿಯರಾಗಿರಲು ಮಂಡಲಿಯವರಿಂದ ನೇಮಕವಾದ ಅಧಿಕಾರಿ ಮತ್ತು ಇದರಲ್ಲಿ ಕಾರ್ಯ ನಿರ್ವಾಹಕ ಇಂಜನಿಯರ ಅವರ ಕರ್ತವ್ಯಗಳ ಪ್ರಭಾರದಲ್ಲಿಡಲಾದ ಯಾರೇ ಒಬ್ಬ ಹೆಚ್ಚುವರಿ ಅಧಿಕಾರಿಯೂ ಸೇರಿರುತ್ತಾನೆ;

(11) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(12) "ಜಮೀನು" ಎಂಬ ಪದದಲ್ಲಿ ಜಮೀನಿನಿಂದ ಬರುವ ಪ್ರಯೋಜನಗಳು, ಭೂಮಿಗೆ ಜೋಡಿಸಲಾದ ಪದಾರ್ಥಗಳು ಅಥವಾ ಭೂಮಿಗೆ ಜೋಡಿಸಲ್ಪಟ್ಟ ಯಾವುದೇ ಒಂದಕ್ಕೆ ಶಾಶ್ವತವಾಗಿ ಬಂಧಿಸಿರುವ ವಸ್ತುಗಳು ಮತ್ತು ಯಾವುದೇ ಬೀದಿಯ ಸಂಬಂಧದಲ್ಲಿ ಕಾನೂನಿನ ಮೂಲಕ ಸೃಜಿಸಲಾದ ಹಕ್ಕುಗಳೂ ಸೇರುತ್ತವೆ;

(13) "ಲೈಸೆನ್ಸು ಪಡೆದ ಕೊಳಾಯಿಗಾರ" ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೊಳಾಯಿಗಾರನಾಗಿ ಲೈಸೆನ್ಸು ಪಡೆದ ಯಾರೇ ವ್ಯಕ್ತಿ;

(14) "ಸ್ಥಳೀಯ ಪ್ರದೇಶ" ಎಂದರೆ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶ;

(15) "ಸ್ಥಳೀಯ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಅಥವಾ ಮುಂದುವರಿಸಲಾದ ಒಂದು ನಗರಸಭೆ, ಪುರಸಭೆ, ನೈರ್ಮಲ್ಯ ಮಂಡಲಿ ಅಥವಾ ಅಧಿಸೂಚಿತ ಪ್ರದೇಶದ ಸಮಿತಿ;

(16) "ಮುಖ್ಯ ಕೊಳಾಯಿ" ಎಂದರೆ ವೈಯಕ್ತಿಕವಾಗಿ ಬಳಕೆದಾರರಿಗೆ ನೀರು ಸರಬರಾಜಿನ ಕೊಳಾಯಿಗಿಂತ ವಿಭಿನ್ನವಾಗಿ ಸಾಮಾನ್ಯ ನೀರು ಸರಬರಾಜಿನ ಉದ್ದೇಶಕ್ಕಾಗಿ ಹಾಕಲಾದ ಕೊಳಾಯಿ ಮತ್ತು ಅಂಥ ಕೊಳಾಯಿಗೆ ಸಂಬಂಧಿಸಿದಂತೆ ಉಪಯೋಗಿಸಲಾಗಿರುವ ಇತರ ಉಪಕರಣವೂ ಸೇರಿರುತ್ತದೆ;

(17) "ಅನುಭೋಗದಾರ" ಎಂಬ ಪದದ ಅರ್ಥದಲ್ಲಿ–

(ಎ) ಯಾವ ಜಮೀನಿನ ಅಥವಾ ಕಟ್ಟಡದ ಸಂಬಂಧದಲ್ಲಿ ತತ್ಕಾಲದಲ್ಲಿ ಅದರ ಮಾಲೀಕನಿಗೆ ಬಾಡಿಗೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯಮಾಡಲಾಗುತ್ತಿದೆಯೋ ಅಥವಾ ಸಂದಾಯಮಾಡಬೇಕಾಗಿದೆಯೋ ಆ ಜಮೀನು ಅಥವಾ ಕಟ್ಟಡದ ಬಾಡಿಗೆಯನ್ನು ಸಂದಾಯ ಮಾಡುತ್ತಿರುವ ಅಥವಾ ಮಾಡಲು ಹೊಣೆಗಾರನಾಗಿರುವ ಯಾರೇ ಒಬ್ಬ ವ್ಯಕ್ತಿ;

(ಬಿ) ತನ್ನ ಜಮೀನಿನ ಅಥವಾ ಕಟ್ಟಡದ ಅನುಭೋಗದಾರನಾಗಿರುವ ಅಥವಾ ಅನ್ಯಥಾ ಅದನ್ನು ಉಪಯೋಗಿಸುತ್ತಿರುವ ಮಾಲೀಕ;

(ಸಿ) ಯಾವುದೇ ಜಮೀನು ಅಥವಾ ಕಟ್ಟಡವನ್ನು ಬಾಡಿಗೆ ಇಲ್ಲದೇ ಅನುಭವಿಸುತ್ತಿರುವ ಬಾಡಿಗೆದಾರ;

(ಡಿ) ಯಾವುದೇ ಜಮೀನು ಅಥವಾ ಕಟ್ಟಡವನ್ನು ಅನುಭೋಗಿಸುತ್ತಿರುವ ಲೈಸೆನ್ಸುದಾರ; ಮತ್ತು

(ಇ) ಯಾವುದೇ ಜಮೀನು ಅಥವಾ ಕಟ್ಟಡವನ್ನು ಉಪಯೋಗಿಸುವ ಮತ್ತು ಅನುಭೋಗ ಮಾಡುವ ಬಗ್ಗೆ ಮಾಲೀಕನಿಗೆ ಹಾನಿ ಪರಿಹಾರದ ಸಂದಾಯವನ್ನು ಭರ್ತಿಮಾಡಿಕೊಡುತ್ತಿರುವ ಯಾರೇ ವ್ಯಕ್ತಿ

–ಇವರುಗಳೂ ಸೇರುತ್ತಾರೆ;

(18) "ಮಾಲೀಕ" ಎಂಬ ಪದದಲ್ಲಿ ತನಗಾಗಿ ಅಥವಾ ತನ್ನ ಮತ್ತು ಇತರರ ಪರವಾಗಿ ಅಥವಾ ಬೇರೊಬ್ಬ ವ್ಯಕ್ತಿಯ ಏಜೆಂಟನಾಗಿ, ನ್ಯಾಸಧಾರಿಯಾಗಿ, ಪಾಲಕನಾಗಿ ಅಥವಾ ರಿಸೀವರನಾಗಿ (ಸ್ವೀಕರ್ತನಾಗಿ) ತತ್ಕಾಲದಲ್ಲಿ ಯಾವುದೇ ಜಮೀನಿನ ಅಥವಾ ಕಟ್ಟಡದ ಬಾಡಿಗೆಯನ್ನು ಪಡೆಯುತ್ತಿರುವ ಅಥವಾ ಪಡೆಯಲು ಹಕ್ಕುಳ್ಳವನಾದ ಒಬ್ಬ ವ್ಯಕ್ತಿ, ಅಥವಾ ಒಬ್ಬ ಬಾಡಿಗೆದಾರನಿಗೆ ಬಾಡಿಗೆಗಾಗಿ ಕೊಡಲಾಗಿರುವ ಪಕ್ಷದಲ್ಲಿ ಆ ಬಾಡಿಗೆಯನ್ನು ಹಾಗೆ ಪಡೆಯುವ ಅಥವಾ ಪಡೆಯಲು ಹಕ್ಕುಳ್ಳವನಾಗುವ ವ್ಯಕ್ತಿಯು ಸೇರುತ್ತಾನೆ;

(19) "ಆವರಣ" ಎಂದರೆ ಯಾವುದೇ ಜಮೀನು ಅಥವಾ ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದರಲ್ಲಿ ಈ ಮುಂದಿನವು ಸೇರಿರುತ್ತವೆ, ಎಂದರೆ:-

(ಎ) ಒಂದು ಕಟ್ಟಡ ಅಥವಾ ಕಟ್ಟಡದ ಯಾವುದೇ ಭಾಗಕ್ಕೆ ಹೊಂದಿಕೊಂಡಂತಿರುವ ತೋಟ, ಸುತ್ತು ನೆಲ ಮತ್ತು ಹೊರ ಮನೆ-ಯಾವುವಾದರೂ ಇದ್ದರೆ ಅವು;

(ಬಿ) ಒಂದು ಕಟ್ಟಡಕ್ಕೆ ಅಥವಾ ಕಟ್ಟಡದ ಭಾಗಕ್ಕೆ, ಅದನ್ನು ಹೆಚ್ಚು ಪ್ರಯೋಜನಕರವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ ಜೋಡಿಸಲಾದ ಯಾವುದೇ ಜೋಡಣೆಗಳು;

(20) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಲಾದ ವಿನಿಯಮಗಳು.

(21) "ಕಾರ್ಯ ಯೋಜನೆ" ಎಂದರೆ ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆಗೆ ಮತ್ತು ಅದರ ಪ್ರಾಸಂಗಿಕವಾದಂಥ ವಿಷಯಗಳಿಗೆ ಸಂಬಂಧಿಸಿದ ಯಾವುದೇ ಯೋಜನೆ ಮತ್ತು ಇದರಲ್ಲಿ ಮೇಲಿನ ಉದ್ದೇಶಕ್ಕಾಗಿ ಸಿದ್ಧಪಡಿಸಿದ ಕರಡು ಯೋಜನೆಯೂ ಸೇರುತ್ತದೆ;

(22) "ನೀರು ಸರಬರಾಜು ಕೊಳಾಯಿ" ಎಂದರೆ, ಯಾವುದೇ ಆವರಣಕ್ಕೆ ಮುಖ್ಯ ಕೊಳಾಯಿಯಿಂದ ನೀರು ಸರಬರಾಜು ಮಾಡುವ ಸಲುವಾಗಿ ಹಾಕಲಾದ ಮತ್ತು ಮುಖ್ಯ ಕೊಳಾಯಿಯಿಂದ ನೀರಿನ ಒತ್ತಡಕ್ಕೊಳಪಡುವ ಅಥವಾ ಯಾವುದೇ ನಲ್ಲಿಯನ್ನು ಮುಚ್ಚಿರದಿದ್ದರೆ ಆ ಒತ್ತಡಕ್ಕೆ ಒಳಪಡುತ್ತಿದ್ದಂತಹ ಕೊಳಾಯಿಯ ಭಾಗ;

(23) "ಗ್ರಾಮಸಾರ" ಎಂದರೆ ಕಕ್ಕಸು ಮತ್ತು ಶೌಚಗೃಹಗಳು, ಮೂತ್ರಿಗಳು, ರೊಚ್ಚು ಗುಂಡಿಗಳು ಅಥವಾ ಚರಂಡಿಗಳಲ್ಲಿರುವಂಥ ವಸ್ತುಗಳು ಮತ್ತು ಬಚ್ಚಲು, ಸ್ನಾನದ ಮನೆಗಳು, ಕುದುರೆ ಲಾಯಗಳು, ದನದ ಕೊಟ್ಟಿಗೆಗಳು ಮತ್ತು ಅಂಥ ಇತರ ಸ್ಥಳಗಳಿಂದ ಬರುವ ಕೊಳೆ ನೀರು, ಮತ್ತು ಇದರಲ್ಲಿ ಉದ್ಯಮಗಳ ಕೊಳಕು ನೀರು ಎಲ್ಲ ಬಗೆಯ ಕಾರ್ಖಾನೆಗಳಿಂದ ಹರಿದು ಬರುವ ರೊಚ್ಚು ಸಹ ಸೇರುತ್ತದೆ;

(24) "ಒಳ ಚರಂಡಿ" ಎಂದರೆ ಗ್ರಾಮಸಾರ, ಹೊಲಸು ವಸ್ತುಗಳು, ಕೊಳೆ ನೀರು, ನಿರುಪಯುಕ್ತ ನೀರು ಅಥವಾ ಭೂಮಿಯ ಒಳಪದರಿನ ಮಣ್ಣಿನ ನೀರನ್ನು ಸಾಗಿಸುವ ಮುಚ್ಚಿದ ನಾಲೆ;

(25) "ಜೋಪಡಿ" ಎಂದರೆ ನೆರಳು ಅಥವಾ ಆಸರೆಗಾಗಿ ನಿರ್ಮಿಸಲಾದ ಲಘು ಅಥವಾ ತಾತ್ಕಾಲಿಕವಾದ ರಚನೆ;

(26) "ಬೀದಿ" ಎಂದರೆ ಸಾರ್ವಜನಿಕರಿಗೆ ಹಾದು ಹೋಗಲು ಹಕ್ಕಿರುವ ಯಾವುದೇ ಹಾದಿ, ರಸ್ತೆ, ಸಂದಿ, ಚೌಕ, ಅಂಗಳ, ಕಾಲುದಾರಿ, ಗಲ್ಲಿ, ಓಣಿ, ಅದು ಮುಕ್ತ ಮಾರ್ಗವಾಗಿರಲಿ, ಇಲ್ಲದಿರಲಿ ಮತ್ತು ಅದು ನಿರ್ಮಿತವಾಗಿರಲಿ ಇಲ್ಲದಿರಲಿ ಸೇರುತ್ತದೆ, ಮತ್ತು ಯಾವುದೇ ಸೇತುವೆ ಅಥವಾ ಒಡ್ಡು ದಾರಿಯ ಮೇಲಿನ ರಸ್ತೆ ಅಥವಾ ಕಾಲುದಾರಿ ಸಹ ಸೇರುತ್ತದೆ;

(27) "ಸರಬರಾಜು ಕೊಳಾಯಿ" ಎಂದರೆ ಸಂಪರ್ಕ ಕೊಳಾಯಿ ಅಲ್ಲದ ಯಾವುದೇ ನೀರೊದಗಿಸುವ ಕೊಳಾಯಿ;

(28) "ಉದ್ಯಮದ ಕೊಳಕು ನೀರು" ಎಂದರೆ ಉದ್ಯಮ ಆವರಣದಲ್ಲಿ ಯಾವುದೇ ಉದ್ಯಮ ಅಥವಾ ಕೈಗಾರಿಕೆ ನಡೆಯುವಾಗ ಪೂರ್ಣವಾಗಿ ಅಥವಾ ಭಾಗಶಃ ಉತ್ಪಾದಿಸಲ್ಪಟ್ಟ ತನ್ನಲ್ಲಿ ರಾಡಿಗಟ್ಟಿದ ಪದಾರ್ಥಗಳನ್ನು ಹೊಂದಿರುವ ಅಥವಾ ಹೊಂದಿರದ ಯಾವುದೇ ದ್ರವ ಎಂದು ಅರ್ಥ, ಮತ್ತು ಯಾವುದೇ ಉದ್ಯಮ ಆವರಣದ ಸಂಬಂಧದಲ್ಲಿ ಅಂಥ ಆವರಣದಲ್ಲಿ ಕೈಗೊಂಡ ಉದ್ಯಮ ಅಥವಾ ಕೈಗಾರಿಕೆ ನಡೆಸುವಾಗ ಹಾಗೆ ಉತ್ಪಾದಿಸಲಾದ ಮೇಲೆ ಹೇಳಿದ ಯಾವುದೇ ದ್ರವ, ಆದರೆ ಅದರಲ್ಲಿ ಮನೆಯ ಕಶ್ಮಲಸಾರವು ಸೇರುವುದಿಲ್ಲ;

(29) "ಉದ್ಯಮ ಆವರಣ" ಎಂದರೆ ಯಾವುದೇ ಉದ್ಯಮ ಅಥವಾ ಕೈಗಾರಿಕೆಯನ್ನು ನಡೆಸಲು ಉಪಯೋಗಿಸಲಾಗುವ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ಆವರಣ;

(30) "ಉದ್ಯಮ ಕಶ್ಮಲ" ಎಂದರೆ ಯಾವುದೇ ಉದ್ಯಮ ಅಥವಾ ಕೈಗಾರಿಕೆಯಿಂದ ಉಂಟಾದ ಕಶ್ಮಲ;

(31) "ಟ್ರಂಕ್ ಮುಖ್ಯ ಕೊಳಾಯಿ" ಎಂದರೆ ನೀರಿನ ಪೂರೈಕೆಯ ಮೂಲ ಸ್ಥಾನದಿಂದ ನೀರಿನ ಶೋಧಕಾಲಯಕ್ಕೆ ಅಥವಾ ಜಲಾಶಯಕ್ಕೆ ಅಥವಾ ಒಂದು ಶೋಧಕಾಲಯದಿಂದ ಇಲ್ಲವೆ ಜಲಾಶಯದಿಂದ ಮತ್ತೊಂದು ಶೋಧಕಾಲಯ ಅಥವಾ ಜಲಾಶಯಕ್ಕೆ ನೀರನ್ನು ಸಾಗಿಸುವ ಉದ್ದೇಶಕ್ಕಾಗಿ ಅಥವಾ ನೀರಿನ ಪೂರೈಕೆಯ ಪರಿಮಿತಿಯ ಒಂದು ಭಾಗದಿಂದ ಆ ಪರಿಮಿತಿಯ ಮತ್ತೊಂದು ಭಾಗಕ್ಕೆ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಗಿಸುವ ಉದ್ದೇಶಕ್ಕಾಗಿ ಅಥವಾ ನೀರಿನ ಪೂರೈಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವ ಅಥವಾ ತೆಗೆದುಕೊಳ್ಳುವ ಉದ್ದೇಶಕ್ಕಾಗಿ ಕಟ್ಟಿಸಲಾದ "ಮುಖ್ಯ ಕೊಳಾಯಿ";

(32) "ಜಲ ಮಾರ್ಗ" ಎಂಬ ಪದದಲ್ಲಿ ಯಾವುದೇ ನದಿ, ತೊರೆ, ನೈಸರ್ಗಿಕವಾದ ಅಥವಾ ಕೃತ್ರಿಮವಾದ ಕಾಲುವೆ-ಇವುಗಳು ಸೇರುತ್ತವೆ;

(33) "ನೀರಿನ ಜೋಡಣೆಗಳು" ಎಂಬುದರಲ್ಲಿ (ಮುಖ್ಯ ಕೊಳಾಯಿ ಹೊರತಾದ) ಕೊಳಾಯಿಗಳು, ಬಿರಡೆಗಳು, ವಾಲ್ವುಗಳು, ಫೆರೊಲುಗಳು, (ಪಟ್ಟಿಗಳು) ಮೀಟರು (ಮಾಪಕ) ಗಳು, ತೊಟ್ಟಿಗಳು, ಸ್ನಾನದ ಕೊಳಗಳು ಮತ್ತು ನೀರಿನ ಪೂರೈಕೆ ಹಾಗೂ ಉಪಯೋಗದಲ್ಲಿ ಬಳಸಲಾಗುವ ಅಂಥವೇ ಉಪಕರಣಗಳು ಸೇರುತ್ತವೆ;

(34) "ನೀರಿನ ಕಾಮಗಾರಿಗಳು" ಎಂಬುದರಲ್ಲಿ ಎಲ್ಲ ಸರೋವರಗಳು, ಕೆರೆಗಳು, ತೊರೆಗಳು, ನೀರಿನ ತೊಟ್ಟಿಗಳು, ಬುಗ್ಗೆಗಳು, ಪಂಪುಗಳು, ಬಾವಿಗಳು, ಜಲಾಶಯಗಳು, ಮೇಲುಗಾಲುವೆಗಳು, ನೀರಿನ ಲಾರಿಗಳು, ತೂಬುಗಳು, ಮುಖ್ಯ ಕೊಳಾಯಿಗಳು, ಅಡಿಗಾಲುವೆಗಳು, ಹೈಡ್ರೆಂಟುಗಳು, ಸ್ಟ್ಯಾಂಡ್ ಪೈಪುಗಳು ಮತ್ತು ನಾಲೆಗಳು ಮತ್ತು ಇದರಲ್ಲಿ ನೀರನ್ನು ಪೂರೈಸಲು ಉಪಯೋಗಿಸಲಾಗುವ ಎಲ್ಲ ಅಥವಾ ಉಪಯೋಗಿಸಲು ಉದ್ದೇಶಿಸಲಾಗಿರುವ ಜಮೀನುಗಳು, ಕಟ್ಟಡಗಳು, ಯಂತ್ರಗಳು, ಸೇತುವೆಗಳು ಮತ್ತು ವಸ್ತುಗಳು ಸೇರುತ್ತವೆ.][1]

## ಅಧ್ಯಾಯ – II

## ಮಂಡಲಿಯ ರಚನೆ

**3. ಮಂಡಲಿಯನ್ನು ಸೃಜಿಸುವುದು ಮತ್ತು ನಿಗಮಿತಗೊಳಿಸುವುದು.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಕರ್ತವ್ಯವು, ಅದರಲ್ಲೊಳಗೊಂಡ ನಿರ್ಬಂಧಗಳು, ಷರತ್ತುಗಳು ಮತ್ತು ಪರಿಮಿತಿಗೊಳಪಟ್ಟು [1][ಕರ್ನಾಟಕ][1] ನಗರದ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಎಂದು ಕರೆಯಲಾಗುವ ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅಂಥ ಮಂಡಲಿಯು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರ ಹಾಗೂ ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**4. ಮಂಡಲಿಯ ರಚನೆ.–** (1) ಮಂಡಲಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು:–

(ಎ) ಒಬ್ಬ ಅಧ್ಯಕ್ಷ;

(ಬಿ) ಒಬ್ಬ ವ್ಯವಸ್ಥಾಪಕ ನಿರ್ದೇಶಕ;

(ಸಿ) [1][ನಾಲ್ವರು ನಿರ್ದೇಶಕರುಗಳು ಆ ಪೈಕಿ ಒಬ್ಬರು ಪುರಸಭಾ ಆಡಳಿತದ ನಿರ್ದೇಶಕರಾಗಿರತಕ್ಕದ್ದು ಮತ್ತು ಇತರ ಮೂವರು][1] ಸರ್ಕಾರಿ ಸಚಿವಾಲಯದ ಈ ಮುಂದಿನ ಇಲಾಖೆಯನ್ನು ಅನುಕ್ರಮವಾಗಿ ಪ್ರತಿನಿಧಿಸುವ ನಿರ್ದೇಶಕರು ಅಂದರೆ,–

(i) ಹಣಕಾಸು ಇಲಾಖೆ;

(ii) [1][ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ;][1]

1. 1993ರ ಕರ್ನಾಟಕ ಅಧಿನಿಯಮ ಸಂಖ್ಯೆ 19ರ ಮೂಲಕ 18.5.1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಲೋಕೋಪಯೋಗಿ ಇಲಾಖೆ;

(ಡಿ) ಸ್ಥಳೀಯ ಪ್ರಾಧಿಕಾರಗಳನ್ನು ಪ್ರತಿನಿಧಿಸುವ ನಾಲ್ಕು ಜನ ನಿರ್ದೇಶಕರುಗಳು, ಒಬ್ಬೊಬ್ಬರು ಒಂದೊಂದು ರೆವಿನ್ಯೂ ವಿಭಾಗದಿಂದ ಬಂದವರಾಗಿರಬೇಕು;

(ಇ) ಎಂಟು ಜನ ಇತರೇ ನಿರ್ದೇಶಕರು, ಇವರ ಪೈಕಿ ನಾಲ್ಕು ಜನರು ನೀರು ಸರಬರಾಜಿಗೆ ಅಥವಾ ಕೈಗಾರಿಕಾ ಕಶ್ಮಲಗಳ ವಿಲೇವಾರಿ ಅಥವಾ ಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ ಜನಾರೋಗ್ಯ ಇಂಜಿನಿಯರಿಂಗ್‌ನಲ್ಲಿ ವಿಶಾಲ ಅನುಭವವುಳ್ಳ ವ್ಯಕ್ತಿಗಳಾಗಿರತಕ್ಕದ್ದು ಮತ್ತು ಅವರು ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ಸರ್ಕಾರದ ಮಾಲೀಕತ್ವ ಅಥವಾ ನಿಯಂತ್ರಣದಲ್ಲಿರುವ ಒಂದು ನಿಗಮದಲ್ಲಿ ನಿಯೋಜಿತರಾದ ವ್ಯಕ್ತಿಗಳಾಗಿರಬಾರದು.

(2) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ನಿಯಮಿಸಲಾದ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು. ಅವರು ಮತ್ತು ಇತರ ನಿರ್ದೇಶಕರುಗಳನ್ನು ಸರ್ಕಾರವು ನೇಮಿಸತಕ್ಕದ್ದು.

**5. ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ನಿರ್ದೇಶಕರುಗಳ ನೇಮಕಾತಿಯನ್ನು ಅಧಿಸೂಚಿಸತಕ್ಕದ್ದು.–** ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ನಿರ್ದೇಶಕರುಗಳ ನೇಮಕಾತಿಯನ್ನು ಮತ್ತು ಸರ್ಕಾರಿ ಮತ್ತು ಸರ್ಕಾರೇತರ ನಿರ್ದೇಶಕರುಗಳ ನೇಮಕಾತಿಯನ್ನು ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

**6. ನಿರ್ದೇಶಕರ ಪದಾವಧಿ ಮತ್ತು ಸೇವಾ ಷರತ್ತುಗಳು.–**(1) ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರೂ ಸೇರಿದಂತೆ ಎಲ್ಲಾ ನಿರ್ದೇಶಕರು ಸರ್ಕಾರದ ಇಷ್ಟಪರ್ಯಂತ ಅಧಿಕಾರ ಹೊಂದಿರತಕ್ಕದ್ದು.

(2) ಯಾರೇ ನಿರ್ದೇಶಕರು, ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ತನ್ನ ಸ್ಥಾನಕ್ಕೆ ರಾಜಿನಾಮೆ ನೀಡಬಹುದು ಮತ್ತು ಅಂಥ ರಾಜಿನಾಮೆಯನ್ನು ಸರ್ಕಾರವು ಅಂಗೀಕರಿಸಿದಾಗ ಅದು ಜಾರಿಗೆ ಬರುತ್ತದೆ.

(3) ನಿರ್ದೇಶಕರ ಸೇವಾ ಷರತ್ತುಗಳು ನಿಯಮಿಸಬಹುದಾದಂತಿರತಕ್ಕದ್ದು.

(4) ನಿರ್ದೇಶಕರ ಸ್ಥಾನಗಳ ಯಾವುದೇ ಖಾಲಿ ಜಾಗವನ್ನು, 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯುಕ್ತ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಯನ್ನು ನೇಮಕ ಮಾಡುವ ಮೂಲಕ ಸರ್ಕಾರವು ಭರ್ತಿ ಮಾಡಬಹುದು.

**7. ಮಂಡಲಿಯ ನಿರ್ದೇಶಕನಾಗಿ ನೇಮಕವಾಗುವುದಕ್ಕೆ ಅನರ್ಹತೆ.-** (1) ಒಬ್ಬ ವ್ಯಕ್ತಿಯು ಮಂಡಲಿಯ ನಿರ್ದೇಶಕನಾಗಿ ನೇಮಕಗೊಳ್ಳಲು ಮತ್ತು ನಿರ್ದೇಶಕನಾಗಿರಲು, ಅವನು,-

(ಎ) ನೈತಿಕ ಅಧ:ಪತನವನ್ನು ಒಳಗೊಂಡಿರತಕ್ಕ ಅಪರಾಧಕ್ಕಾಗಿ ಶಿಕ್ಷೆಗೊಳಗಾಗಿ, ಅಂಥ ಶಿಕ್ಷೆಯನ್ನು ವಿಪರ್ಯಯಗೊಳಿಸಿಲ್ಲದೇ ಇದ್ದಲ್ಲಿ;

(ಬಿ) ಅನನ್ಮುಕ್ತ ದಿವಾಳಿಯಾಗಿದ್ದಲ್ಲಿ;

(ಸಿ) ಅಸ್ವಸ್ಥಚಿತ್ತನಾಗಿದ್ದಲ್ಲಿ;

(ಡಿ) ಮಂಡಲಿಯ ಒಬ್ಬ ಅಧಿಕಾರಿ ಅಥವಾ ನೌಕರನಾಗಿದ್ದಲ್ಲಿ;

(ಇ) ಸ್ವತಃ ಅಥವಾ ಯಾವುದೇ ಪಾಲುದಾರ, ನಿಯೋಜಕ ಅಥವಾ ನೌಕರನ ಮೂಲಕ ಮಂಡಲಿಯೊಂದಿಗೆ, ಮಂಡಲಿಯ ಮೂಲಕ ಅಥವಾ ಮಂಡಲಿಯ ಪರವಾಗಿ ಯಾವುದೇ ಒಪ್ಪಂದ ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೊಂದಿರುವಲ್ಲಿ;

**(ಎಫ್)** ಮಂಡಲಿಯೊಂದಿಗೆ, ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಒಪ್ಪಂದ ಅಥವಾ ನಿಯೋಜನೆಯಲ್ಲಿ ಷೇರು ಅಥವಾ ಹಿತಾಸಕ್ತಿ ಹೊಂದಿರುವ ಯಾವುದೇ ನಿಗಮಿತ ಕಂಪೆನಿಯ ಒಬ್ಬ ನಿರ್ದೇಶಕ, ಕಾರ್ಯದರ್ಶಿ, ವ್ಯವಸ್ಥಾಪಕ ಅಥವಾ ಇತರೇ ಅಧಿಕಾರಿ ಆಗಿರುವಲ್ಲಿ

-ಅನರ್ಹನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಕೇವಲ ಅವನು ಅಥವಾ ಅವನು ನಿರ್ದೇಶಕನಾಗಿ, ಕಾರ್ಯದರ್ಶಿಯಾಗಿ ಅಥವಾ ಇತರೇ ಅಧಿಕಾರಿಯಾಗಿ ಇರುವಂತಹ ನಿಗಮಿತ ಕಂಪೆನಿಯು;

(i) ಸ್ಥಿರಾಸ್ತಿಯ ಯಾವುದೇ ಮಾರಾಟ, ಖರೀದಿ, ಗುತ್ತಿಗೆ ಅಥವಾ ವಿನಿಮಯದಲ್ಲಿ ಅಥವಾ ಅದರ ಯಾವುದೇ ಒಪ್ಪಂದದಲ್ಲಿ;

(ii) ಸಾಲದ ಹಣಕ್ಕಾಗಿ ಯಾವುದೇ ಒಪ್ಪಂದ ಅಥವಾ ಕೇವಲ ಹಣದ ಪಾವತಿಗಾಗಿ ಯಾವುದೇ ಒಪ್ಪಂದದಲ್ಲಿ;

(iii) ಮಂಡಲಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಜಾಹೀರಾತನ್ನು ಪ್ರಕಟಿಸಿರುವ ಯಾವುದೇ ವಾರ್ತಾಪತ್ರಿಕೆಯಲ್ಲಿ;

(iv) ಅವನು ಅಥವಾ ನಿಗಮಿತ ನಿಕಾಯವು ನಿಯತವಾಗಿ ಮಾರಾಟ ಮಾಡುವ ಯಾವುದೇ ವಸ್ತುವನ್ನು ಮಂಡಲಿಗೆ ಆಗಾಗ್ಗೆ ಮಾರಿದ್ದು ಯಾವುದೇ ಒಂದು ವರ್ಷದಲ್ಲಿ ಅದಕ್ಕೆ ಸಂದಾಯ ಮಾಡಿದ ಪ್ರತಿಫಲವು ಎರಡು ಸಾವಿರ ರೂಪಾಯಿಗಳನ್ನು ಮೀರದಿದ್ದರೆ, ಪಾಲು ಅಥವಾ ಹಿತಾಸಕ್ತಿ ಹೊಂದಿರುವ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣದ (ಇ) ಅಥವಾ (ಎಫ್) ಖಂಡದ ಮೇರೆಗೆ ಅವನನ್ನು ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಅವನು ಆ ಖಂಡಗಳ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವವನೆಂದು ಭಾವಿಸತಕ್ಕದ್ದಲ್ಲ.

(3) ಹಾಗೂ ಯಾರೇ ವ್ಯಕ್ತಿಯನ್ನು (1) ನೆಯ ಉಪಪ್ರಕರಣದ (ಇ) ಖಂಡ ಅಥವಾ (ಎಫ್) ಖಂಡದ ಮೇರೆಗೆ ಅಥವಾ ಮಂಡಲಿಯೊಂದಿಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವಂಥ ಯಾವುದೇ ನಿಗಮಿತ ಕಂಪೆನಿಯ ಷೇರುದಾರನಾಗಿರುವ ಕಾರಣ ಮಾತ್ರದಿಂದಲೇ ಅನರ್ಹಗೊಳಿಸತಕ್ಕದ್ದಲ್ಲ ಅಥವಾ ಆ ನಿಗಮಿತ ಕಂಪೆನಿಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ:

ಪರಂತು, ಅಂಥ ವ್ಯಕ್ತಿಯು ತಾನು ಹೊಂದಿರುವ ಷೇರುಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಸರ್ಕಾರಕ್ಕೆ ಬಹಿರಂಗಪಡಿಸತಕ್ಕದ್ದು.

**ವಿವರಣೆ.-** (1)ನೇ ಉಪಪ್ರಕರಣದ (ಡಿ) ಖಂಡದ ಉದ್ದೇಶಗಳಿಗಾಗಿ ಅಧ್ಯಕ್ಷ ಅಥವಾ ವ್ಯವಸ್ಥಾಪಕ ನಿರ್ದೇಶಕ ಅಥವಾ ಯಾರೇ ನಿರ್ದೇಶಕರನ್ನು ಮಂಡಲಿಯ ಒಬ್ಬ ಅಧಿಕಾರಿ ಅಥವಾ ನೌಕರನನ್ನಾಗಿ ಪರಿಗಣಿಸತಕ್ಕದ್ದಲ್ಲ.

**8. ಅಧ್ಯಕ್ಷ ಮತ್ತು ಇತರ ಅಧಿಕಾರೇತರ ನಿರ್ದೇಶಕರನ್ನು ತೆಗೆದು ಹಾಕುವುದು.-** (1) ಯಾವುದೇ ಸಮಯದಲ್ಲಿ ಸರ್ಕಾರಕ್ಕೆ, ಅಧ್ಯಕ್ಷನು ತನ್ನ ಅಧಿಕಾರ ಸ್ಥಾನಕ್ಕೆ ತಾನು ಅಸಮರ್ಥನಾಗಿರುವನೆಂದು ನಡೆದುಕೊಂಡಿರುವುದಾಗಿ ಅಥವಾ ಅವನನ್ನು ತೆಗೆದುಹಾಕುವುದು ವಿಹಿತವೆಂದೆನಿಸುವಂಥ ಯಾವುದೇ ದುರ್ನಡತೆ ಅಥವಾ ನಿರ್ಲಕ್ಷತೆಯ ತಪ್ಪಿತಸ್ಥ ಎಂದು ಕಂಡುಬಂದಲ್ಲಿ, ಅವನಿಗೆ ಕಾರಣವನ್ನು ತೋರಿಸುವುದಕ್ಕೆ ಸೂಕ್ತ ಅವಕಾಶವನ್ನು ಕೊಟ್ಟ ನಂತರ, ಅಧಿಸೂಚನೆಯ ಮೂಲಕ ಅವನನ್ನು ಆ ಅಧಿಕಾರ ಸ್ಥಾನದಿಂದ ತೆಗೆದುಹಾಕತಕ್ಕದ್ದು.

(2) ಸರ್ಕಾರವು, ಯಾರೇ ಅಧಿಕಾರೇತರ ನಿರ್ದೇಶಕನನ್ನು,-

(ಎ) ಅವನು ಮಂಡಲಿಯ ಅನುಮತಿ ಇಲ್ಲದೆ ಸಂದರ್ಭಾನುಸಾರ ಅಧಿಕಾರಾವಧಿ ಪ್ರಾರಂಭವಾದ ದಿನಾಂಕದಿಂದ ಅಥವಾ ಅವನು ಹಾಜರಿದ್ದ ಕೊನೆಯ ಸಭೆಯ ದಿನಾಂಕದಿಂದ ಲೆಕ್ಕ ಹಾಕಲಾದ ಮೂರು ತಿಂಗಳ ನಿರಂತರ ಅವಧಿಯಲ್ಲಿ ಮಂಡಲಿಯ ಸಭೆಗಳಿಗೆ ಗೈರುಹಾಜರಾಗಿದ್ದರೆ ಅಥವಾ ಆ ಅವಧಿಯೊಳಗೆ ಮೂರು ಸಭೆಗಳಿಗಿಂತ ಕಡಿಮೆ ಸಭೆಗಳನ್ನು ನಡೆಸಿರುವಾಗ, ಆ ಸದರಿ ದಿನಾಂಕದ ಅನಂತರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾಗಿದ್ದರೆ;

(ಬಿ) ಅವನು ಒಬ್ಬ ನ್ಯಾಯವಾದಿಯಾಗಿದ್ದು, ಮಂಡಲಿಯು ಆಸಕ್ತಿ ಹೊಂದಿರುವಂತಹ ಯಾವುದೇ ಸಿವಿಲ್, ಕ್ರಿಮಿನಲ್ ಅಥವಾ ಇತರೇ ಕಾನೂನು ವ್ಯವಹರಣೆಗಳಲ್ಲಿ ಮಂಡಲಿಯಲ್ಲದ ಇತರೇ ವ್ಯಕ್ತಿಯ ಪರವಾಗಿ ಒಬ್ಬ ಪಕ್ಷಕಾರನಾಗಿ ಅಥವಾ ಇತರೆ ವಿಧದಲ್ಲಿ ಕಾರ್ಯ ನಿರ್ವಹಿಸಿದರೆ ಅಥವಾ ಹಾಜರಾಗಿದ್ದರೆ;

(ಸಿ) ಸರ್ಕಾರದ ಅಭಿಪ್ರಾಯದಲ್ಲಿ ಅವನು ಒಬ್ಬ ನಿರ್ದೇಶಕನಾಗಿ ಕಾರ್ಯನಿರ್ವಹಿಸುವುದಕ್ಕೆ ಸರಿಯಾದ ವ್ಯಕ್ತಿಯಲ್ಲವೆಂಬುದಾಗಿ ಅಥವಾ ಅಸಮರ್ಥನಾಗಿದ್ದಾನೆ ಎಂಬುದಾಗಿ ಕಂಡುಬಂದಲ್ಲಿ ಅಥವಾ ನಿರ್ದೇಶಕನಾಗಿ ಅವನ ಸೇವೆಯನ್ನು ಮುಂದುವರಿಸುವುದಕ್ಕೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವಷ್ಟರಮಟ್ಟಿಗೆ ಅವನು ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ,

ಅವನಿಗೆ ಕಾರಣವನ್ನು ತೋರಿಸುವುದಕ್ಕೆ ಸೂಕ್ತ ಅವಕಾಶವನ್ನು ಕೊಟ್ಟ ನಂತರ ಅಧಿಸೂಚನೆಯ ಮೂಲಕ ಅವನನ್ನು ಅಧಿಕಾರ ಸ್ಥಾನದಿಂದ ತೆಗೆದುಹಾಕಬಹುದು.

(3) (2)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಯಾವುದೇ ಉಪಬಂಧಗಳ ಮೇರೆಗೆ ತೆಗೆದುಹಾಕಲಾದ ಒಬ್ಬ ಅಧಿಕಾರೇತರ ನಿರ್ದೇಶಕನು ಸರ್ಕಾರ ಅನ್ಯಥಾ ನಿರ್ದೇಶಿಸಿದ ಹೊರತು ಅವನನ್ನು ತೆಗೆದುಹಾಕಿದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ನಿರ್ದೇಶಕನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(4) (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ತೆಗೆದುಹಾಕಲಾದ ಒಬ್ಬ ಅಧಿಕಾರೇತರ ನಿರ್ದೇಶಕನು ಅನರ್ಹನಾಗಿಲ್ಲವೆಂಬುದಾಗಿ ಸರ್ಕಾರವು ಆದೇಶ ನೀಡಿ ಘೋಷಿಸುವವರೆಗೂ ಅವನು ಪುನರ್ ನೇಮಕಾತಿಗೆ ಅರ್ಹನಾಗತಕ್ಕದ್ದಲ್ಲ.

## ಅಧ್ಯಾಯ - III

## ಮಂಡಲಿಯ ಸಿಬ್ಬಂದಿ ವರ್ಗದ ಅಧಿಕಾರಿಗಳು ಮತ್ತು ಸದಸ್ಯರು

**9. ಮಂಡಲಿಯ ಕಾರ್ಯದರ್ಶಿ, ಮುಖ್ಯ ಇಂಜಿನಿಯರು, ಲೆಕ್ಕಪತ್ರಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಹಾಗೂ ನೌಕರರ ನೇಮಕಾತಿ.-** (1) ಮಂಡಲಿಯು, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಪರಿಗಣಿಸಬಹುದಾದಂತೆ ಒಬ್ಬ ಕಾರ್ಯದರ್ಶಿ, ಮುಖ್ಯ ಇಂಜಿನಿಯರು, ಲೆಕ್ಕಪತ್ರಾಧಿಕಾರಿ ಮತ್ತು ಅಂಥ ಇತರ ಅಧಿಕಾರಿ ಮತ್ತು ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

[1][ಪರಂತು, ಕಾರ್ಯದರ್ಶಿ, ಮುಖ್ಯ ಇಂಜಿನಿಯರ್ ಮತ್ತು ಲೆಕ್ಕಪತ್ರಾಧಿಕಾರಿಗಳ ನೇಮಕಾತಿಯನ್ನು ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ಮಾಡತಕ್ಕದ್ದು:][1]

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮತ್ತೂ ಪರಂತು, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ,-

(ಎ) ವ್ಯವಸ್ಥಾಪಕ ನಿರ್ದೇಶಕರು, ಈ ಅಧಿನಿಯಮದ ಉದ್ದೇಶಕ್ಕಾಗಿ ತನ್ನ ಅಭಿಪ್ರಾಯದಲ್ಲಿ ಅವಶ್ಯಕವಾಗಬಹುದಾದಂತಹ ಮತ್ತು ಯಾವುದೇ ನಿರ್ದಿಷ್ಟ ಕೆಲಸಕ್ಕಾಗಿ ಯಾರ ನಿಯೋಜನೆಯನ್ನು ಮಂಡಲಿಯ ಯಾವುದೇ ನಿರ್ಣಯದ ಮೂಲಕ ನಿಷೇಧಿಸಿಲ್ಲವೋ ಅಂಥ ಅಧಿಕಾರಿಗಳು ಅಥವಾ ನೌಕರರನ್ನು ಮೂರು ತಿಂಗಳು ಮೀರದ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಬಹುದು; ಮತ್ತು

(ಬಿ) (ಎ) ಖಂಡದ ಮೇರೆಗೆ ಮಾಡಲಾದ ಪ್ರತಿಯೊಂದು ನೇಮಕಾತಿಯನ್ನು ವ್ಯವಸ್ಥಾಪಕ ನಿರ್ದೇಶಕನು ಮುಂದಿನ ಸಭೆಯಲ್ಲಿ ಮಂಡಲಿಗೆ ವರದಿ ಮಾಡತಕ್ಕದ್ದು.

**10. ಸಿಬ್ಬಂದಿ ವರ್ಗದ ಪಟ್ಟಿಯನ್ನು ಇಟ್ಟುಕೊಂಡು ಬರುವುದು.-** (1) ಮಂಡಲಿಯು, ಈ ಅಧಿನಿಯಮದ ಉದ್ದೇಶಕ್ಕಾಗಿ ನಿಯೋಜನೆಗೆ ತಾನು ಅವಶ್ಯ ಮತ್ತು ಯುಕ್ತವೆಂದು ಪರಿಗಣಿಸುವ ಅಧಿಕಾರಿಗಳ ಮತ್ತು ನೌಕರರ (ದಿನಂಪ್ರತಿ ಪಾವತಿ ಮಾಡಲಾಗುವ ಅಥವಾ ತಾತ್ಕಾಲಿಕ ಕೆಲಸಕ್ಕಾಗಿ ಯಾರ ಸಂಬಳವನ್ನು ಚಾರ್ಜು ಮಾಡಲಾಗುವುದೋ ಅಂತಹ ನೌಕರರಲ್ಲದ) ಸಂಖ್ಯೆ, ಪದನಾಮ ಮತ್ತು ಶ್ರೇಣಿಯನ್ನು ಸೂಚಿಸುವ ಮತ್ತು ಅಂಥ ಪ್ರತಿಯೊಬ್ಬ ಅಧಿಕಾರಿ ಅಥವಾ ನೌಕರರಿಗೆ ಸಂದಾಯ ಮಾಡಬೇಕಾದ ಮೊತ್ತ ಮತ್ತು ವೇತನ, ಫೀಗಳು ಮತ್ತು ಭತ್ಯೆಗಳ ಸ್ವರೂಪದ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಇಟ್ಟುಕೊಂಡು ಬರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪಟ್ಟಿಯನ್ನು ಪ್ರತಿವರ್ಷ, ಆ ವರ್ಷದ ಮೇ ಒಂದನೇ ತಾರೀಖಿನ ಮೊದಲು ಪರಿಷ್ಕರಿಸತಕ್ಕದ್ದು ಮತ್ತು ಆ ಪಟ್ಟಿಯು ನಿಕಟ ಪೂರ್ವದ ಮಾರ್ಚ್ 31ನೇ ದಿನಾಂಕದಂದು ನಿಯೋಜಿತರಾದ ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಬಗ್ಗೆ ಆ ಉಪಪ್ರಕರಣದಲ್ಲಿ ನಮೂದಿಸಲಾದ ವಿವರಗಳನ್ನು ಒಳಗೊಂಡಿರತಕ್ಕದ್ದು.

11. **ವ್ಯವಸ್ಥಾಪಕ ನಿರ್ದೇಶಕರಿಂದ ನಿಯಂತ್ರಣ.-** ಮಂಡಲಿಯು ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟು, ವ್ಯವಸ್ಥಾಪಕ ನಿರ್ದೇಶಕನು [1][ಮಂಡಲಿಯ ಮುಖ್ಯ ಕಾರ್ಯಕಾರಿ ಅಧಿಕಾರಿಯಾಗಿರುವ ಮತ್ತು ಆಗಿರತಕ್ಕ][1] ಮಂಡಲಿಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರ ಕಾರ್ಯ ಮತ್ತು ವ್ಯವಹರಣೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಹೊಂದಿರತಕ್ಕದ್ದು.

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ- IV

## ಮಂಡಲಿಯ ಕಾರ್ಯಕಲಾಪ ಮತ್ತು ವ್ಯವಹಾರ

12. **ಮಂಡಲಿಯ ಸಭೆ.-** (1) ಮಂಡಲಿಯು, ವಿನಿಯಮಗಳ ಮೂಲಕ ನಿಯಮಿಸಲಾದಂಥ ವೇಳೆ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (2)ನೇ ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, (ಸಭೆಗಳ ಕೋರಂ ಸೇರಿ) ತನ್ನ ಸಭೆಗಳಲ್ಲಿನ ವ್ಯವಹಾರವನ್ನು ನಡೆಸುವುದಕ್ಕೆ ಸಂಬಂಧಿಸಿದಂಥ ಕಾರ್ಯ ವಿಧಾನಗಳ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಮಂಡಲಿಯು ಕಡೇ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(2) ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕನು ಮಂಡಲಿಯ ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(3) ಮಂಡಲಿಯ ಯಾವುದೇ ಸಭೆಗಳಲ್ಲಿನ ಎಲ್ಲಾ ಪ್ರಶ್ನೆಗಳು ಹಾಜರಿದ್ದು ಮತ ನೀಡುವ ನಿರ್ದೇಶಕರ ಬಹುಮತದ ಮೂಲಕ ತೀರ್ಮಾನವಾಗತಕ್ಕದ್ದು ಮತ್ತು ಸಮಸಂಖ್ಯೆಯಲ್ಲಿ ಮತ ಬಂದಾಗ, ಅಧ್ಯಕ್ಷ ಅಥವಾ ಅವನ ಗೈರುಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯವಸ್ಥಾಪಕ ನಿರ್ದೇಶಕನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

13. **ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹಯೋಗ.-** (1) ಮಂಡಲಿಯು ಈ ಅಧಿನಿಯಮದ ಮೇರೆಗೆ ತನ್ನ ಯಾವುದೇ ಪ್ರಕಾರ್ಯಗಳ ನಿರ್ವಹಣೆಯಲ್ಲಿ ತಾನು ಇಚ್ಛಿಸಬಹುದಾದಂಥ ಯಾರೇ ವ್ಯಕ್ತಿಯ ನೆರವು ಅಥವಾ ಸಲಹೆ, ಅದಕ್ಕೆ ಅವಶ್ಯಕವಿದ್ದಲ್ಲಿ, ಮಂಡಲಿಯು ವಿನಿಯಮಗಳಿಂದ ನಿರ್ಣಯಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಆತನ ಸಹಯೋಗ ಪಡೆಯಬಹುದು:

ಪರಂತು, ಆ ರೀತಿ ಸಹಯೋಗ ಪಡೆದ ವ್ಯಕ್ತಿಗಳ ಸಂಖ್ಯೆ ನಾಲ್ಕಕ್ಕಿಂತ ಹೆಚ್ಚಿರಬಾರದು.

(2) ಮಂಡಲಿಯು, ತನ್ನ ಯಾವುದೇ ಸಭೆಯಲ್ಲಿ ಚರ್ಚಿಸಲಾದ ಯಾವುದೇ ವಿಷಯದ ಮೇಲೆ ಯಾರೇ ವ್ಯಕ್ತಿಯನ್ನು ಅವನ ಅಭಿಪ್ರಾಯಗಳನ್ನು ತಿಳಿಸಲು ಆಹ್ವಾನಿಸಬಹುದು.

(3) ಯಾವುದೇ ಉದ್ದೇಶಕ್ಕಾಗಿ (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹಯೋಗ ಹೊಂದಿರುವ ಅಥವಾ (2)ನೇ ಉಪಪ್ರಕರಣದ ಮೇರೆಗೆ ಚರ್ಚಿಸುವುದಕ್ಕಾಗಿ ಆಹ್ವಾನಿಸಲಾದ ವ್ಯಕ್ತಿಯು ಆ ಉದ್ದೇಶಕ್ಕೆ ಸುಸಂಗತವಾಗುವಂತೆ ಮಂಡಲಿಯ ಚರ್ಚೆಯಲ್ಲಿ ಭಾಗವಹಿಸುವ ಅಧಿಕಾರ ಹೊಂದಿರತಕ್ಕದ್ದು. ಆದರೆ ಮಂಡಲಿಯ ಸಭೆಯಲ್ಲಿ ಮತ ನೀಡುವುದಕ್ಕೆ ಹಕ್ಕು ಹೊಂದಿರತಕ್ಕದ್ದಲ್ಲ.

14. **ಸಮಿತಿಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳು.-** ಮಂಡಲಿಯು, ವಿನಿಯಮಗಳಿಂದ ನಿಯಮಿಸಲಾಗಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇರೆಗೆ ಮತ್ತು ಅಂಥ ಕರ್ತವ್ಯಗಳ ನಿರ್ವಹಣೆ ಅಥವಾ ಪ್ರಕಾರ್ಯಗಳ ನೆರವೇರಿಕೆಯ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸುವಷ್ಟು ವ್ಯಕ್ತಿಗಳನ್ನೊಳಗೊಂಡ ಸಮಿತಿಗಳನ್ನು ಕಾಲಕಾಲಕ್ಕೆ ನೇಮಕ ಮಾಡಬಹುದು.

(2) ಅಧ್ಯಕ್ಷ ಅಥವಾ ಈ ಉದ್ದೇಶಕ್ಕಾಗಿ ಆತನು ನಾಮನಿರ್ದೇಶಿಸಬಹುದಾದಂತಹ ಇತರೆ ವ್ಯಕ್ತಿಯು ಸಮಿತಿಯ ಅಧ್ಯಕ್ಷರಾಗಿತಕ್ಕದ್ದು ಮತ್ತು ಸಮಿತಿಯು ತನ್ನ ಸಭೆಯ ಕಾರ್ಯಕಲಾಪಗಳ ಸಂಬಂಧದಲ್ಲಿ ವಿನಿಯಮಗಳಿಂದ ನಿಯಮಿಸಬಹುದಾದಂತಹ ನಿಯಮಗಳನ್ನು ಪಾಲಿಸತಕ್ಕದ್ದು.

(3) ಸಮಿತಿಯ ಎಲ್ಲಾ ವ್ಯವಹರಣೆಗಳು ಮಂಡಲಿಯ ದೃಢೀಕರಣಕ್ಕೆ ಒಳಪಡತಕ್ಕದ್ದು.

15. **ಮಂಡಲಿಯ ಕಾರ್ಯಗಳು ಅನೌಪಚಾರಿಕತೆಯ ಅಥವಾ ಸ್ಥಾನಗಳು ಖಾಲಿ ಇರುವ ಕಾರಣದಿಂದ ಅಸಿಂಧುವಾಗದಿರುವುದು.-** ಮಂಡಲಿಯು ಅಥವಾ ಯಾವುದೇ ಸಮಿತಿಯು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯಗಳು ಅಥವಾ ಕೈಗೊಂಡ ಯಾವುದೇ ವ್ಯವಹರಣೆಗಳು ಕೇವಲ ಈ ಮುಂದಿನ ಕಾರಣಗಳ ಮೇಲೆ ಅಸಿಂಧುವಾಗತಕ್ಕದ್ದಲ್ಲ, ಎಂದರೆ:-

(ಎ) ಮಂಡಲಿಯಲ್ಲಿ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಹುದ್ದೆಗಳಿಂದಾಗಿ ಅಥವಾ ಅದರ ರಚನೆಯಲ್ಲಿನ ದೋಷದಿಂದಾಗಿ; ಅಥವಾ

(ಬಿ) ಅದರ ನಿರ್ದೇಶಕನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ದೋಷದಿಂದ ಅಥವಾ ಕ್ರಮಬಾಹಿರತೆ;

(ಸಿ) ಅಂಥ ಕಾರ್ಯ ಅಥವಾ ವ್ಯವಹರಣೆಗಳಲ್ಲಿ ವಿಷಯದ ಗುಣಗಳಿಗೆ ಭಾದಕವಾಗದಂತಹ ಯಾವುದೇ ದೋಷ ಅಥವಾ ಅನಿಯಮಿತತೆ.

## ಅಧ್ಯಾಯ- V

## ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು

**16. ಮಂಡಲಿಯ ಕಾರ್ಯಗಳು.-** (1) ಈ ಮುಂದಿನ ಸೌಕರ್ಯಗಳನ್ನು ಒದಗಿಸುವಲ್ಲಿ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರಕ್ಕೆ ಸಾಲಗಳು ಮತ್ತು ಮುಂಗಡಗಳ ಮೂಲಕ ಆರ್ಥಿಕ ನೆರವು ನೀಡುವ ಪ್ರಕಾರ್ಯಗಳ ಹೊಣೆಗಾರಿಕೆಯನ್ನು ಮಂಡಲಿಗೆ ವಹಿಸತಕ್ಕದ್ದು, ಎಂದರೆ:-

(i) ನಗರ ಪ್ರದೇಶಗಳಿಗೆ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ; ಮತ್ತು

(ii) ಸರ್ಕಾರವು ಆಗಾಗ್ಗೆ ಮಂಡಲಿಗೆ ವಹಿಸಿಕೊಡುವ ಇತರ ಚಟುವಟಿಕೆಗಳು.

**17. ಮಂಡಲಿಯ ಇತರ ಪ್ರಕಾರ್ಯಗಳು.-** [1][(1)][1] ಮಂಡಲಿಯು ಈ ಮುಂದಿನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ,-

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

(ಎ) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಕೋರಿಕೆ ಮೇರೆಗೆ, [1][ಅಥವಾ ತಾನಾಗಿಯೇ][1],-

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(i) ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆ ಒದಗಿಸುವ ಸಲುವಾಗಿ ಯಾವುದೇ ಸ್ಥಳೀಯ ಪ್ರಾಧಿಕಾರದ ಪ್ರದೇಶದಲ್ಲಿ ಯಾವ ಸ್ವರೂಪದ ಮತ್ತು ಯಾವ ಮಾದರಿಯ ಕಾರ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಬಹುದು ಎಂಬುದರ ಬಗ್ಗೆ ಅನ್ವೇಷಣೆ;

(ii) ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆ ಸೌಕರ್ಯವನ್ನೊದಗಿಸುವ ಉದ್ದೇಶಕ್ಕಾಗಿ ಒಂದಕ್ಕಿಂತ ಹೆಚ್ಚು ಸ್ಥಳೀಯ ಪ್ರಾಧಿಕಾರಿಗಳ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳನ್ನೊಳಗೊಂಡ ಕಾರ್ಯ ಯೋಜನೆಗಳೂ ಸೇರಿದಂತೆ ಕಾರ್ಯ ಯೋಜನೆಗಳನ್ನು ರೂಪಿಸುವುದು ಮತ್ತು ಸಿದ್ಧಪಡಿಸುವುದು;

(iii) ಅಂಥ ಕಾರ್ಯಯೋಜನೆಗಳು ಯಾವುದಕ್ಕೆ ಸಂಬಂಧಿಸಿವೆಯೋ ಆ ಸ್ಥಳೀಯ ಪ್ರಾಧಿಕಾರದ ಪ್ರದೇಶದೊಳಗೆ ಕುಡಿಯುವ ನೀರಿನ ಮತ್ತು ಚರಂಡಿ ವ್ಯವಸ್ಥೆಯ ಸೌಲಭ್ಯಗಳನ್ನು ಏರ್ಪಡಿಸುವುದಕ್ಕಾಗಿ ಹಂತಹಂತವಾಗಿ ಕಾರ್ಯಗತಗೊಳಿಸುವ ಒಂದು ಕಾರ್ಯಕ್ರಮವಾಗಿ ಅಂಥ ಯೋಜನೆಗಳನ್ನು ನಿರ್ವಹಿಸುವುದು;

(iv) [1][ಕುಡಿಯುವ ನೀರಿನ ಸರಬರಾಜು ಮತ್ತು ಚರಂಡಿ ವ್ಯವಸ್ಥೆಯನ್ನು ಪೂರ್ತಿಯಾಗಿ ಅಥವಾ ಭಾಗಶಃ ಮತ್ತು ಸರ್ಕಾರದವರು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಕಾರ್ಯಾಚರಣೆ ಮಾಡುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(v) ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಬಹುದಾಂಥ ಉದ್ಯಮಗಳ ಸಂಬಂಧದಲ್ಲಿ ನೀರಿನ ದರಗಳು, ಶುಲ್ಕಗಳು, ಬಾಡಿಗೆಗಳು ಮತ್ತು ಇತರ ವೆಚ್ಚಗಳನ್ನು ವಿಧಿಸುವುದು ಮತ್ತು ಅವುಗಳ ವಸೂಲಿ ಮಾಡುವುದು.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯ ಕಾಮಗಾರಿಗಳ ಕಾರ್ಯಾಚರಣೆ ಮತ್ತು ಕಾರ್ಯ ನಿರ್ವಹಣೆ ಕುರಿತಂತೆ ಸ್ಥಳೀಯ ಪ್ರಾಧಿಕಾರಗಳಿಗೆ ತಾಂತ್ರಿಕ ಸಹಾಯವನ್ನು ಒದಗಿಸುವುದು ಅಥವಾ ಸಲಹೆ ನೀಡುವುದು;

(ಸಿ) ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಗಳಿಗೆ ಪ್ರಾಸಂಗಿಕವಾದ, ನೀರಿನ ಪರೀಕ್ಷೆ, ನೀರಿನ ಶುದ್ಧೀಕರಣಕ್ಕೆ ಸ್ಥಾವರದ ವಿನ್ಯಾಸ ಮಾಡುವುದು ಮತ್ತು ನಗರ ನೀರು ಸರಬರಾಜು ಹಾಗೂ ಕ್ಷೇತ್ರ ಯೋಜನೆಗಳ ನಿರ್ವಹಣೆಯನ್ನು ಕುರಿತು ಸಂಶೋಧನೆ ನಡೆಸುವುದಕ್ಕೆ ಸಂಬಂಧಿಸಿದ ಕಾರ್ಯ ಯೋಜನೆಗಳನ್ನು ಸ್ಥಾಪಿಸಿ ನಿರ್ವಹಿಸಿಕೊಂಡು ಬರುವುದು;

(ಡಿ) ಮೇಲಿನ ಯಾವುದೇ ಪ್ರಕಾರ್ಯಗಳಿಗೆ, ಪೂರಕವಾದ, ಪ್ರಾಸಂಗಿಕವಾದ ಅಥವಾ ತತ್ಪರಿಣಾಮವಾದ ಯಾವುದೇ ಇತರ ವಿಷಯಗಳು; ಮತ್ತು

(ಇ) ನಿಯಮಿಸಬಹುದಾದಂತಹ ಇತರ ಪ್ರಕಾರ್ಯಗಳು.

[1][(2) ರಾಜ್ಯ ಸರ್ಕಾರದ ಪೂರ್ವ ಅನುಮೋದನೆ ಪಡೆದ ಹೊರತು ಹತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಅಂದಾಜು ವೆಚ್ಚದ ಯಾವುದೇ ಯೋಜನೆಯನ್ನು, ಮಂಡಲಿಯು ಕಾರ್ಯಗತಗೊಳಿಸತಕ್ಕದ್ದಲ್ಲ.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**18. ಮಂಡಲಿಯ ಸಾಮಾನ್ಯ ಅಧಿಕಾರಗಳು.**- ಮಂಡಲಿಯು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ತಾನು ಅವಶ್ಯವೆಂದು ಭಾವಿಸುವಂಥ ಚರ ಮತ್ತು ಸ್ಥಿರಾಸ್ತಿಗಳನ್ನು ಆರ್ಜಿಸುವುದು ಮತ್ತು ಧಾರಣ ಮಾಡುವುದು ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅಂಥ ಯಾವುದೇ ಸ್ವತ್ತನ್ನು ಗುತ್ತಿಗೆಗೆ ಕೊಡುವುದು, ಮಾರಾಟ ಮಾಡುವುದು ಮತ್ತು ಇತರ ರೀತಿಯಲ್ಲಿ ಹಸ್ತಾಂತರಿಸುವುದು;

(ii) ಭೂ ಆರ್ಜನೆ ಅಧಿನಿಯಮ, 1894ರ (1894ರ ಕೇಂದ್ರ ಅಧಿನಿಯಮ I) ಮೇರೆಗೆ ಮಂಡಲಿಯು ತನ್ನ ಯಾವುದೇ ಯೋಜನೆಗಳನ್ನು ಕಾರ್ಯಾನ್ವಯಗೊಳಿಸುವುದಕ್ಕೆ ತನಗೆ ಅಗತ್ಯವಾದ ಯಾವುದೇ ಜಮೀನು ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯನ್ನು ಆರ್ಜಿಸುವುದು;

(iii) ಸಂದರ್ಭಾನುಸಾರ ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಸರ್ಕಾರದಿಂದ ತನಗೆ ವಹಿಸಲಾದ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಅವಶ್ಯಕವೆಂದು ಪರಿಗಣಿಸಬಹುದಾದಂತಹ ಯೋಜನೆಗಳನ್ನು ಸಿದ್ಧಪಡಿಸಲು ಅಥವಾ ಜಾರಿಗೊಳಿಸಲು ರಾಜ್ಯದಲ್ಲಿನ ಯಾವುದೇ ಪ್ರದೇಶದಲ್ಲಿ ವೆಚ್ಚವನ್ನು ಮಾಡುವುದು ಮತ್ತು ಯಾವುದೇ ಕಾಮಗಾರಿಯನ್ನು ಕೈಗೊಳ್ಳುವುದು;

(iv) ಯಾವುದೇ ಕರಾರು ಮಾಡಿಕೊಳ್ಳುವುದು; ಮತ್ತು

(v) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಎಲ್ಲಾ ಅವಶ್ಯಕ ಕೆಲಸಗಳನ್ನು ಮಾಡುವುದು.

## ಅಧ್ಯಾಯ - VI

## ಮಂಡಲಿಯ ಕಾರ್ಯ ಯೋಜನೆಗಳನ್ನು ತನಿಖೆ ಮಾಡುವುದು, ಸಿದ್ಧಪಡಿಸುವುದು ಮತ್ತು [1][ಜಾರಿಗೊಳಿಸುವುದು ಹಾಗೂ ನಿರ್ವಹಿಸುವುದು, ಇತ್ಯಾದಿ.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**19. ಕಾರ್ಯ ಯೋಜನೆಗಳ ತನಿಖೆಯ ವೆಚ್ಚ.**- ಸರ್ಕಾರದ ಅಥವಾ ಒಂದು ಸ್ಥಳೀಯ ಪ್ರಾಧಿಕಾರದ ಕೋರಿಕೆ ಮೇರೆಗೆ ಮಂಡಲಿಯು ಕೈಗೊಂಡ ಯಾವುದೇ ಕಾರ್ಯ ಯೋಜನೆಯ ತನಿಖಾ ವೆಚ್ಚವನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಭರಿಸತಕ್ಕದ್ದು. ಒಂದಕ್ಕಿಂತ ಹೆಚ್ಚು ಸ್ಥಳೀಯ ಪ್ರಾಧಿಕಾರಗಳಿಗಾಗಿ ತನಿಖೆಯನ್ನು ಕೈಗೊಂಡ ಸಂದರ್ಭದಲ್ಲಿ ಅಂಥ ತನಿಖಾ ವೆಚ್ಚವನ್ನು ಮಂಡಲಿಯು ನಿರ್ಧರಿಸಬಹುದಾದಂತಹ ಅನುಪಾತದಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ಭರಿಸತಕ್ಕದ್ದು.

**20. ಮಂಡಲಿಯಿಂದ ಕರಡು ಯೋಜನೆಗಳ ತಯಾರಿಕೆ.**- (1) ಮಂಡಲಿಯು, ತಾನು ಕೈಗೊಂಡ ತನಿಖೆಯು ಮುಗಿದ ಕೂಡಲೆ, ಉಂಟಾಗಬಹುದಾದಂತಹ ವೆಚ್ಚಕ್ಕೆ ಸಂಬಂಧಿಸಿದಂತೆ ಅದು ಕಾರ್ಯ ಯೋಜನೆಗಳ ಅಂದಾಜು ಮತ್ತು ಕಾರ್ಯ ಯೋಜನೆಗೆ ಸಂಬಂಧಿಸಿದ ಪ್ರಮುಖ ವಿವರಗಳನ್ನು ತೋರಿಸುವ ಒಂದು ನಕ್ಷೆಯನ್ನು ಸಹ ತಯಾರಿಸತಕ್ಕದ್ದು ಮತ್ತು ತನಿಖಾ ವರದಿಯೊಂದಿಗೆ ಅದನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳಿಗೆ ಕಳುಹಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳನ್ನು ಸ್ವೀಕರಿಸಿದ ತರುವಾಯ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು, ನಿಯಮಿಸಬಹುದಾದಂತಹ ಅವಧಿಯೊಳಗೆ ಕಾರ್ಯ ಯೋಜನೆಗೆ ವಹಿಸಬಹುದಾದ ವೆಚ್ಚಗಳಿಗೆ ಮತ್ತು ಆ ಯೋಜನೆಯ ವೆಚ್ಚವನ್ನು ವಹಿಸುವುದಕ್ಕೆ ಅದರ ಆರ್ಥಿಕ ಸಾಮರ್ಥ್ಯದ ಸಂಬಂಧವಾಗಿ ತನ್ನ ಪ್ರದೇಶದಲ್ಲಿ ಕಾರ್ಯಗತಗೊಳಿಸುವುದಕ್ಕಾಗಿ ಪ್ರಸ್ತಾವಿಸಲಾದ ಯೋಜನೆಯ ತನಿಖಾ ವರದಿಯನ್ನು ಪರಿಶೀಲಿಸತಕ್ಕದ್ದು. ಸ್ಥಳೀಯ ಪ್ರಾಧಿಕಾರವು ಆ ಯೋಜನೆಯನ್ನು ಕಾರ್ಯಗತಗೊಳಿಸಲು ತೀರ್ಮಾನಿಸಿದಲ್ಲಿ, ನಿಯಮಿಸಬಹುದಾದಂತಹ ಅವಧಿಯೊಳಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಮಂಡಲಿಗೆ ಅಧಿಕಾರ ನೀಡುವ ಒಂದು ನಿರ್ಣಯವನ್ನು ಅಂಗೀಕರಿಸತಕ್ಕದ್ದು. ಆ ರೀತಿ ಸ್ಥಳೀಯ ಪ್ರಾಧಿಕಾರದವರು ಹಾಗೆ ಹೊರಡಿಸಿದ ನಿರ್ಣಯದಲ್ಲಿ ಕಾರ್ಯಯೋಜನೆಯನ್ನು ಕಾರ್ಯಗತಗೊಳಿಸುವ ವೆಚ್ಚವನ್ನು ಮತ್ತು ಅದರ ನಿರ್ವಹಣೆಯನ್ನು ಸ್ಥಳೀಯ ಪ್ರಾಧಿಕಾರವು ವಹಿಸತಕ್ಕದ್ದೆಂದು ಸ್ಪಷ್ಟವಾಗಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಸ್ಥಳೀಯ ಪ್ರಾಧಿಕಾರವು ಯೋಜನೆಯ ವೆಚ್ಚವನ್ನು ಯಾವ ರೀತಿಯಲ್ಲಿ ಮತ್ತು ಯಾವ ಮಾರ್ಗೋಪಾಯದ ಮೂಲಕ ವಹಿಸಲು ಪ್ರಸ್ತಾಪಿಸಿರುವುದೆಂಬುದನ್ನು ಸಹ ಸೂಚಿಸತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿರ್ಣಯ ಮತ್ತು ಇತರ ವಿವರಗಳನ್ನು ಸ್ವೀಕರಿಸಿದ ತರುವಾಯ, ಅದರ, ಎಲ್ಲಾ ಅಂಶಗಳಿಂದಲೂ ಅದರಲ್ಲೂ ಮುಖ್ಯವಾಗಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಆರ್ಥಿಕ ಸಾಮರ್ಥ್ಯದ ದೃಷ್ಟಿಯಿಂದ ಯೋಜನೆಯ ಕಾರ್ಯ ಸಾಧ್ಯತೆಯನ್ನು ಮಂಡಲಿಯು ಸಾಮಾನ್ಯವಾಗಿ ಪರಿಶೀಲಿಸತಕ್ಕದ್ದು. ಅಂಥ ಪರಿಶೀಲನೆಯ ನಂತರ ಮಂಡಲಿಯು ಯೋಜನೆಯ ಕಾರ್ಯ ಸಾಧ್ಯತೆಯನ್ನು ಮನಗಂಡಲ್ಲಿ, ಆಗ ಮಂಡಲಿಯು ಯೋಜನೆಯ ಕರಡನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಯಾವುದೇ ಸ್ಥಳೀಯ ಪ್ರಾಧಿಕಾರವು ಯಾವುದೇ ನಿರ್ಣಯವನ್ನು ಅಂಗೀಕರಿಸಿದ್ದರೆ ಅದು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ಅಂಥ ನಿರ್ಣಯವನ್ನು ಸರ್ಕಾರದ ಪೂರ್ವಾನುಮೋದನೆಯ ಹೊರತು ಅಂಥ ಸ್ಥಳೀಯ ಪ್ರಾಧಿಕಾರವು ರದ್ದುಗೊಳಿಸತಕ್ಕದ್ದಲ್ಲ ಅಥವಾ ಹಿಂತೆಗೆದುಕೊಳ್ಳತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದ್ದಲ್ಲ.

**21. ಸರ್ಕಾರದಿಂದ ಯೋಜನೆಯ ಅನುಮೋದನೆ.-** 20ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕರಡು ಯೋಜನೆಯನ್ನು ಸಲ್ಲಿಸಿದ ಅನಂತರ, ಸಾಧ್ಯವಾದಷ್ಟು ಬೇಗನೆ, ಸರ್ಕಾರವು, ನಿಯಮಿಸಬಹುದಾದಂತಹ ಸಮಯದೊಳಗೆ ಸದರಿ ಕರಡು ಕಾರ್ಯ ಯೋಜನೆಯನ್ನು ಅನುಮೋದಿಸತಕ್ಕದ್ದು ಅಥವಾ ತಾನು ಅವಶ್ಯವೆಂದು ಪರಿಗಣಿಸಿದ ಮಾರ್ಪಾಟುಗಳೊಂದಿಗೆ ಅದನ್ನು ಅನುಮೋದಿಸತಕ್ಕದ್ದು ಅಥವಾ ಕರಡು ಕಾರ್ಯ ಯೋಜನೆಯನ್ನು ಮಾರ್ಪಡಿಸುವುದಕ್ಕಾಗಿ ಅಥವಾ ಈ ಸಂಬಂಧದಲ್ಲಿ ಸರ್ಕಾರದವರು ನೀಡಬಹುದಾದಂತಹ ನಿರ್ದೇಶನಗಳ ಅನುಸಾರ ಹೊಸ ಕರಡು ಕಾರ್ಯ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಅನುಮೋದನೆಗಾಗಿ ಸರ್ಕಾರಕ್ಕೆ ಪುನಃ ಸಲ್ಲಿಸಲು ಮಂಡಲಿಗೆ ಸದರಿ ಕರಡು ಯೋಜನೆಯನ್ನು ಹಿಂದಕ್ಕೆ ಕಳುಹಿಸತಕ್ಕದ್ದು.

**22. ರಾಜಪತ್ರದಲ್ಲಿ ಕರಡು ಯೋಜನೆಯ ಅನುಮೋದನೆಯ ಪ್ರಕಟಣೆ.-** (1) ಸರ್ಕಾರವು ಅಧಿಸೂಚನೆಯ ಮೂಲಕ ಕರಡು ಯೋಜನೆಗೆ ತನ್ನ ಅನುಮೋದನೆಯನ್ನು ಪ್ರಕಟಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ಅಧಿಸೂಚನೆಯು, ಕಾರ್ಯ ಯೋಜನೆಯನ್ನು ವಿಧ್ಯುಕ್ತವಾಗಿ ರಚಿಸಲಾಗಿದೆ ಮತ್ತು ಅನುಮೋದಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ತದನಂತರ, ಕಾರ್ಯ ಯೋಜನೆಯು ಅಂತಿಮವಾಗತಕ್ಕದ್ದು ಮತ್ತು ಇದರಲ್ಲಿ ಇನ್ನು ಮುಂದೆ ಅದನ್ನು " ಅನುಮೋದಿತ ಕಾರ್ಯಯೋಜನೆ" ಎಂದು ಕರೆಯತಕ್ಕದ್ದು.

**23. ಮಂಡಲಿಯು ಅನುಮೋದಿತ ಕಾರ್ಯ ಯೋಜನೆಯನ್ನು ಕಾರ್ಯಗತಗೊಳಿಸುವುದು.-** 22ನೆಯ ಪ್ರಕರಣದ ಮೇರೆಗಿನ ಅಧಿಸೂಚನೆಯು ರಾಜಪತ್ರದಲ್ಲಿ ಪ್ರಕಟವಾದ ಕೂಡಲೇ, ಮಂಡಲಿಯು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ಪ್ರದೇಶದಲ್ಲಿ ಅನುಮೋದಿತ ಕಾರ್ಯ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದು.

**24. ಕಾರ್ಯ ಯೋಜನೆಯ ವೆಚ್ಚದ ವಸೂಲಿ.-** (1) ಮಂಡಲಿಯು ಯಾವುದೇ ಯೋಜನೆಯನ್ನು ತಯಾರಿಸಿ ಕಾರ್ಯಗತಗೊಳಿಸಲು ಭರಿಸಿದ ವೆಚ್ಚವನ್ನು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಮಂಡಲಿಯು ವಹಿಸಿದ ಎಲ್ಲಾ ಪ್ರಾಸಂಗಿಕ ವೆಚ್ಚಗಳನ್ನು ಯಾವ ಸ್ಥಳೀಯ ಪ್ರಾಧಿಕಾರದ ಪರವಾಗಿ ಅಂಥ ಕಾರ್ಯ ಯೋಜನೆಯನ್ನು ಮಂಡಲಿಯು ತಯಾರು ಮಾಡಿತ್ತೋ ಮತ್ತು ಕಾರ್ಯಗತಗೊಳಿಸಿತ್ತೋ ಆ ಪ್ರಾಧಿಕಾರವು ವಹಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಸ್ಥಳೀಯ ಪ್ರಾಧಿಕಾರಗಳಿಗಾಗಿ ಕಾರ್ಯ ಯೋಜನೆಯನ್ನು ತಯಾರಿಸಿ ಕಾರ್ಯಗತಗೊಳಿಸಿದ ಸಂದರ್ಭಗಳಲ್ಲಿ, ಅಂಥ ಯೋಜನೆಯ ವೆಚ್ಚವನ್ನು, ಮಂಡಲಿಯು ನಿರ್ಧರಿಸಬಹುದಾದಂಥ ಪ್ರಮಾಣದಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ವಹಿಸತಕ್ಕದ್ದು.

(2) ಮಂಡಲಿಯು ಯಾವುದೇ ಕಾರ್ಯ ಯೋಜನೆಯ ತನಿಖೆ, ಸಿದ್ಧತೆ ಮತ್ತು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ವಹಿಸಿದ ವೆಚ್ಚವನ್ನು ಮತ್ತು ಅದಕ್ಕೆ ಸಂಬಂಧಿಸಿ ಮಂಡಲಿಯು ವಹಿಸಿದ ಎಲ್ಲಾ ಪ್ರಾಸಂಗಿಕ ವೆಚ್ಚಗಳನ್ನೂ ಮಂಡಲಿಯು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದವರಿಂದ ಆ ಬಗ್ಗೆ ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಷ್ಟು ಕಂತುಗಳಲ್ಲಿ ಮತ್ತು ಅಂಥ ಸಮಯ ಅಥವಾ ಸಮಯಗಳಲ್ಲಿ ವಸೂಲು ಮಾಡುವ ಅವಕಾಶವಿರತಕ್ಕದ್ದು.

(3) ಮಂಡಲಿಗೆ ಕಾರ್ಯಯೋಜನೆಯ ವೆಚ್ಚವನ್ನು ಸಂದಾಯ ಮಾಡಲು ಯಾವುದೇ ಸ್ಥಳೀಯ ಪ್ರಾಧಿಕಾರವು ತಪ್ಪಿದ ಸಂದರ್ಭದಲ್ಲಿ, ಅಂಥ ವೆಚ್ಚವನ್ನು ಅಥವಾ ಬಾಕಿಯಾಗಿ ಉಳಿದಿರುವಷ್ಟು ಭಾಗದ ಮೊತ್ತವನ್ನು ಸರ್ಕಾರವು ಮಂಡಲಿಗೆ ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ನಿಯಮಿಸಬಹುದಾದಂತಹ ರೀತಿಯಲ್ಲಿ, ಮತ್ತು ಅಷ್ಟು ಕರತುಗಳಲ್ಲಿ ಮತ್ತು ಅಂತಹ ಸಮಯ ಅಥವಾ ಸಮಯಗಳಲ್ಲಿ ವಸೂಲು ಮಾಡತಕ್ಕದ್ದು.

(4) ಮಂಡಲಿಯು, ತಾನು ಕೈಗೊಂಡ ಯಾವುದೇ ಕಾರ್ಯಯೋಜನೆ ಅಥವಾ ಯಾವುದೇ ಇತರ ಕಾಮಗಾರಿಯ ತನಿಖೆ, ಸಿದ್ಧತೆ ಮತ್ತು ನಿರ್ವಹಣೆಯ ವೆಚ್ಚದಲ್ಲಿ ನಿಯಮಿಸಬಹುದಾದಂತಹ ದರಗಳಲ್ಲಿ ಮೇಲ್ವಿಚಾರಣೆ ಮತ್ತು ಸೆಂಟೇಜು ಚಾರ್ಜುಗಳನ್ನು ಸೇರಿಸಬಹುದು.

**25. ಯಾವುದೇ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಕಾರ್ಯಗತಗೊಳಿಸಲು ಮಂಡಲಿಗೆ ನಿರ್ದೇಶಿಸುವುದಕ್ಕೆ ಸರ್ಕಾರದ ಅಧಿಕಾರ.-** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನುಗಳಲ್ಲಿ ಏನೇ ಇದ್ದರೂ, ಸರ್ಕಾರವು, ಒಂದು ಸ್ಥಳೀಯ ಪ್ರಾಧಿಕಾರದ ಯಾವುದೇ ಪ್ರದೇಶದಲ್ಲಿ ಯಾವುದೇ ಕಾರ್ಯ ಯೋಜನೆಯನ್ನು ತನಿಖೆ ಮಾಡುವುದು, ಸಿದ್ಧಪಡಿಸುವುದು ಅಥವಾ ಕಾರ್ಯಗತಗೊಳಿಸುವುದು ಸಾರ್ವಜನಿಕ ಹಿತಾಸಕ್ತಿಯಿಂದ ವಿಹಿತ ಎಂದು ಅಭಿಪ್ರಾಯಪಟ್ಟಲ್ಲಿ, ಮತ್ತು 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮಂಡಲಿ ತಯಾರಿಸಿದ

ಯಾವುದೇ ಕಾರ್ಯ ಯೋಜನೆಯ ನಿರ್ವಹಣೆಗೆ ಯಾವುದೇ ನಿರ್ಣಯವನ್ನು ಅಂಗೀಕರಿಸಲು ಯಾವುದೇ ಸ್ಥಳೀಯ ಪ್ರಾಧಿಕಾರವು ಉದ್ದೇಶಪೂರ್ವಕವಾಗಿ ತಿರಸ್ಕರಿಸಿದರೆ ಅಥವಾ ತಪ್ಪಿದ್ದರೆ ಮತ್ತು ಸರ್ಕಾರವು ಅಂಥ ತಿರಸ್ಕಾರಕ್ಕೆ ಅಥವಾ ತಪ್ಪುವಿಕೆಗೆ ಸಾಕಷ್ಟು ಕಾರಣಗಳಿಲ್ಲ ಎಂದು ಅಭಿಪ್ರಾಯಪಟ್ಟರೆ, ಆಗ, ಅದು ಒಂದು ಸ್ಥಳೀಯ ಪ್ರಾಧಿಕಾರದ ಯಾವುದೇ ಪ್ರದೇಶದಲ್ಲಿ ಯಾವುದೇ ಕಾರ್ಯ ಯೋಜನೆಯನ್ನು ತನಿಖೆ ಮಾಡಲು, ಸಿದ್ಧಪಡಿಸಲು ಮತ್ತು ಕಾರ್ಯಗತಗೊಳಿಸಲು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮಂಡಲಿಗೆ ನಿರ್ದೇಶನ ನೀಡಬಹುದು. 19 ರಿಂದ 22ನೇ ಪ್ರಕರಣಗಳವರೆಗಿನ ಉಪಬಂಧಗಳು (ಎರಡೂ ಸೇರಿ) ಸಾಧ್ಯವಾದಷ್ಟು ಮಟ್ಟಿಗೆ ಈ ಪ್ರಕರಣದ ಮೇರೆಗೆ ಮಂಡಲಿಯು ಕಾರ್ಯ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕಾರ್ಯಗತಗೊಳಿಸುವುದಕ್ಕೆ ಅನ್ವಯವಾಗತಕ್ಕದ್ದು. ಈ ಪ್ರಕರಣದ ಮೇರೆಗೆ ಮಂಡಲಿಯು ಕಾರ್ಯ ಯೋಜನೆಯ ತನಿಖೆ, ಸಿದ್ಧತೆ ಮತ್ತು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ವಹಿಸಿದ ವೆಚ್ಚವನ್ನು ಮಂಡಲಿಗೆ ಸರ್ಕಾರದವರಿಂದ ಸಂದಾಯವಾಗತಕ್ಕದ್ದು ಮತ್ತು ಅದನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ಸರ್ಕಾರವು ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಷ್ಟು ಕಂತುಗಳಲ್ಲಿ ಮತ್ತು ಅಂಥ ಸಮಯ ಅಥವಾ ಸಮಯಗಳಲ್ಲಿ ವಸೂಲು ಮಾಡತಕ್ಕದ್ದು.

**26. ಕಾರ್ಯ ಯೋಜನೆಯನ್ನು ತಯಾರಿಸಲು ಅಥವಾ ಕಾರ್ಯಗತಗೊಳಿಸಲು, ಒಪ್ಪಿಕೊಳ್ಳಲು ಅಥವಾ ನಿರಾಕರಿಸಲು ಮಂಡಲಿಗೆ ಇರುವ ಅಧಿಕಾರ.-** (1) ಒಂದು ಸ್ಥಳೀಯ ಪ್ರಾಧಿಕಾರದಿಂದ ಪ್ರಸ್ತಾವಿಸಲಾದ ಕಾರ್ಯ ಯೋಜನೆಗಳ ಸಂಬಂಧದಲ್ಲಿ, ಅಂಥ ಯೋಜನೆಯು ಅವಶ್ಯಕ ಮತ್ತು ಕಾರ್ಯ ಸಾಧ್ಯವೆಂದು ಮಂಡಲಿಯು ಮನಗಂಡಲ್ಲಿ ಆ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಕಾರ್ಯಗತಗೊಳಿಸಲು ಮಂಡಲಿಯು ಒಪ್ಪಿಕೊಳ್ಳಬಹುದು. ಅಂಥ ಯೋಜನೆಯು ಅನಗತ್ಯವೆಂದು ಅಥವಾ ಕಾರ್ಯ ಸಾಧ್ಯವಲ್ಲವೆಂದು ಅಥವಾ ಇತರ ರೀತಿಯಲ್ಲಿ ಅದನ್ನು ಕಾರ್ಯಗತಗೊಳಿಸಲಾಗುವುದಿಲ್ಲವೆಂದು ಮಂಡಲಿಯು ಮನಗಂಡರೆ ಅಂಥ ಕಾರ್ಯ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಅಥವಾ ನಿರ್ವಹಿಸುವುದಕ್ಕೆ ಮಂಡಲಿಯು ನಿರಾಕರಿಸಬಹುದು.

(2) ಯಾವುದೇ ಸ್ಥಳೀಯ ಪ್ರಾಧಿಕಾರವು (1)ನೇ ಉಪಪ್ರಕರಣದ ಮೇರೆಗಿನ ನಿರಾಕರಣೆಯಿಂದ ತಾನು ಬಾಧಿತವಾಗಿರುವುದಾಗಿ ಭಾವಿಸಿದಲ್ಲಿ, ಅಂಥ ನಿರಾಕರಣೆಯ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ, ಸರ್ಕಾರಕ್ಕೆ ಅಪೀಲು ಹೋಗಬಹುದು ಮತ್ತು ಸರ್ಕಾರವು ತಾನು ಸೂಕ್ತವೆಂದು ಪರ್ಯಾಲೋಚಿಸುವಂಥ ಆದೇಶವನ್ನು ಅದರ ಬಗ್ಗೆ ಹೊರಡಿಸಬಹುದು ಮತ್ತು ತದನುಸಾರ ಅಂಥ ಆದೇಶಗಳನ್ನು ಕಾರ್ಯಗತಗೊಳಿಸುವುದು ಮಂಡಲಿಯ ಅಥವಾ ಸ್ಥಳೀಯ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**27. ಸ್ಥಳೀಯ ಪ್ರಾಧಿಕಾರವು ಮಂಡಲಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದು.-** ಯಾವುದೇ ಕಾರ್ಯಯೋಜನೆಗೆ ಸಂಬಂಧಪಡುವ ಸ್ಥಳೀಯ ಪ್ರಾಧಿಕಾರವು ತನ್ನ ಪ್ರಾದೇಶಿಕ ಪರಿಮಿತಿಯೊಳಗೆ, ಯಾವುದೇ ಅನುಮೋದಿತ ಕಾರ್ಯ ಯೋಜನೆಯ ಸಮರ್ಪಕ ನಿರ್ವಹಣೆಗಾಗಿ ಮಂಡಲಿಗೆ ಅವಶ್ಯಕ ನೆರವು ಒದಗಿಸುವುದು ಅದರ ಕರ್ತವ್ಯವಾಗಿರತಕ್ಕದ್ದು.

**28. ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಸ್ಥಳೀಯ ಪ್ರಾಧಿಕಾರದ ಅಧಿಕಾರ.-** ಯಾವುದೇ ಸ್ಥಳೀಯ ಪ್ರಾಧಿಕಾರವು ಮಂಡಲಿಯ ಅನುಮೋದನೆಯಿಲ್ಲದೆ ಯಾವುದೇ ಯೋಜನೆಯನ್ನು ತನಿಖೆ ಮಾಡತಕ್ಕದ್ದಲ್ಲ, ಸಿದ್ಧಪಡಿಸತಕ್ಕದ್ದಲ್ಲ ಮತ್ತು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ಸ್ಥಳೀಯ ಪ್ರಾಧಿಕಾರವು ಕೈಗೊಳ್ಳಲಿರುವ ಕಾರ್ಯ ಯೋಜನೆಯ ವೆಚ್ಚವು ಐವತ್ತು ಸಾವಿರ ರೂಪಾಯಿಗೆ ಮೀರಿದರೆ ಅಥವಾ ಮೀರುವ ಸಂಭವವಿದ್ದರೆ ಅಂಥ ಅನುಮೋದನೆಯನ್ನು ಮಂಡಲಿಯು ನೀಡತಕ್ಕದ್ದಲ್ಲ.

[1][**28ಎ. ಮಂಡಲಿಯಿಂದ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ಇತ್ಯಾದಿ.-** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಆದೇಶದ ಮೂಲಕ ಯಾವುದೇ ಸ್ಥಳೀಯ ಪ್ರದೇಶದಲ್ಲಿ ಯಾವುದೇ ಕಾರ್ಯ ಯೋಜನೆಯನ್ನು ತನಿಖೆ ಮಾಡುವುದು, ಸಿದ್ಧಪಡಿಸುವುದು ಮತ್ತು ಕಾರ್ಯಗತಗೊಳಿಸುವುದು ಮತ್ತು ಅಂಥ ಕಾರ್ಯ ಯೋಜನೆಯೊಂದಿಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳ ಕಾರ್ಯಾಚರಣೆ ಮಾಡುವುದು ಮತ್ತು ನಿರ್ವಹಿಸುವುದು ಸಾರ್ವಜನಿಕ ಹಿತಾಸಕ್ತಿಯಿಂದ ಯುಕ್ತವಾಗಿದೆ ಎಂದು ಅಭಿಪ್ರಾಯಪಟ್ಟಲ್ಲಿ, ಮಂಡಲಿಗೆ, ಆದೇಶದ ಮೂಲಕ ಹಾಗೆ ಮಾಡಲು ನಿರ್ದೇಶಿಸಬಹುದು. ಅಂಥ ಕಾರ್ಯಯೋಜನೆಗೆ ಸಂಬಂಧಿಸಿದ ವೆಚ್ಚವನ್ನು ಮಂಡಲಿಯು ವಹಿಸತಕ್ಕದ್ದು ಮತ್ತು ಅಂಥ ಕಾರ್ಯಯೋಜನೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ಕಾರ್ಯಾಚರಣೆಯನ್ನು ಜಾರಿಗೊಳಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಹಾಗೂ ಅವಶ್ಯವಾದ ನೀರಿನ ತೆರಿಗೆ, ಬಾಡಿಗೆಗಳು, ಶುಲ್ಕಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಚಾರ್ಜುಗಳನ್ನು ಸಂಗ್ರಹಿಸತಕ್ಕದ್ದು.

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ 28ಎ ಯಿಂದ 28ಎಚ್‌ವರೆಗಿನ ಪ್ರಕರಣಗಳನ್ನು ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಸರ್ಕಾರವು ನಿರ್ದಿಷ್ಟಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು,-

(ಎ) ಎಲ್ಲಾ ಸಾರ್ವಜನಿಕ ಜಲಾಶಯಗಳು, ಕೆರೆಗಳು, ತೊಟ್ಟಿಗಳು, ಕಾರಂಜಿಗಳು, ಬಾವಿಗಳು, ಪಂಪುಗಳು, ಪೈಪುಗಳು, ನಲ್ಲಿಗಳು, ಕೊಳವೆಗಳು ಮತ್ತು ಪ್ರಧಾನ ಕಾಮಗಾರಿಗಳು, ಜಲಾಶಯಗಳು, ರೈಸಿಂಗ್ ಮೇಯಿನ್‌ಗಳು, ಸೇತುವೆಗಳು, ಕಟ್ಟಡಗಳು, ಯಂತ್ರ ಸಾಮಗ್ರಿ, ಕಾಮಗಾರಿ ಸಾಮಗ್ರಿಗಳೂ ಸೇರಿದಂತೆ ಇತರ ಕಾಮಗಾರಿಗಳು ಮತ್ತು ಅಂಥ ಸ್ಥಳೀಯ ಪ್ರದೇಶಕ್ಕೆ ನೀರು

ಸರಬರಾಜು ಮತ್ತು ಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಇತರ ವಸ್ತುಗಳು ಮತ್ತು ಅದಕ್ಕೆ ಸಂಬಂಧಿಸಿದ ಅಕ್ಕಪಕ್ಕದ ಮತ್ತು ಅದಕ್ಕೆ ಹೊಂದಿಕೊಂಡಿರುವ (ಖಾಸಗಿ ಸ್ವತ್ತಲ್ಲದ) ಎಲ್ಲ ಭೂಮಿಗಳು; ಮತ್ತು

(ಬಿ) ಅಂಥ ಸ್ಥಳೀಯ ಪ್ರದೇಶದಲ್ಲಿನ ಚರಂಡಿ ವ್ಯವಸ್ಥೆಯ ಸಂಬಂಧದಲ್ಲಿ ನಿರ್ಮಿಸಿದ ಎಲ್ಲಾ ಒಳಚರಂಡಿ ಮತ್ತು ಗ್ರಾಮಸಾರ ವಿಲೇ ಕಾಮಗಾರಿಗಳು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ ನಿಯಂತ್ರಣಕ್ಕೆ ಒಳಪಡತಕ್ಕದ್ದು.

(3) ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳಿಗೆ ಒಳಪಟ್ಟು, ಸರ್ಕಾರವು, ಆದೇಶದ ಮೂಲಕ, ಯಾವುದೇ ಸ್ಥಳೀಯ ಪ್ರಾಧಿಕಾರದವರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಯ ಕಾಮಗಾರಿಯನ್ನು ಮಂಡಲಿಗೆ ವರ್ಗಾಯಿಸಬಹುದು ಮತ್ತು ಹಾಗೆ ವರ್ಗಾವಣೆಯಾದ ಮೇಲೆ, ಅಂಥ ಕಾಮಗಾರಿಯು, ಅದಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳು ಮತ್ತು ಜಮೀನುಗಳು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು.

(4) (ಎ) ಮಂಡಲಿಯವರಿಂದ ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರವರಿಂದ ವಿಧ್ಯುಕ್ತವಾಗಿ ಅನುಮತಿ ಪಡೆದ ಹೊರತು, ಯಾರೇ ವ್ಯಕ್ತಿಯು,-

(i) ಮಂಡಲಿಯಲ್ಲಿ ನಿಹಿತವಾಗಿರುವ ಯಾವ ಜಮೀನಿನ ಉದ್ದಕ್ಕೂ ಕೊಳವೆಯು ಅಥವಾ ಪೈಪು ಅಥವಾ ಒಳಚರಂಡಿ ಹಾದು ಹೋಗುತ್ತದೋ ಆ ಜಮೀನಿನಲ್ಲಿ ಅಥವಾ ನೀರು ಸರಬರಾಜು ಅಥವಾ ಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ಆವರಣವನ್ನು ಪ್ರವೇಶಿಸತಕ್ಕದ್ದಲ್ಲ;

(ii) ಮಂಡಲಿಗೆ ಸೇರಿದ ಯಾವುದೇ ಮುಖ್ಯ ಕೊಳವೆ ಅಥವಾ ಒಳಚರಂಡಿ ಮೇಲೆ ಯಾವುದೇ ಕಟ್ಟಡ, ಬಾವಿ ಅಥವಾ ಇತರ ನಿರ್ಮಾಣ ಅಥವಾ ಬೀದಿಯನ್ನು ನಿರ್ಮಿಸತಕ್ಕದ್ದಲ್ಲ;

(ಬಿ) ಯಾವುದಾದರೂ ಕಟ್ಟಡ, ಬಾವಿ ಅಥವಾ ಇತರ ನಿರ್ಮಾಣಗಳನ್ನು ಹಾಗೆ ನಿರ್ಮಿಸಿದ್ದಲ್ಲಿ ಅಥವಾ ಯಾವುದಾದರೂ ಬೀದಿಯನ್ನು ಹಾಗೆ ರಚಿಸಿದ್ದಲ್ಲಿ, ಕಾರ್ಯ ನಿರ್ವಾಹಕ ಇಂಜಿನಿಯರು ಅದನ್ನು ತೆಗೆಸಿ ಹಾಕಬಹುದು ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರು ತಾನು ಯುಕ್ತವೆಂದು ಭಾವಿಸುವಂಥ, ಬೇರೆ ರೀತಿಯ ಕ್ರಮವನ್ನು ಕೈಗೊಳ್ಳಬಹುದು ಮತ್ತು ಅದಕ್ಕೆ ಭರಿಸಲಾದ ವೆಚ್ಚಗಳನ್ನು (ಎ) ಖಂಡದ (ii)ನೇ ಉಪಖಂಡದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳಿಂದ ಸಂಗ್ರಹಿಸತಕ್ಕದ್ದು.

**28ಬಿ. ಗೃಹ ಬಳಕೆ ಮತ್ತು ಇತರ ಉದ್ದೇಶಗಳಿಗೆ ನೀರು ಸರಬರಾಜು.-** (1) (ಎ) ಕಾರ್ಯನಿರ್ವಾಹಕ ಇಂಜಿನಿಯರು, ಯಾವುದಾದರೂ ಕಟ್ಟಡದ ಮಾಲೀಕ ಅಥವಾ ಅನುಭೋಗದಾರನು ಅರ್ಜಿ ಸಲ್ಲಿಸಿದರೆ, ನಿಯಮಿಸಬಹುದಾದಂತಹ ವಿನಿಯಮಗಳಿಗನುಸಾರವಾಗಿ ಗೃಹ ಬಳಕೆ ಮತ್ತು ಇತರ ಉಪಯೋಗಕ್ಕಾಗಿ ಸದರಿ ಕಟ್ಟಡಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ಏರ್ಪಾಡು ಮಾಡಬಹುದು.

(ಬಿ) ಈ ಅಧಿನಿಯಮದ ಮೇರೆಗೆ ಗೃಹ ಬಳಕೆಯ ಉದ್ದೇಶಗಳಿಗಾಗಿ ಒದಗಿಸಿದ ನೀರಿನ ಸರಬರಾಜಿನಲ್ಲಿ-

(i) ಯಾವುದೇ ವ್ಯಾಪಾರ, ತಯಾರಿಕೆ ಅಥವಾ ವ್ಯವಹಾರಕ್ಕಾಗಿ;

(ii) ತೋಟಗಳಿಗಾಗಿ ಅಥವಾ ನೀರಾವರಿಯ ಉದ್ದೇಶಗಳಿಗಾಗಿ;

(iii) ನಿರ್ಮಾಣದ ಉದ್ದೇಶಗಳಿಗಾಗಿ;

(iv) ಕಾರಂಜಿಗಳು, ಈಜು ಕೊಳಗಳು, ಸಾರ್ವಜನಿಕ ಸ್ನಾನ ಗೃಹಗಳು ಅಥವಾ ಕೊಳಗಳ ಬಗ್ಗೆ ಅಥವಾ ಯಾವುದೇ ಅಲಂಕಾರಿಕ ಅಥವಾ ಯಾಂತ್ರಿಕ ಉದ್ದೇಶಗಳಿಗಾಗಿ;

(v) ಪ್ರಾಣಿಗಳನ್ನು ಅವುಗಳ ಮಾರಾಟಕ್ಕಾಗಿ ಅಥವಾ ಬಾಡಿಗೆಗಾಗಿ ಅಥವಾ ಅವುಗಳ ಉತ್ಪನ್ನದ ಅಥವಾ ಅವುಗಳಿಂದ ತಯಾರಿಸಲಾದ ಯಾವುದೇ ಪದಾರ್ಥದ ಮಾರಾಟಕ್ಕಾಗಿ ಇಟ್ಟ ಸಂದರ್ಭದಲ್ಲಿ ಆ ಪ್ರಾಣಿಗಳಿಗಾಗಿ;

(vi) ಹೋಟೆಲುಗಳು, ಊಟದ ಮನೆಗಳು ಹಾಗೂ ವಸತಿ ನಿವಾಸಿ ಕ್ಲಬ್ಬುಗಳ ನಿವಾಸಿಗಳ ಬಳಕೆ ಹಾಗೂ ಉಪಯೋಗಕ್ಕಾಗಿ;

(vii) ನಾಟಕ ಗೃಹಗಳಿಗೆ ಹಾಗೂ ಚಲನಚಿತ್ರ ಮಂದಿರಗಳಿಗೆ ಹೋಗಿ ಬರುವವರ ಬಳಕೆ ಹಾಗೂ ಉಪಯೋಗಕ್ಕಾಗಿ;

(viii) ಬೀದಿಗಳನ್ನು ರಚಿಸಲು ಅಥವಾ ಅವುಗಳಿಗೆ ನೀರು ಹಾಕುವುದಕ್ಕಾಗಿ; ಅಥವಾ

(ix) ವಾಹನಗಳನ್ನು ಮಾರಾಟಕ್ಕಾಗಿ ಅಥವಾ ಬಾಡಿಗೆಗಾಗಿ ಇಟ್ಟಿರುವಲ್ಲಿ ಅವುಗಳನ್ನು ತೊಳೆಯುವುದಕ್ಕಾಗಿ-

-ಮಾಡುವ ಯಾವುದೇ ಸರಬರಾಜೂ ಸೇರಿರುತ್ತದೆ ಎಂದು ಭಾವಿಸತಕ್ಕದ್ದಲ್ಲ.

(ಸಿ) ಯಾರೇ ವ್ಯಕ್ತಿಯು ಮಂಡಲಿಯ ಲಿಖಿತ ಅನುಮತಿ ಇಲ್ಲದೆ, ಮನೆ ಬಳಕೆಗಾಗಿ ಸರಬರಾಜು ಮಾಡಲಾದ ನೀರನ್ನು ಯಾವುದೇ ಇತರ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡತಕ್ಕದ್ದಲ್ಲ.

(2) ಮಂಡಲಿಯು, ವಿನಿಯಮಗಳ ಮೂಲಕ ನಿಯಮಿಸಲಾಗುವಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ರೀತಿಯಲ್ಲಿ ಮನೆ ಬಳಕೆಯ ಉದ್ದೇಶಕ್ಕಲ್ಲದ ಯಾವುದೇ ಇತರ ಉದ್ದೇಶಗಳಿಗೆ ನೀರು ಸರಬರಾಜು ಮಾಡಬಹುದು.

(3) ಮಂಡಲಿಯು, ವಿನಿಯಮಗಳ ಮೂಲಕ ನಿಯಮಿಸಬಹುದಾದಂತಹ ದರಗಳಿಗೆ ಮತ್ತು ಅವಧಿಗೆ ಸಂಬಂಧಿಸಿದಂತಹ ನಿಬಂಧನೆಯ ಮೇಲೆ ಮತ್ತು ಸರಬರಾಜಿನ ಷರತ್ತುಗಳ ಮೇಲೆ ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ನೀರು ಸರಬರಾಜು ಮಾಡಬಹುದು.

**28ಸಿ. ಮುಖ್ಯ ಕೊಳಾಯಿ, ಇತ್ಯಾದಿಗಳನ್ನು ಹಾಕುವ ಅಧಿಕಾರ.-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಮಂಡಲಿಯು ಯಾವುದೇ ಸ್ಥಳೀಯ ಪ್ರದೇಶದ ಮಿತಿಯೊಳಗೆ ಅಥವಾ ಅದರ ಮಿತಿಯ ಹೊರಗೆ ತಾನು ಅವಶ್ಯವೆಂದು ಭಾವಿಸುವಂಥ, ಮುಖ್ಯ ಕೊಳಾಯಿಗಳು, ಅಥವಾ ಸರ್ವೀಸು ಪೈಪುಗಳನ್ನು ಅಥವಾ ಇತರೇ ನೀರು ಸರಬರಾಜು ಜೋಡಣೆಗಳನ್ನು ಮತ್ತು ಒಳಚರಂಡಿಗಳನ್ನು,-

(ಎ) ಸರ್ಕಾರದಲ್ಲಿ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ಸರ್ಕಾರದ ಮಾಲೀಕತ್ವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಯಾವುದೇ ಬೀದಿಯಲ್ಲಿ ಅಥವಾ ಜಮೀನಿನಲ್ಲಿ ಹಾಕಬಹುದು;

(ಬಿ) ಯಾವುದೊಂದು ಬೀದಿಯ ಭಾಗವಾಗಿರದ ಯಾವುದೇ ಭೂಮಿಯ ಮಾಲೀಕನ ಮತ್ತು ಅನುಭವದಾರನ ಸಮ್ಮತಿಯಿಂದ ಆ ಭೂಮಿಯಲ್ಲಿ ಹಾಕಬಹುದು, ಮತ್ತು ಕಾಲಕಾಲಕ್ಕೆ ತಪಾಸಿಸಬಹುದು, ದುರಸ್ತಿ ಮಾಡಬಹುದು, ಬದಲಾಯಿಸಬಹುದು ಅಥವಾ ನವೀಕರಿಸಬಹುದು ಅಥವಾ ಈ ಪ್ರಕರಣದ ಆಧಾರದ ಮೇಲೆ ಅಥವಾ ಅನ್ಯಥಾ ಹಾಗೆ ಹಾಕಲಾದ ಯಾವುದೇ ಮುಖ್ಯ ಕೊಳಾಯಿಯನ್ನು ಅಥವಾ ಒಳಚರಂಡಿಯನ್ನು ಯಾವುದೇ ಸಮಯದಲ್ಲಿ ತೆಗೆದು ಹಾಕಬಹುದು:

ಪರಂತು, ಈ ಉಪಪ್ರಕರಣದ ಉದ್ದೇಶಕ್ಕಾಗಿ ಅವಶ್ಯವಿರುವ ಸಮ್ಮತಿಯನ್ನು ತಡೆಹಿಡಿದಿದ್ದರೆ ಮಂಡಲಿಯು, ಆ ರೀತಿ ಮಾಡಬೇಕೆಂದಿರುವ ತನ್ನ ಉದ್ದೇಶದ ಒಂದು ಲಿಖಿತ ಸೂಚನೆಯನ್ನು ಜಮೀನಿನ ಮಾಲೀಕ ಅಥವಾ ಅನುಭವದಾರನಿಗೆ ಕೊಟ್ಟ ಅನಂತರ ಅಂತಹ ಸಮ್ಮತಿಯಿಲ್ಲದಿದ್ದರೂ ಆ ಜಮೀನಿನಲ್ಲಿ ಅಥವಾ ಅದರ ಮೇಲೆ ಮುಖ್ಯ ಕೊಳಾಯಿಯನ್ನು ಹಾಕಬಹುದು ಅಥವಾ ಒಳಚರಂಡಿಯನ್ನು ನಿರ್ಮಿಸಬಹುದು.

(2) ಮಂಡಲಿಯು, ಈ ಪ್ರಕರಣದ ಮೇರೆಗಿರುವ ಅಧಿಕಾರಗಳನ್ನು ಚಲಾಯಿಸಿ (1)ನೆಯ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಭೂಮಿಯಲ್ಲಿ ಅಥವಾ ಬೀದಿಯ ಭಾಗವಾಗಿರದ ಯಾವುದೇ ಭೂಮಿಯಲ್ಲಿ ಅದರ ಮೇಲೆ ಅಥವಾ ಮೇಲುಗಡೆ ಯಾವುದೊಂದು ಮುಖ್ಯ ಕೊಳಾಯಿಯನ್ನು ಅಥವಾ ಒಳ ಚರಂಡಿಯನ್ನು ಹಾಕಿದ್ದರೆ ಅಥವಾ ಅಂಥ ಯಾವುದೇ ಭೂಮಿಯಲ್ಲಿ ಅದರ ಮೇಲ್ಗಡೆ ಅಥವಾ ಅದರ ಮೇಲೆ ಹಾಕಲಾದ ಮುಖ್ಯ ಕೊಳಾಯಿಯನ್ನು ತಪಾಸಿಸಿದರೆ, ದುರಸ್ತಿ ಮಾಡಿದರೆ ಅಥವಾ ಬದಲಾಯಿಸಿದರೆ, ನವೀಕರಿಸಿದರೆ, ತೆಗೆದು ಹಾಕಿದರೆ ಮಂಡಲಿಯು, ಆ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಸದರಿ ಕೊಳಾಯಿಯನ್ನು ತಪಾಸಿಸಿದ, ಹಾಕಿದ, ದುರಸ್ತಿ ಮಾಡಿದ, ಬದಲಾಯಿಸಿದ, ನವೀಕರಿಸಿದ ಅಥವಾ ತೆಗೆದು ಹಾಕಲಾದ ಕಾರಣದಿಂದಾಗಿ ಆ ಭೂಮಿಗೆ ಉಂಟಾದ ಯಾವುದೇ ನಷ್ಟ ಅಥವಾ ಪ್ರಾಪ್ತವಾದ ಹಾನಿಯ ಬಗ್ಗೆ ಪರಿಹಾರವನ್ನು ಕೊಡತಕ್ಕದ್ದು.

(3) (ಎ) ಯಾವುದಾದರೂ ಆವರಣಕ್ಕೆ ನೀರು ಸರಬರಾಜು ಮಾಡಲು ಅಥವಾ ಅದರಿಂದ ಚರಂಡಿ ನೀರನ್ನು ಹೊರ ಸಾಗಿಸಲು ಯಾವುದೇ ಪೈಪು ಅಥವಾ ಚರಂಡಿಯನ್ನು ಇನ್ನೊಬ್ಬ ವ್ಯಕ್ತಿಯ ಸ್ಥಿರಾಸ್ತಿಯ ಮೇಲೆ, ಕೆಳಗೆ, ಅದರ ಉದ್ದಕ್ಕೂ ಅಥವಾ ಅಡ್ಡಲಾಗಿ ಹಾಕುವುದು ಏಕಮಾತ್ರ ಅಥವಾ ಅತ್ಯಂತ ಅನುಕೂಲವಾದ ಮಾರ್ಗವೆಂದು ಮಂಡಲಿಗೆ ಕಂಡುಬಂದರೆ, ಮಂಡಲಿಯು, ಲಿಖಿತ ಆದೇಶವನ್ನು ಹೊರಡಿಸುವುದರ ಮೂಲಕ ಅಂತಹ ಪೈಪುಗಳು ಅಥವಾ ಚರಂಡಿಯನ್ನು ಅಂತಹ ಸ್ಥಿರಾಸ್ತಿಯ ಮೇಲೆ, ಕೆಳಗೆ, ಉದ್ದಕ್ಕೆ ಅಥವಾ ಅಡ್ಡಲಾಗಿ ಹಾಕಲು ಅಥವಾ ಒಯ್ಯಲು ಆ ಆವರಣದ ಮಾಲೀಕನಿಗೆ ಅಧಿಕಾರ ಕೊಡಬಹುದು:

ಪರಂತು, ಅಂತಹ ಯಾವುದಾದರೂ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ಆ ಆದೇಶವನ್ನು ಏಕೆ ಹೊರಡಿಸಬಾರದೆಂಬುದಕ್ಕೆ ವಿನಿಯಮಗಳಿಂದ ನಿಯಮಿಸಬಹುದಾದಂತಹ ಕಾಲದೊಳಗೆ ಕಾರಣವನ್ನು ತೋರಿಸಲು ಸ್ಥಿರ ಸ್ವತ್ತಿನ ಮಾಲೀಕನಿಗೆ ಮಂಡಲಿಯು ಸೂಕ್ತ ಅವಕಾಶವನ್ನು ಕೊಡತಕ್ಕದ್ದು:

ಮತ್ತೂ ಪರಂತೂ, ಆವರಣದ ಮಾಲೀಕನು ಯಾವ ಸ್ವತ್ತಿನ ಮೇಲೆ, ಕೆಳಗೆ, ಉದ್ದಕ್ಕೆ ಅಥವಾ ಅಡ್ಡಲಾಗಿ ಅಂತಹ ಯಾವುದೇ ಪೈಪನ್ನು ಹಾಕುವ ಅಥವಾ ಒಳ ಚರಂಡಿಯನ್ನು ನಿರ್ಮಿಸುವ ಉದ್ದೇಶದಿಂದ ಅಂತಹ ಸ್ವತ್ತನ್ನು ಉಪಯೋಗಿಸುವ ಹಕ್ಕನ್ನು ಬಿಟ್ಟು ಇತರ ಯಾವ ಹಕ್ಕನ್ನೂ ಆರ್ಜಿಸತಕ್ಕದ್ದಲ್ಲ.

(ಬಿ) (ಎ) ಖಂಡದ ಮೇರೆಗೆ ಒಂದು ಆದೇಶವನ್ನು ಹೊರಡಿಸಿದ ಮೇಲೆ, ಆವರಣದ ಮಾಲೀಕನು ಸ್ಥಿರ ಸ್ವತ್ತಿನ ಮೇಲೆ, ಕೆಳಗೆ, ಉದ್ದಕ್ಕೆ ಅಥವಾ ಅಡ್ಡಲಾಗಿ ಪೈಪನ್ನು ಹಾಕುವ ಅಥವಾ ಒಳಚರಂಡಿಯನ್ನು ನಿರ್ಮಿಸುವ ಅಥವಾ ಅದನ್ನು ದುರಸ್ತಿ ಮಾಡುವ ತನ್ನ ಉದ್ದೇಶವನ್ನು ಯುಕ್ತ ನೋಟೀಸು ನೀಡಿದ ನಂತರ ಹಾಗೆ ಮಾಡಲು ಸೂರ್ಯೋದಯದಿಂದ ಸೂರ್ಯಾಸ್ತದ ನಡುವಣ ಯಾವುದೇ ಸಮಯದಲ್ಲಿ ಸಹಾಯಕರೊಡನೆ ಮತ್ತು ಕೆಲಸಗಾರರೊಡನೆ ಆ ಸ್ಥಿರಾಸ್ತಿಯನ್ನು ಪ್ರವೇಶಿಸಬಹುದು.

(ಸಿ) ಈ ಉಪಪ್ರಕರಣದ ಮೇರೆಗೆ ಒಂದು ಪೈಪನ್ನು ಹಾಕುವಾಗ ಅಥವಾ ಒಳಚರಂಡಿಯನ್ನು ನಿರ್ಮಿಸುವಾಗ ಸ್ಥಿರ ಸ್ವತ್ತಿಗೆ ಸಾಧ್ಯವಾದಷ್ಟು ಕಡಿಮೆ ಹಾನಿಯಾಗುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಆವರಣದ ಮಾಲೀಕನು,-

(i) ಸಾಧ್ಯವಾದಷ್ಟು ವಿಳಂಬವಿಲ್ಲದೆ ಪೈಪನ್ನು ಹಾಕಿಸಲು ಅಥವಾ ಒಳಚರಂಡಿಯನ್ನು ನಿರ್ಮಿಸಲು ವ್ಯವಸ್ಥೆ ಮಾಡತಕ್ಕದ್ದು;

(ii) ಅಂಥ ಪೈಪನ್ನು ಹಾಕಿಸುವ ಅಥವಾ ಒಳ ಚರಂಡಿಯನ್ನು ನಿರ್ಮಿಸುವ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಅಗೆದಿದ್ದರೆ, ಒಡೆದಿದ್ದರೆ ಅಥವಾ ಮಣ್ಣನ್ನು ತೆಗೆದು ಹಾಕಿದ್ದರೆ ಅಂಥ ಭೂಮಿಯನ್ನು ತನ್ನ ಸ್ವಂತ ವೆಚ್ಚದಲ್ಲಿ ತುಂಬತಕ್ಕದ್ದು ಪೂರ್ವ ಸ್ಥಿತಿಯಲ್ಲಿರಿಸತಕ್ಕದ್ದು ಮತ್ತು ಸರಿಪಡಿಸತಕ್ಕದ್ದು;

(iii) ಅಂಥ ಪೈಪನ್ನು ಹಾಕುವ ಅಥವಾ ಒಳ ಚರಂಡಿಯನ್ನು ನಿರ್ಮಿಸುವ ಕಾರಣದಿಂದಾಗಿ ಹಾನಿಯನ್ನು ಹೊಂದಿದ ಸ್ಥಿರಸ್ವತ್ತಿನ ಮಾಲೀಕನಿಗೆ ಮತ್ತು ಇತರ ಯಾರೇ ವ್ಯಕ್ತಿಗೆ ಪರಿಹಾರ ನೀಡತಕ್ಕದ್ದು.

(ಡಿ) ಯಾವುದೇ ಸ್ಥಿರ ಸ್ವತ್ತಿನ ಮೇಲೆ ಯಾವುದೇ ಕಟ್ಟಡವನ್ನು ಕಟ್ಟಿಲ್ಲದೇ ಇರುವಾಗ, ಅದರ ಮೇಲೆ, ಕೆಳಗೆ, ಉದ್ದಕ್ಕೂ ಅಥವಾ ಅಡ್ಡಲಾಗಿ ಈ ಉಪಪ್ರಕರಣದ ಮೇರೆಗೆ ಪೈಪನ್ನು ಹಾಕಲಾಗಿದೆಯೋ ಅಥವಾ ಒಳಚರಂಡಿಯನ್ನು ನಿರ್ಮಿಸಲಾಗಿದೆಯೋ ಅಂತಹ ಸ್ವತ್ತಿನ ಮಾಲೀಕನು ಅದರ ಮೇಲೆ ಯಾವುದಾದರೂ ಕಟ್ಟಡವನ್ನು ಕಟ್ಟಲು ಅಪೇಕ್ಷಿಸಿದರೆ, ಮಂಡಲಿಯು ತಾನು ಅನುಮೋದಿಸುವ ರೀತಿಯಲ್ಲಿ ಪೈಪು ಅಥವಾ ಒಳಚರಂಡಿಯನ್ನು ಮುಚ್ಚಲು, ತೆಗೆದು ಹಾಕಲು ಅಥವಾ ಪಲ್ಲಟಗೊಳಿಸಲು ಮತ್ತು ಪೈಪು ಅಥವಾ ಒಳ ಚರಂಡಿಯನ್ನು ಅದರ ಮೇಲೆ, ಕೆಳಗೆ, ಉದ್ದಕ್ಕೆ ಅಥವಾ ಅಡ್ಡಲಾಗಿ ನಿರ್ಮಿಸದಿದ್ದರೆ ಹೇಗೋ ಹಾಗೆ ಆ ಸ್ಥಿರ ಸ್ವತ್ತನ್ನು ತುಂಬತಕ್ಕದ್ದು, ಪೂರ್ವ ಸ್ಥಿತಿಗೆ ತರತಕ್ಕದ್ದು ಮತ್ತು ಸರಿಪಡಿಸತಕ್ಕದ್ದೆಂದು ಲಿಖಿತ ನೋಟೀಸಿನ ಮೂಲಕ ಆವರಣದ ಮಾಲೀಕನಿಗೆ ಅಗತ್ಯಪಡಿಸತಕ್ಕದ್ದು:

ಪರಂತು, ಮಂಡಲಿಯ ಅಭಿಪ್ರಾಯದಲ್ಲಿ, ಉದ್ದೇಶಿಸಲಾಗಿರುವ ಕಟ್ಟಡದ ನಿರ್ಮಾಣಕ್ಕೆ ಅಥವಾ ಅದನ್ನು ಸುರಕ್ಷಿತವಾಗಿ ಅನುಭವಿಸುವುದಕ್ಕೆ ಸದರಿ ಪೈಪನ್ನು ಅಥವಾ ಒಳ ಚರಂಡಿಯನ್ನು ಮುಚ್ಚುವುದು, ತೆಗೆದು ಹಾಕುವುದು ಅಥವಾ ಮತ್ತೊಂದು ಕಡೆಗೆ ವರ್ಗಾಯಿಸುವುದು ಅವಶ್ಯಕ ಅಥವಾ ವಿಹಿತ ಎಂದು ಕಂಡುಬಂದ ಹೊರತು, ಯಾವುದೇ ಅಂತಹ ಕೋರಿಕೆಯನ್ನು ಮಾಡತಕ್ಕದ್ದಲ್ಲ.

**28ಡಿ. ಮೀಟರುಗಳು, ಇತ್ಯಾದಿಗಳನ್ನು ಒದಗಿಸುವ ಅಧಿಕಾರ.-** (1) ಮಂಡಲಿಯ ನೀರಿನ ಕಾಮಗಾರಿಯೊಂದಿಗೆ ಸಂಪರ್ಕ ಪಡೆದ ಆವರಣಕ್ಕೆ ಮಂಡಲಿಯು, ಒಂದು ನೀರಿನ ಮೀಟರನ್ನು ಒದಗಿಸಬಹುದು ಮತ್ತು ಅದನ್ನು ನೀರಿನ ಸರ್ವೀಸ್ ಪೈಪಿಗೆ ಜೋಡಿಸಬಹುದು.

(2) ಮೀಟರುಗಳ ಬೆಲೆ, ಅವುಗಳನ್ನು ಸ್ಥಾಪಿಸಲು ತಗಲುವ ವೆಚ್ಚ, ಮೀಟರುಗಳ ಬಳಕೆಗಾಗಿ ಸಂದಾಯ ಮಾಡಬೇಕಾದ ಬಾಡಿಗೆ ಇವುಗಳು ವಿನಿಯಮಗಳಿಂದ ನಿಯಮಿಸಬಹುದಾದಂತೆ ಇರತಕ್ಕದ್ದು ಮತ್ತು ಆವರಣಗಳ ಮಾಲೀಕರು ಅದನ್ನು ಪಾವತಿ ಮಾಡತಕ್ಕದ್ದು.

(3) ಮೀಟರುಗಳ ಬಳಕೆ, ನಿರ್ವಹಣೆ ಮತ್ತು ಪರೀಕ್ಷಾ ವಿಧಾನವು ಈ ಸಂಬಂಧದಲ್ಲಿ ಮಾಡಲಾದ ವಿನಿಯಮಗಳಿಂದ ನಿಯಂತ್ರಿತವಾಗತಕ್ಕದ್ದು.

(4) ಮೀಟರಿನ ಮೂಲಕ ನೀರನ್ನು ಸರಬರಾಜು ಮಾಡಿದಾಗಲೆಲ್ಲಾ ಮೀಟರಿನಲ್ಲಿ ಸೂಚಿತವಾಗಿರುವ ಪ್ರಮಾಣದ ನೀರನ್ನು ಬಳಸಲಾಗಿದೆ ಎಂದು, ಆ ಬಗ್ಗೆ ತದ್ವಿರುದ್ಧವಾಗಿ ರುಜುವಾತಾಗುವವರೆಗೆ ಭಾವಿಸತಕ್ಕದ್ದು.

**28ಇ. ಆವರಣಗಳನ್ನು ಪ್ರವೇಶಿಸುವುದು ಮತ್ತು ನೀರು ಸರಬರಾಜನ್ನು ತೆಗೆದು ಹಾಕುವುದು ಇತ್ಯಾದಿ ಅಧಿಕಾರ.-** (1) ಕಾರ್ಯ ನಿರ್ವಾಹಕ ಇಂಜಿನಿಯರು ಅಥವಾ ಮಂಡಲಿಯಿಂದ ಪ್ರಾಧಿಕಾರ ಪಡೆದ ಇತರ ಯಾರೇ ಅಧಿಕಾರಿಯು, ಮಂಡಲಿಯಿಂದ ಸರಬರಾಜು ಮಾಡಲಾದ ನೀರು ದುರುಪಯೋಗವಾಗುತ್ತಿದೆಯೋ ಅಥವಾ ದುರ್ವ್ಯಯವಾಗುತ್ತಿದೆಯೋ ಎಂದು ಪರೀಕ್ಷಿಸುವುದಕ್ಕಾಗಿ ಅಂಥ ನೀರು ಸರಬರಾಜಾಗುವ ಆವರಣಗಳನ್ನು ಸೂರ್ಯೋದಯದಿಂದ ಸೂರ್ಯಾಸ್ತಮದ ಅವಧಿಯೊಳಗಾಗಿ ಪ್ರವೇಶಿಸಬಹುದು ಮತ್ತು ಕಾರ್ಯನಿರ್ವಾಹಕ ಇಂಜನಿಯರನನ್ನಾಗಲಿ ಅಥವಾ ಅಂಥ ಅಧಿಕಾರಿಯನ್ನಾಗಲಿ ಆ ಆವರಣದೊಳಕ್ಕೆ ಪ್ರವೇಶಿಸುವುದನ್ನು ನಿರಾಕರಿಸತಕ್ಕದ್ದಲ್ಲ ಅಥವಾ ಅವನು ಪರೀಕ್ಷಿಸುವಾಗ ಯಾರೇ ವ್ಯಕ್ತಿಯು ಅದಕ್ಕೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ.

(2) ಮಂಡಲಿಯು ತಾನು ಸರಬರಾಜು ಮಾಡಿದ ನೀರಿನ ಸಂಬಂಧದಲ್ಲಿ ಉಪಯೋಗಿಸಲಾದ ಯಾವುದೇ ನೀರು ಜೋಡಣೆ ಸಲಕರಣೆಯನ್ನು ಪರೀಕ್ಷಿಸಬಹುದು.

(3) (ಎ) ಆ ಆವರಣವು ಯಾರ ಅಧಿಭೋಗದಲ್ಲೂ ಇಲ್ಲದಿದ್ದರೆ;

(ಬಿ) ನೀರು ಸರಬರಾಜು ಸಂಬಂಧದಲ್ಲಿ ಮಂಡಲಿಯವರು ಹೊರಡಿಸಿದ ಯಾವುದಾದರೂ ಕಾನೂನು ಸಮ್ಮತ ಆದೇಶ ಅಥವಾ ಕೋರಿಕೆಯನ್ನು ಅದರೊಳಗೆ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಮಾಲೀಕನು ಅಥವಾ ಅನುಭವದಾರನು ಪಾಲಿಸಲು ಅಲಕ್ಷಿಸಿದರೆ;

(ಸಿ) ಯಾರೇ ವ್ಯಕ್ತಿಗೆ ಈ ಅಧಿನಿಯಮದ ಮೂಲಕ ಅಥವಾ ಇದರ ಮೇರೆಗೆ ಚಾರ್ಜು ಮಾಡಬಹುದಾದ ನೀರು ಸರಬರಾಜಿನ ಸಂಬಂಧದಲ್ಲಿನ ವೆಚ್ಚದ ಕಾರಣದಿಂದಾಗಿ ಬರಬೇಕಾದ ಯಾವುದೇ ಚಾರ್ಜುಗಳನ್ನು, ಅಥವಾ ಇತರ ಯಾವುದೇ ಬಾಕಿಯನ್ನು ಅಥವಾ ಮೀಟರಿನ ಬಾಡಿಗೆಯನ್ನು ಅಥವಾ ನೀರು ಸರಬರಾಜಿಗೆ ಸಂಬಂಧಿಸಿದ ಯಾವುದೇ ಕೆಲಸವನ್ನು, ಇಲ್ಲವೆ ಪರಿಶೀಲನೆಯನ್ನು ನೆರವೇರಿಸುವ ಯಾವುದೇ ವೆಚ್ಚವನ್ನು ಅಂತಹ ಚಾರ್ಜುಗಳ ಅಥವಾ ಮೊತ್ತದ ಬಗ್ಗೆ ಬಿಲ್ಲನ್ನು ಹಾಜರುಪಡಿಸಿದ ಅಥವಾ ಕೊಟ್ಟ ತರುವಾಯ ಹದಿನೈದು ದಿನಗಳಲ್ಲಿ ಪಾವತಿ ಮಾಡದೇ ಇದ್ದರೆ;

(ಡಿ) ಮಾಲೀಕನಾಗಲಿ ಅಥವಾ ಅನುಭವದಾರನಾಗಲಿ, ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ವಿನಿಯಮವನ್ನು ಉಲ್ಲಂಘಿಸಿ ನೀರು ಉಪಯೋಗಿಸುವುದನ್ನು ಅಥವಾ ಉಪಯೋಗಿಸಲು ಅನುಮತಿ ಕೊಡುವುದನ್ನು ನಿಲ್ಲಿಸಬೇಕೆಂದು ವಿಧಿಸಿ ಮಂಡಲಿಯು ಕೊಟ್ಟ ನೋಟೀಸು ತಲುಪಿದ ಮೇಲೂ ಆತನು ಹಾಗೆ ಮಾಡುವುದನ್ನು ಮುಂದುವರಿಸಿದರೆ;

(ಇ) ಮಾಲೀಕನಾಗಲಿ ಅಥವಾ ಅನುಭವದಾರನಾಗಲಿ ಮೀಟರನ್ನು ಅಥವಾ ನೀರು ಸಾಗಿಸುವ ಯಾವುದಾದರೂ ಕೊಳವೆಯನ್ನು ಅಥವಾ ನಲ್ಲಿಯನ್ನು ಉದ್ದೇಶ ಪೂರ್ವಕವಾಗಲಿ ಅಥವಾ ಅಲಕ್ಷ್ಯದಿಂದಾಗಲಿ ಹಾನಿಪಡಿಸಿದರೆ;

(ಎಫ್) ಯಾವುದಾದರೂ ಕೆಲಸವನ್ನು ನಡೆಸುವ ಅಥವಾ ಯಾವುದಾದರೂ ಉಪಕರಣವನ್ನು ಇಡುವ ಅಥವಾ ತೆಗೆಯುವ ಅಥವಾ ನೀರು ಸರಬರಾಜಿನ ಸಂಬಂಧದಲ್ಲಿ ಯಾವುದಾದರೂ ಪರೀಕ್ಷೆಯನ್ನು ಅಥವಾ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಯಾವ ಆವರಣವನ್ನು ಪ್ರವೇಶಿಸಲು ಮಂಡಲಿಯಿಂದ ಅಧಿಕಾರ ಹೊಂದಿರುವ ಯಾರಾದರೂ ವ್ಯಕ್ತಿ ಆ ಆವರಣವನ್ನು ಪ್ರವೇಶ ಮಾಡಲು ಮಾಲೀಕನಾಗಲೀ ಅಥವಾ ಅನುಭವದಾರನಾಗಲೀ ನಿರಾಕರಿಸಿದ ಪಕ್ಷದಲ್ಲಿ ಅಥವಾ ಅಂಥ ಕಾಮಗಾರಿ ಮಾಡದಂತೆ, ಅಂಥ ಉಪಕರಣವನ್ನು ಇಡದಂತೆ ಅಥವಾ ತೆಗೆದುಹಾಕದಂತೆ ಅಥವಾ ಅಂತಹ ಪರೀಕ್ಷೆ ಅಥವಾ ತನಿಖೆ ನಡೆಸದಂತೆ ಕಾರ್ಯ ನಿರ್ವಾಹಕ ಇಂಜನಿಯರ್ ಅಥವಾ ಮಂಡಲಿಯಿಂದ ಪ್ರಾಧಿಕಾರ ಪಡೆದ ಇತರ ಯಾರೇ ವ್ಯಕ್ತಿಯನ್ನು ಪ್ರತಿಬಂಧಿಸಿದರೆ;

(ಜಿ) ಮಂಡಲಿ ಅಥವಾ ಅವರಿಂದ ಅಧಿಕಾರ ಪಡೆದ ಯಾರೇ ವ್ಯಕ್ತಿಯಿಂದ ಪರೀಕ್ಷೆ ನಡೆಸಿದ ತರುವಾಯ ನೀರು ಸರಬರಾಜಿಗೆ ಸಂಬಂಧಪಟ್ಟ ಯಾವುದಾದರೂ ಕೊಳಾಯಿಗಳು, ನಲ್ಲಿಗಳು, ಕಾಮಗಾರಿ ಅಥವಾ ಸಲಕರಣೆಗಳು ನೀರು ದುರ್ವ್ಯಯವಾಗುವಷ್ಟು ಅಥವಾ ಕಲುಷಿತವಾಗುವಷ್ಟರ ಮಟ್ಟಿಗೆ ದುರಸ್ಥಿಯಾಗದ ಸ್ಥಿತಿಯಲ್ಲಿದೆ ಎಂದು ಕಂಡುಬಂದರೆ;

(ಎಚ್) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಆ ಮೇರೆಗೆ ಮಾಡಿದ ನಿಯಮಗಳನ್ನು ಅಥವಾ ವಿನಿಯಮಗಳನ್ನು ಉಲ್ಲಂಘಿಸಿ ಮಾಲೀಕನಾಗಲಿ ಅಥವಾ ಅನುಭವದಾರನಾಗಲಿ ಮಂಡಲಿಯ ನೀರು ಸರಬರಾಜಿಗೆ ಸಂಬಂಧಪಟ್ಟ ಕೊಳಾಯಿಗಳು, ನಲ್ಲಿಗಳು, ಕಾಮಗಾರಿಗಳು ಅಥವಾ ಸಲಕರಣೆಗಳನ್ನು ಹಾಕಿದರೆ, ತೆಗೆದುಹಾಕಿದರೆ, ದುರಸ್ತಿ ಮಾಡಿದರೆ ಅಥವಾ ಅದರಲ್ಲಿ ಅನ್ಯಥಾ ಹಸ್ತಕ್ಷೇಪ ಮಾಡಿದರೆ

– ಮಂಡಲಿಯು ಯಾವುದೇ ಆವರಣಕ್ಕೆ ನೀರು ಸರಬರಾಜನ್ನು ನಿಲ್ಲಿಸಿಬಿಡಬಹುದು:

ಪರಂತು, ಆವರಣದ ಮಾಲೀಕನಿಗೆ ಅಥವಾ ಅನುಭವದಾರನಿಗೆ ಮೂರು ದಿನಗಳಿಗಿಂತ ಕಡಿಮೆಯಿಲ್ಲದ ನೋಟೀಸನ್ನು ಕೊಟ್ಟ ಹೊರತು ಮಂಡಲಿಯು ನೀರು ಸರಬರಾಜನ್ನು ನಿಲ್ಲಿಸತಕ್ಕದ್ದಲ್ಲ.

(4) (ಎ) (3)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿತವಾದ ಎಲ್ಲಾ ಮೊಬಲಗುಗಳನ್ನು ಪಾವತಿ ಮಾಡುವುದಕ್ಕೆ ಆವರಣದ ಮಾಲೀಕ ಅಥವಾ ಅನುಭವದಾರನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಯಾಗಿರತಕ್ಕದ್ದು.

(ಬಿ) (ಎ) ಖಂಡದಲ್ಲಿ ಉಲ್ಲೇಖಿತವಾದ ಮೊಬಲಗುಗಳು ಆವರಣದ ಮೇಲಿನ ಋಣ ಭಾರಗಳಾಗಿರತಕ್ಕದ್ದು.

(5) ಸರಬರಾಜನ್ನು ನಿಲ್ಲಿಸುವುದಕ್ಕೆ ಸಂಬಂಧಪಟ್ಟ ವೆಚ್ಚಗಳನ್ನು ಆವರಣದ ಮಾಲೀಕನು ಮತ್ತು ಅನುಭವದಾರನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡತಕ್ಕದ್ದು.

(6) (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಯಾವ ಮೊಬಲಗನ್ನು ಪಾವತಿ ಮಾಡದಿರುವುದಕ್ಕಾಗಿ ನೀರನ್ನು ನಿಲ್ಲಿಸಲಾಗಿದೆಯೋ ಅಂತಹ ಯಾವುದಾದರೂ ಹಣವನ್ನು ಸರಬರಾಜನ್ನು ನಿಲ್ಲಿಸಲು ಮಾಡಿದ ವೆಚ್ಚಗಳ ಸಹಿತವಾಗಿ ಮಾಲೀಕ ಅಥವಾ ಅನುಭವದಾರನು ಸಂದಾಯ ಮಾಡಿದ ಕೂಡಲೇ, ಮಂಡಲಿಯು ಆ ಆವರಣ ಮತ್ತು ನೀರು ಸರಬರಾಜಿನ ಕಾಮಗಾರಿ ನಡುವೆ ಸಂಪರ್ಕ ಕಲ್ಪಿಸುವ ಬಗ್ಗೆ ತಗಲುವ ವೆಚ್ಚವು ಸಂದಾಯವಾದ ಮೇಲೆ ಮೊದಲಿನಂತೆಯೇ ನೀರು ಸರಬರಾಜು ಮಾಡತಕ್ಕದ್ದು.

(7) ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ವಿರುದ್ಧ ಕೈಗೊಂಡ ಕ್ರಮವು, ಅದು ಆತನು ಅನ್ಯಥಾ ಗುರಿಯಾಗಬಹುದಾದ ಯಾವ ದಂಡನೆಗಳಿಗೂ ಬಾಧಕವಾಗದಂತೆ ಇರತಕ್ಕದ್ದು.

**28 ಎಫ್. ಕಾಮಗಾರಿಗಳನ್ನು ಲೈಸನ್ಸು ಪಡೆದ ಕೊಳಾಯಿಗಾರನೇ ಮಾಡುವುದು.–** (1) ಲೈಸೆನ್ಸು ಪಡೆದ ಕೊಳಾಯಿಗಾರನಲ್ಲದ ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದಲ್ಲಿ ವಿವರಿಸಲಾದ ಯಾವುದೇ ಕಾಮಗಾರಿಯನ್ನೂ ಮಾಡತಕ್ಕದ್ದಲ್ಲ ಮತ್ತು ಲೈಸೆನ್ಸು ಪಡೆದ ಕೊಳಾಯಿಗಾರನ ಹೊರತು ಅಂಥ ಯಾವುದೇ ಕಾಮಗಾರಿಯನ್ನು ಮಾಡಲು ಯಾರೇ ವ್ಯಕ್ತಿಗೆ ಅನುಮತಿ ನೀಡತಕ್ಕದ್ದಲ್ಲ:

ಪರಂತು, ಅಂಥ ಕಾಮಗಾರಿಯು ಅಲ್ಪ ಸ್ವರೂಪದ್ದೆಂದು ಕಾರ್ಯ ನಿರ್ವಾಹಕ ಇಂಜಿನಿಯರ್ ಅಭಿಪ್ರಾಯಪಟ್ಟಲ್ಲಿ, ಲೈಸೆನ್ಸು ಪಡೆದ ಕೊಳಾಯಿಗಾರನಲ್ಲದ ಬೇರೊಬ್ಬ ವ್ಯಕ್ತಿಗೆ ಅಂಥ ಕಾಮಗಾರಿಯನ್ನು ಮಾಡಲು ಅವನು ಲಿಖಿತ ಅನುಮತಿ ಕೊಡಬಹುದು.

(2) ಯಾವುದೇ ಕಾಮಗಾರಿಯನ್ನು ಮಾಡಲು ಲೈಸೆನ್ಸು ಪಡೆದ ಕೊಳಾಯಿಗಾರನನ್ನು ನಿಯೋಜಿಸುವ ಪ್ರತಿಯೊಬ್ಬ ವ್ಯಕ್ತಿಗೆ ಕಾರ್ಯ ನಿರ್ವಾಹಕ ಇಂಜಿನಿಯರಿಗೆ ಅಂಥ ಕೊಳಾಯಿಗಾರನ ಹೆಸರನ್ನು ಒದಗಿಸಲು ಅಗತ್ಯಪಡಿಸಿದಾಗ ಅವನು ಹಾಗೆ ಒದಗಿಸತಕ್ಕದ್ದು.

(3) ಯಾವುದೇ ಕಾಮಗಾರಿಯನ್ನು (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಹೊರತು ಬೇರೆ ರೀತಿಯಲ್ಲಿ ನಿರ್ವಹಿಸಿದಾಗ ಯಾವ ವ್ಯಕ್ತಿಯಿಂದ ಅಂಥ ಕಾಮಗಾರಿಯು ಮಾಡಲಾಗಿತ್ತೋ ಆ ವ್ಯಕ್ತಿಯ ಮೇಲೆ ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್ ಹೂಡಲು ಮಂಡಲಿಗೆ ಇರುವ ಹಕ್ಕಿಗೆ ಯಾವುದೇ ಬಾಧಕವಾಗದಂತೆ ಮಂಡಲಿಯು ತನ್ನ ವಿವೇಚನಾನುಸಾರ ಆ ಕಾಮಗಾರಿಯನ್ನು ಕಿತ್ತು ಹಾಕಬಹುದು.

(4) ಮಂಡಲಿಯು ಲೈಸೆನ್ಸು ಪಡೆದ ಕೊಳಾಯಿಗಾರರ ಮಾರ್ಗದರ್ಶನಕ್ಕಾಗಿ ವಿನಿಯಮಗಳನ್ನು ರಚಿಸಬಹುದು ಮತ್ತು ಅಂಥ ಎಲ್ಲಾ ವಿನಿಯಮಗಳ ಒಂದು ಪ್ರತಿಯನ್ನು ಮಂಡಲಿಯು ಕೊಳಾಯಿಗಾರನಿಗೆ ಕೊಡುವ ಪ್ರತಿಯೊಂದು ಲೈಸೆನ್ಸಿಗೂ ಲಗತ್ತಿಸಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಅಥವಾ ಅದರ ಯಾವುದೇ ಉದ್ದೇಶಗಳಿಗಾಗಿ ಲೈಸೆನ್ಸು ಪಡೆದ ಕೊಳಾಯಿಗಾರರಿಂದ ಮಾಡಲಾದ ಯಾವುದೇ ಕಾಮಗಾರಿಗೆ ಸಂದಾಯ ಮಾಡಬೇಕಾದ ಚಾರ್ಜನ್ನು ಮಂಡಲಿಯು ಕಾಲಕಾಲಕ್ಕೆ ನಿಯಮಿಸಬಹುದು.

(6) ಲೈಸೆನ್ಸು ಪಡೆದ ಯಾರೇ ಕೊಳಾಯಿಗಾರನು, (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಕಾಮಗಾರಿಗಾಗಿ, ಆ ಉಪ-ಪ್ರಕರಣದಲ್ಲಿ ಅದಕ್ಕಾಗಿ ನಿಯಮಿಸಲಾದ ಚಾರ್ಜುಗಳಿಗಿಂತ ಹೆಚ್ಚಿನ ಚಾರ್ಜ್‌ಗಾಗಿ ಒತ್ತಾಯಿಸತಕ್ಕದ್ದಲ್ಲ ಅಥವಾ ಸ್ವೀಕರಿಸತಕ್ಕದ್ದಲ್ಲ.

(7) ಮಂಡಲಿಯು-

(ಎ) ಎಲ್ಲಾ ಲೈಸೆನ್ಸು ಪಡೆದ ಕೊಳಾಯಿಗಾರರ ಮೇಲೆ ಯಥೋಚಿತ ನಿಯಂತ್ರಣವನ್ನು ಚಲಾಯಿಸುವುದಕ್ಕಾಗಿ;

(ಬಿ) ಅವರು ಕಾರ್ಯಗತಗೊಳಿಸಿದ ಎಲ್ಲಾ ಕಾಮಗಾರಿಗಳ ಪರಿವೀಕ್ಷಣೆಗಾಗಿ; ಮತ್ತು

(ಸಿ) ಲೈಸೆನ್ಸು ಪಡೆದ ಕೊಳಾಯಿಗಾರನು ಮಾಡಿದ ಕಾಮಗಾರಿಗೆ ಉಪಯೋಗಿಸಿದ ಸಾಮಗ್ರಿಯ ಗುಣಮಟ್ಟದ ಬಗ್ಗೆ ಕಾಮಗಾರಿಯ ನಿರ್ವಹಣೆಯಲ್ಲಿ ಉಂಟಾದ ವಿಳಂಬ, ವಿಧಿಸಿದ ಚಾರ್ಜು-ಇವುಗಳನ್ನು ಕುರಿತು ಆವರಣಗಳ ಮಾಲೀಕರು ಅಥವಾ ಅನುಭವದಾರರು ಕೊಟ್ಟ ಫಿರ್ಯಾದುಗಳ ಸುನಾವಣೆ ಮತ್ತು ವಿಲೇವಾರಿಗಾಗಿ

-ಉಪಬಂಧವನ್ನು ಕಲ್ಪಿಸಲು ವಿನಿಯಮಗಳನ್ನು ರಚಿಸತಕ್ಕದ್ದು.

(8) ಲೈಸೆನ್ಸು ಪಡೆದ ಯಾರೇ ಕೊಳಾಯಿಗಾರನು ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ವಿನಿಯಮವನ್ನು ಉಲ್ಲಂಘಿಸತಕ್ಕದ್ದಲ್ಲ ಅಥವಾ ಈ ಅಧಿನಿಯಮದ ಮೇರೆಗಿನ ಯಾವುದೇ ಕಾಮಗಾರಿಯನ್ನು ನಿರ್ಲಕ್ಷ್ಯದಿಂದ ಅಥವಾ ಅಸಡ್ಡೆಯಿಂದ ಮಾಡತಕ್ಕದ್ದಲ್ಲ ಅಥವಾ ಕಳಪೆ ಸಾಮಗ್ರಿಗಳನ್ನು, ಉಪಕರಣಗಳನ್ನು ಅಥವಾ ಜೋಡಣೆಗಳನ್ನು ಉಪಯೋಗಿಸತಕ್ಕದ್ದಲ್ಲ.

(9) ಲೈಸೆನ್ಸ್ ಪಡೆದ ಯಾರೇ ಕೊಳಾಯಿಗಾರನು (8)ನೇ ಉಪಪ್ರಕರಣವನ್ನು ಉಲ್ಲಂಘಿಸಿದರೆ, ಅವನನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಅವನ ಲೈಸೆನ್ಸನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

**28ಜಿ. ಕೆಲವೊಂದು ಕೃತ್ಯಗಳಿಗೆ ನಿಷೇಧ.-** (1) ಯಾರೇ ವ್ಯಕ್ತಿಯೂ,-

(ಎ) ಮಂಡಲಿಯ ಪ್ರಾಧಿಕಾರದ ಮೇರೆಗೆ ಯಾವುದೇ ಕಾಮಗಾರಿಯ ಲೈನುಗಳನ್ನು ಹಾಕುತ್ತಿರುವ ಯಾರೇ ವ್ಯಕ್ತಿಯನ್ನು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸತಕ್ಕದ್ದಲ್ಲ ಅಥವಾ ಅಂಥ ಕಾಮಗಾರಿಗಾಗಿ ಲೈನುಗಳನ್ನು ಹಾಕುವ ಉದ್ದೇಶಕ್ಕಾಗಿ ನೆಲದಲ್ಲಿ ಹೂತು ನಿಲ್ಲಿಸಲಾದ ಯಾವುದೊಂದು ಸ್ಥಂಭ, ಮರದ ಕಂಭ ಅಥವಾ ಸಸಿಯನ್ನು ಕಿತ್ತುಹಾಕತಕ್ಕದ್ದಲ್ಲ ಅಥವಾ ತೆಗೆದು ಹಾಕತಕ್ಕದ್ದಲ್ಲ ಅಥವಾ ಅದೇ ಉದ್ದೇಶಕ್ಕಾಗಿ ಮಾಡಿದ ಯಾವುದೇ ಕಾಮಗಾರಿಯನ್ನು ವಿರೂಪಗೊಳಿಸತಕ್ಕದ್ದಲ್ಲ ಅಥವಾ ನಾಶಪಡಿಸತಕ್ಕದ್ದಲ್ಲ; ಅಥವಾ

(ಬಿ) ಮಂಡಲಿಗೆ ಸೇರಿದ ಯಾವುದೇ ಲಾಕ್, ಕಾಕ್, ವಾಲ್ವ್, ಪೈಪು, ಮೀಟರ್ ಅಥವಾ ಇತರ ಕಾಮಗಾರಿ ಸಲಕರಣೆಯನ್ನು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ಮುರಿದು ಹಾಕತಕ್ಕದ್ದಲ್ಲ, ಹಾನಿಗೊಳಿಸತಕ್ಕದ್ದಲ್ಲ, ತಿರುಗಿಸತಕ್ಕದ್ದಲ್ಲ, ತೆರೆಯತಕ್ಕದ್ದಲ್ಲ, ಮುಚ್ಚತಕ್ಕದ್ದಲ್ಲ, ಮುಚ್ಚಿ ಹಾಕತಕ್ಕದ್ದಲ್ಲ ಅಥವಾ ಅನ್ಯಥಾ ರೀತಿಯಿಂದ ಅದರಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ; ಅಥವಾ

(ಸಿ) ಮಂಡಲಿಗೆ ಸೇರಿದ ಯಾವುದೇ ನೀರು ಕಾಮಗಾರಿಯಿಂದ ಅಥವಾ ಅಂಥ ನೀರನ್ನು ಸರಬರಾಜು ಮಾಡುತ್ತಿರುವ ಯಾವುದೇ ಜಲಮಾರ್ಗದಿಂದ ನೀರು ಹರಿಯುವುದನ್ನು ಕಾನೂನಿಗೆ ವಿರುದ್ಧವಾಗಿ ಅಡ್ಡಿಪಡಿಸತಕ್ಕದ್ದಲ್ಲ, ನೀರನ್ನು ನುಗ್ಗು ಹಾಯಿಸತಕ್ಕದ್ದಲ್ಲ, ಸೆಳೆದುಕೊಳ್ಳತಕ್ಕದ್ದಲ್ಲ, ಪಲ್ಲಟಗೊಳಿಸತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ; ಅಥವಾ

(ಡಿ) ಮಂಡಲಿಗೆ ಸೇರಿದ ಯಾವುದೇ ಒಳಚರಂಡಿ ಕಾಮಗಾರಿಯಿಂದ ಕಾನೂನು ವಿರುದ್ಧವಾಗಿ ಯಾವುದೇ ಗ್ರಾಮಸಾರವು ಹರಿಯುವುದನ್ನು ಅಡ್ಡಿಪಡಿಸತಕ್ಕದ್ದಲ್ಲ, ಅದನ್ನು ನುಗ್ಗು ಹಾಯಿಸತಕ್ಕದ್ದಲ್ಲ, ಮೇಲಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ, ಪಲ್ಲಟಗೊಳಿಸತಕ್ಕದ್ದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ.

(ಇ) ಮಂಡಲಿಯ ಯಾರೇ ಅಧಿಕಾರಿ ಅಥವಾ ಇತರ ನೌಕರನನ್ನು ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಡ್ಡಿಪಡಿಸತಕ್ಕದ್ದಲ್ಲ ಅಥವಾ ಯಾವುದೇ ನೀರು ಕಾಮಗಾರಿ ಅಥವಾ ಒಳಚರಂಡಿ ಕಾಮಗಾರಿಯ ಸಂಬಂಧದಲ್ಲಿ ಅದರ ಮೇರೆಗೆ ಯಾವುದೇ ಪ್ರವೇಶ ಪರೀಕ್ಷೆ, ಪರಿಶೀಲನೆ, ತನಿಖೆ ನಡೆಸಲು ಅಥವಾ ವಿಚಾರಣೆ ಮಾಡಲು ಅಗತ್ಯವಿರುವಂಥ ಸಾಧನಗಳನ್ನು ಒದಗಿಸಲು ನಿರಾಕರಿಸತಕ್ಕದ್ದಲ್ಲ ಅಥವಾ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ಮಾಡತಕ್ಕದ್ದಲ್ಲ; ಅಥವಾ

(ಎಫ್) ಯಾವುದೇ ನೀರು ಕಾಮಗಾರಿಯಲ್ಲಿ ಅದರ ಬಳಿ ಅಥವಾ ಅದರ ಮೇಲೆ ಸ್ನಾನ ಮಾಡತಕ್ಕದ್ದಲ್ಲ ಅಥವಾ ಯಾವುದೇ ಪ್ರಾಣಿಯನ್ನು ಅದರಲ್ಲಿ ತೊಳೆಯತಕ್ಕದ್ದಲ್ಲ ಅಥವಾ ಅದರಲ್ಲಿ ಎಸೆಯತಕ್ಕದ್ದಲ್ಲ ಅಥವಾ ಅದರಲ್ಲಿ ಪ್ರವೇಶಿಸುವಂತೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ನೀರು ಕಾಮಗಾರಿಗೆ ಯಾವುದೇ ಕಸ, ಹೊಲಸು ಅಥವಾ ಕಶ್ಮಲವನ್ನು ಎಸೆಯತಕ್ಕದ್ದಲ್ಲ ಅಥವಾ ಅದರಲ್ಲಿ ಯಾವುದೇ ಬಟ್ಟೆ, ಉಣ್ಣೆ ಅಥವಾ ಹದ ಮಾಡಿದ ಚರ್ಮ ಅಥವಾ ಯಾವುದೇ ಪ್ರಾಣಿಯ ತೊಗಲನ್ನು ತೊಳೆಯತಕ್ಕದ್ದಲ್ಲ ಅಥವಾ ಸ್ವಚ್ಛ ಮಾಡತಕ್ಕದ್ದಲ್ಲ ಅಥವಾ ಯಾವುದೇ ನೀರು ಕಾಮಗಾರಿಗೆ ಯಾವುದೇ ಗುಂಡಿ ಅಥವಾ ಚರಂಡಿ ಅಥವಾ ಯಾವುವೇ ಉಗಿಯ ಇಂಜಿನ್ ಅಥವಾ ಕುದಿಪಾತ್ರೆಯ ನೀರನ್ನು ಅಥವಾ ಯಾವುದೇ ಕಲುಷಿತ ನೀರನ್ನು ಹರಿಯಬಿಡತಕ್ಕದ್ದಲ್ಲ ಅಥವಾ ತರತಕ್ಕದ್ದಲ್ಲ ಅಥವಾ ಯಾವೊಂದು ನೀರು ಕಾಮಗಾರಿಯೊಳಗಿನ ನೀರು ಹೊಲಸಾಗುವಂಥ ಅಥವಾ ಹೊಲಸಾಗುವ ಸಂಭವವಿರುವಂಥ ಯಾವುದೇ ಕೃತ್ಯವನ್ನು ಮಾಡತಕ್ಕದ್ದಲ್ಲ.

(2) ಒಬ್ಬ ಗ್ರಾಹಕನು ತನ್ನ ಆವರಣಕ್ಕೆ ನೀರೊದಗಿಸುವ ಸರ್ವೀಸ್ ಪೈಪಿನ ಮೇಲೆ ಜೋಡಿಸಿದ ನಿಲುಬಿರುಡೆಯನ್ನು ಮುಚ್ಚುವುದಕ್ಕೆ, ಹಾಗೆ ಮುಚ್ಚುವುದರಿಂದ ಇತರ ಯಾವ ಬಳಕೆದಾರನ ಸರಬರಾಜಿಗೆ ಬಾಧಕವಾಗುತ್ತದೋ ಅವನ ಅನುಮತಿಯನ್ನು ಪಡೆದು ಹಾಗೆ ಮುಚ್ಚಿದರೆ (1)ನೆಯ ಉಪ-ಪ್ರಕರಣದ (ಬಿ) ಖಂಡದಲ್ಲಿ ಇರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ.

**28ಎಚ್. ಆವರಣದ ಚರಂಡಿ ವ್ಯವಸ್ಥೆ, ಇತ್ಯಾದಿ.-** (1) (ಎ) ಈ ಸಂಬಂಧದಲ್ಲಿ ಮಾಡಲಾದ ವಿನಿಯಮಗಳಿಂದ ಗೊತ್ತುಪಡಿಸಲಾದಂತಹ ಷರತ್ತುಗಳಿಗೊಳಪಟ್ಟು, ಖಾಸಗಿ ಚರಂಡಿಯನ್ನು ಹೊಂದಿರುವ ಯಾವುದೇ ಆವರಣದ ಮಾಲೀಕ ಅಥವಾ ಅನುಭೋಗದಾರ ಅಥವಾ ಸ್ಥಳೀಯ ಪ್ರದೇಶದೊಳಗೆ ಖಾಸಗೀ ಚರಂಡಿಯೊಂದರ ಮೂಲಕ, ತಾನು ಹೊಂದಿರುವ ಚರಂಡಿಯನ್ನು ಮಂಡಲಿಯ ಒಳ ಚರಂಡಿಯೊಂದಿಗೆ ಸಂಪರ್ಕಗೊಳಿಸಲು ಮಂಡಲಿಗೆ ಅರ್ಜಿ ಹಾಕಿಕೊಳ್ಳಬಹುದು ಮತ್ತು ಆ ಮೂಲಕ ಆವರಣಗಳಿಂದ ಅಥವಾ ಆ ಖಾಸಗೀ ಚರಂಡಿಯಿಂದ ಹೊಲಸು ನೀರು ಅಥವಾ ಯಾವುದೇ ಮೇಲ್ಮೈ ನೀರನ್ನು ಹರಿಯ ಬಿಡಬಹುದು:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ,-

(i) ಈ ಸಂಬಂಧದಲ್ಲಿ ಮಾಡಲಾದ ವಿನಿಯಮಗಳಿಗನುಸಾರವಾಗಿ ಹೊರತು, ಯಾವುದೇ ಉದ್ಯಮದ ಆವರಣದಿಂದ ಯಾವುದೇ ಉದ್ಯಮದ ಕೊಳೆ ನೀರನ್ನು, ಅಥವಾ

(ii) ಯಾವ ದ್ರವರೂಪದ ಪದಾರ್ಥವನ್ನು ಅಥವಾ ಇತರ ಪದಾರ್ಥವನ್ನು ಮಂಡಲಿಯ ಒಳಚರಂಡಿಗಳೊಳಗೆ ವಿಸರ್ಜಿಸುವುದನ್ನು ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಕಾನೂನಿನ ಮೂಲಕ ನಿಷೇಧಿಸಲಾಗಿದೆಯೋ ಅಂತಹುದನ್ನು, ಯಾರೇ ವ್ಯಕ್ತಿಯು ಮಂಡಲಿಯ ಒಳ ಚರಂಡಿಯೊಳಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿಸರ್ಜಿಸಲು

-ವ್ಯಕ್ತಿಗೆ ಹಕ್ಕು ಕೊಡತಕ್ಕುದಲ್ಲ.

(ಬಿ) (ಎ) ಖಂಡದ ಉಪಬಂಧಗಳ ಲಾಭವನ್ನು ಪಡೆಯಲಿಚ್ಛಿಸುವ ಯಾರೇ ವ್ಯಕ್ತಿಯು ತನ್ನ ಉದ್ದೇಶದ ಬಗ್ಗೆ ಮಂಡಲಿಗೆ ನೋಟೀಸು ಕೊಡತಕ್ಕದ್ದು ಮತ್ತು ಅದು ತಲುಪಿದ ನಂತರ ಒಂದು ತಿಂಗಳೊಳಗೆ ಯಾವುದೇ ಸಮಯದಲ್ಲಿ ಸದರಿ ಚರಂಡಿಯ ರಚನಾ ರೀತಿಯಿಂದಾಗಿ ಅಥವಾ ಪರಿಸ್ಥಿತಿಯಿಂದಾಗಿ ಆ ಸಂಪರ್ಕ ರಚನೆಯು ಒಳಚರಂಡಿ ವ್ಯವಸ್ಥೆಗೆ ಬಾಧೆಯುಂಟು ಮಾಡುವಂಥದಾಗಿರುವುದೆಂದು ಮಂಡಲಿಗೆ ಕಂಡುಬಂದರೆ, ಸಂಪರ್ಕ ರಚನೆಗೆ ಅನುಮತಿ ನೀಡಲು ನಿರಾಕರಿಸಬಹುದು ಮತ್ತು ಸದರಿ ಚರಂಡಿಯ ರಚನಾ ರೀತಿಯನ್ನು ಹಾಗೂ ಪರಿಸ್ಥಿತಿಯನ್ನು ಪರೀಕ್ಷಿಸುವ ಉದ್ದೇಶದ ಸಲುವಾಗಿ, ಅವಶ್ಯವಿದ್ದರೆ ಚರಂಡಿಯನ್ನು ತಪಾಸಣೆಯ ಸಲುವಾಗಿ ತೆರೆದಿಡುವಂತೆ ಅಗತ್ಯಪಡಿಸಬಹುದು.

(ಸಿ) ಮಂಡಲಿಯು ತನಗೆ ಸೂಕ್ತವೆಂದು ತೋರಿದರೆ ಯಾವುದೇ ಖಾಸಗೀ ಚರಂಡಿಯನ್ನು ಮಂಡಲಿಯ ಒಳ ಚರಂಡಿಯೊಂದಿಗೆ ಜೋಡಿಸುವ ಸಲುವಾಗಿ ಅವಶ್ಯವಿರುವ ಕಾಮಗಾರಿಯ ಯಾವ ಭಾಗವು ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಅದರಡಿಯಲ್ಲಿ ಇರುತ್ತದೋ ಅಂಥ ಭಾಗವನ್ನು ರಚಿಸಬಹುದು ಮತ್ತು ಇಂಥ ಸಂದರ್ಭದಲ್ಲಿ ಮಂಡಲಿಗೆ ತಗುಲಿದ ವೆಚ್ಚವನ್ನು ಆ ಆವರಣದ ಮಾಲೀಕ ಅಥವಾ ಅನುಭವದಾರ ಅಥವಾ ಸಂದರ್ಭಾನುಸಾರ ಖಾಸಗೀ ಚರಂಡಿ

ಮಾಲೀಕನು ಸಂದಾಯ ಮಾಡತಕ್ಕದ್ದು ಮತ್ತು ಸದರಿ ವೆಚ್ಚಗಳನ್ನು ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಚಾರ್ಜುಗಳ ಬಾಕಿಯಂತೆ ಮಾಲೀಕನಿಂದ ಅಥವಾ ಅನುಭವದಾರನಿಂದ ವಸೂಲು ಮಾಡಲು ಅವಕಾಶವಿರತಕ್ಕದ್ದು.

(2) (ಎ) ಮಂಡಲಿಯ ಅಭಿಪ್ರಾಯದ ಮೇರೆಗೆ ಯಾವುದೇ ಆವರಣದಲ್ಲಿ ಹೊಲಸು ನೀರು ಪರಿಣಾಮಕಾರಿಯಾಗಿ ಹರಿದುಹೋಗಲು ಪರ್ಯಾಪ್ತ ವ್ಯವಸ್ಥೆ ಇರದಿದ್ದರೆ ಮತ್ತು ಹೊಲಸನ್ನು ಹಾಗೂ ಇತರ ದೂಷಿತ ಹಾಗೂ ಅಸಹ್ಯ ಪದಾರ್ಥವನ್ನು ಹರಿಯಬಿಡಲು ಮಂಡಲಿಯ ಯಾವುದೇ ಒಳಚರಂಡಿಯು ಅಥವಾ ಮಂಡಲಿಯಿಂದ ಅನುಮೋದಿಸಲಾದ ಯಾವುದೇ ಒಂದು ಸ್ಥಳವು ಸದರಿ ಆವರಣದ ಯಾವುದೇ ಭಾಗದಿಂದ ಮೂವತ್ತೈದು ಮೀಟರುಗಳಿಗೆ ಮೀರಿದ ಅಂತರದೊಳಗೆ ಇದ್ದರೆ, ಮಂಡಲಿಯು ಲಿಖಿತದಲ್ಲಿ ನೋಟೀಸು ಕೊಟ್ಟು-

(i) ಇಂಥ ಮಂಡಲಿಯ ಒಳ ಚರಂಡಿಯೊಳಗೆ ಅಥವಾ ವ್ಯಾಪಾರ ಸ್ಥಳಗಳಲ್ಲಿ ಹರಿದುಹೋಗಲು ಬಿಡುವ ಒಂದು ಚರಂಡಿಯನ್ನು ರಚಿಸಬೇಕೆಂದು;

(ii) ಸದರಿ ಆವರಣದಿಂದ ಹೊಲಸನ್ನು ಹಾಗೂ ಇತರ ದೂಷಿತ ಹಾಗೂ ಅಸಹ್ಯ ಪದಾರ್ಥವನ್ನು ಸಂಗ್ರಹಿಸುವ ಹಾಗೂ ಪಡೆದುಕೊಳ್ಳುವ ಮತ್ತು ಅಂಥ ಪದಾರ್ಥವನ್ನು ಆವರಣಗಳಿಂದ ದೂರ ಒಯ್ಯುವ ಮತ್ತು ಇಂಥ ಚರಂಡಿಯನ್ನು ಮತ್ತು ಅದಕ್ಕೆ ಜೋಡಿಸಲ್ಪಟ್ಟ ಪ್ರತಿಯೊಂದು ಜೋಡಣೆಯನ್ನು ಪರಿಣಾಮಕಾರಿಯಾಗಿ ಕೊಚ್ಚಿ ತೊಳೆಯುವ ಉದ್ದೇಶದ ಸಲುವಾಗಿ ಅವಶ್ಯಕವಿರುವುದೆಂದು ಮಂಡಲಿಗೆ ಕಂಡುಬರಬಹುದಾದಂತಹ ಒಂದು ರೊಚ್ಚುಗುಂಡಿಯನ್ನು ಅಥವಾ ಇಂಗು ಗುಂಡಿಯನ್ನು ಹಾಗೂ ಜೋಡಣೆಗಳನ್ನು ರಚಿಸಬೇಕೆಂದು;

(iii) ಆರೋಗ್ಯಕ್ಕೆ ಅಪಾಯಕರವಾದ ಹೊಲಸು ನೀರು ಹರಿದುಹೋಗುವ ಸಲುವಾಗಿ ಉಪಯೋಗಿಸಲಾದ ಅಥವಾ ಉಪಯೋಗಿಸಲಾಗುವ ಉದ್ದೇಶದ ಪ್ರಸ್ತುತ ಇರುವ ಯಾವುದೇ ಚರಂಡಿಯನ್ನು ಅಥವಾ ಇತರ ಉಪಕರಣವನ್ನು ಅಥವಾ ವಸ್ತುವನ್ನು ತೆಗೆದುಹಾಕಬೇಕೆಂದು;

(iv) ಆರೋಗ್ಯಕ್ಕೆ ಅಪಾಯಕರವಾದ ಅಥವಾ ಅಪಾಯಕರವಾಗುವ ಸಂಭವವಿರುವ ಯಾವುದೇ ಬಗೆಯ ಚರಂಡಿಯ ಬದಲಾಗಿ ಒಂದು ಮುಚ್ಚಿದ ಚರಂಡಿಯನ್ನು ಒದಗಿಸಬೇಕೆಂದು ಅಥವಾ ಹೊಸದಾಗಿಯಾಗಲಿ ಅಥವಾ ಈಗಿರುವ ಯಾವುದೇ ಉಪಕರಣದ ಅಥವಾ ವಸ್ತುವಿನ ಬದಲಾಗಿಯಾಗಲಿ ಅಂಥ ಇತರ ಉಪಕರಣವನ್ನು ಇಲ್ಲವೆ ವಸ್ತುವನ್ನು ಒದಗಿಸಬೇಕೆಂದು ಅಥವಾ ಈಗಿರುವ ತೆರೆದ ಚರಂಡಿ ಹಾಗೂ ಇತರ ಉಪಕರಣದ ಇಲ್ಲವೆ ವಸ್ತುವಿನ ಬದಲಾಗಿ ಒಂದು ಮುಚ್ಚಿದ ಚರಂಡಿ ಹಾಗೂ ಅಂಥ ಇತರ ಉಪಕರಣ ಇಲ್ಲವೆ ವಸ್ತು ಇವೆರಡನ್ನು ಒದಗಿಸಬೇಕೆಂದು;

(v) ಕಟ್ಟಡಗಳ ಅಂತಸ್ತುಗಳು ಹಾಗೂ ಗ್ಯಾಲರಿಗಳನ್ನು ತೊಳೆದಾಗ ಅವುಗಳಿಂದ ಬರುವ ನಿಷ್ಪ್ರಯೋಜಕ ನೀರನ್ನು ಸಂಗ್ರಹಿಸುವ ಹಾಗೂ ತೆಗೆದುಕೊಳ್ಳುವ ಮತ್ತು ಅಂಥ ನಿಷ್ಪ್ರಯೋಜಕವಾದ ನೀರು ಬೀದಿಗಳ ಮೇಲೆ ಅಥವಾ ಸದರಿ ಆವರಣಗಳ ಯಾವುದೇ ಕೆಳಗಿನ ಭಾಗದೊಳಗೆ ನೇರವಾಗಿ ಬಂದು ಬೀಳುವುದನ್ನು ಪ್ರತಿಬಂಧಿಸಲು ಸಾಧ್ಯವಾಗುವಂತೆ ಆ ನೀರನ್ನು ಕೆಳಕ್ಕೆ ಬಿಡುವ ಪೈಪುಗಳ ಮೂಲಕ, ನಳಿಕೆಗಳ ಮುಖಾಂತರ ಸಾಗಿಸುವ ಉದ್ದೇಶದ ಸಲುವಾಗಿ ಅವಶ್ಯವಿರುವುದೆಂದು ಮಂಡಲಿಗೆ ಕಂಡುಬರಬಹುದಾದಂಥ ಎಲ್ಲ ಉಪಕರಣಗಳನ್ನು ಹಾಗೂ ಜೋಡಣೆಗಳನ್ನು ಒದಗಿಸಬೇಕೆಂದು ಹಾಗೂ ಸ್ಥಾಪಿಸಬೇಕೆಂದು;

(vi) ಸಾಕಷ್ಟು ಪ್ರಮಾಣದಲ್ಲಿರದ, ಕೊರತೆಯಿಂದ ಕೂಡಿದ ಅಥವಾ ದೋಷಪೂರ್ಣವಾದ ಈಗಿನ ಯಾವುದೇ ಚರಂಡಿಯನ್ನು ಉತ್ತಮಗೊಳಿಸುವ ಅಥವಾ ಪುನರ್ ರೂಪಿಸುವ ಬಗ್ಗೆ ಯಾವುದೇ ಕಾಮಗಾರಿಯನ್ನು ನೆರವೇರಿಸಬೇಕೆಂದು

– ಸದರಿ ಆವರಣಗಳ ಮಾಲೀಕನನ್ನು ಅಗತ್ಯಪಡಿಸಬಹುದು.

(ಬಿ) (ಎ) ಖಂಡದಲ್ಲಿ ಉಪಬಂಧಿಸಿಲ್ಲದ ಯಾವುದೇ ಸಂದರ್ಭದಲ್ಲಿ ಯಾವುದೇ ಆವರಣದಲ್ಲಿ ಕೊಳೆ ನೀರು ಪರಿಣಾಮಕಾರಿಯಾಗಿ ಹರಿದು ಹೋಗಲು ಸಾಕಷ್ಟು ವ್ಯವಸ್ಥೆಯಿಲ್ಲವೆಂದು ಮಂಡಲಿಯು ಅಭಿಪ್ರಾಯಪಟ್ಟರೆ ಅದು ಲಿಖಿತ ನೋಟೀಸಿನ ಮೂಲಕ-

(i) ಅಂಥ ನೋಟೀಸಿನಲ್ಲಿ ನಿಯಮಿಸಲಾಗುವ, ಆದರೆ ಆವರಣದ ಯಾವುದೇ ಭಾಗದಿಂದ ಮೂವತ್ತೈದು ಮೀಟರುಗಳಿಗೆ ಮೀರದ ಅಂತರದೊಳಗಿನ ಯಾವುದೇ ಸ್ಥಳದ ವರೆಗೆ ಚರಂಡಿ ಕಟ್ಟಿಸಬೇಕೆಂದು; ಅಥವಾ

(ii) ಒಂದು ಮುಚ್ಚಿದ ರೊಚ್ಚುಗುಂಡಿಯನ್ನು ಅಥವಾ ಇಂಗುಗುಂಡಿಯನ್ನು ಮತ್ತು ಅಂಥ ರೊಚ್ಚುಗುಂಡಿ ಅಥವಾ ಇಂಗು ಗುಂಡಿಯೊಳಗೆ ನೀರನ್ನು ಹರಿಸುವ ಚರಂಡಿಯನ್ನು ಅಥವಾ ಚರಂಡಿಗಳನ್ನು ಕಟ್ಟಬೇಕೆಂದು

– ಆವರಣದ ಮಾಲೀಕನನ್ನು ಅಗತ್ಯಪಡಿಸಬಹುದು.

(ಸಿ) (ಬಿ) ಖಂಡದ ಮೇರೆಗೆ ಯಾವುದೇ ಚರಂಡಿಯನ್ನು ಕಟ್ಟಿಸುವ ಬಗ್ಗೆ ಮಾಡಲಾದ ಯಾವುದೇ ಕೋರಿಕೆಯು (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಲಾದ ವಿವರಗಳಲ್ಲಿನ ಯಾವುದೇ ವಿವರವನ್ನು ಒಳಗೊಂಡಿರಬಹುದು.

(3) (ಎ) ಯಾವ ಪ್ರದೇಶಗಳಲ್ಲಿ ಮಂಡಲಿಯ ಒಳ ಚರಂಡಿಗಳನ್ನು ಒದಗಿಸಲಾಗಿರುವುದೋ ಅಂಥ ಪ್ರದೇಶಗಳಲ್ಲಿ ಯಾವುದೇ ಆವರಣವನ್ನು-

(i) ಅಂಥ ಆವರಣದ ಕೊಳೆ ನೀರು ಪರಿಣಾಮಕಾರಿಯಾಗಿ ಹರಿದುಹೋಗುವ ಬಗ್ಗೆ ಅವಶ್ಯವಿರುವುದೆಂದು ಮಂಡಲಿಗೆ ಕಂಡುಬರುವಂಥ ಆಕಾರದ, ಸಾಮಗ್ರಿಗಳ ಹಾಗೂ ವಿವರಗಳ ಒಂದು ಚರಂಡಿಯನ್ನು ಮಂಡಲಿಗೆ ಅವಶ್ಯವೆನಿಸುವಂಥ ಮಟ್ಟದಲ್ಲಿ ಹಾಗೂ ಅಂಥ ಇಳುವಿನೊಂದಿಗೆ ಕಟ್ಟಿಸಿದ ಹೊರತು;

(ii) ಸದರಿ ಆವರಣದಿಂದ ಹೊಲಸನ್ನು ಹಾಗೂ ಇತರ ದೂಷಿತ ಹಾಗೂ ಅಸಹ್ಯ ಪದಾರ್ಥವನ್ನು ಸಂಗ್ರಹಿಸುವ ಅಥವಾ ತೆಗೆದುಕೊಳ್ಳುವ ಮತ್ತು ಅದನ್ನು ಆ ಆವರಣದಿಂದ ದೂರ ಒಯ್ಯುವ ಮತ್ತು ಆವರಣದ ಚರಂಡಿಯನ್ನು ಮತ್ತು ಅವುಗಳಿಗೆ ಜೋಡಿಸಲಾದ ಪ್ರತಿಯೊಂದು ಜೋಡಣೆಯನ್ನು ಪರಿಣಾಮಕಾರಿಯಾಗಿ ತೊಳೆಯುವ ಉದ್ದೇಶಗಳ ಸಲುವಾಗಿ ಅವಶ್ಯವಿರುವುದೆಂದು ಮಂಡಲಿಗೆ ಕಂಡುಬರುವಂಥ ಉಪಕರಣಗಳನ್ನು ಹಾಗೂ ಜೋಡಣೆಗಳನ್ನು ಕಟ್ಟಿಸಿದ್ದ ಅಥವಾ ನಿರ್ಮಿಸಿದ್ದ ಹೊರತು

– ಅಂಥ ಯಾವುದೇ ಆವರಣವನ್ನು ನಿರ್ಮಿಸುವುದು ಮತ್ತು ಪುನರ್ ನಿರ್ಮಿಸುವುದು ಅಥವಾ ಅಂಥ ಆವರಣದಲ್ಲಿ ವಾಸವಾಗಿರುವುದು ಕಾನೂನು ಸಮ್ಮತವಾಗಿರತಕ್ಕದ್ದಲ್ಲ.

(ಬಿ) ಹೀಗೆ ಕಟ್ಟಿಸಲಾದ ಚರಂಡಿಯಿಂದ ಹರಿದು ಬಂದ ನೀರು ಮಂಡಲಿಯ ಒಳಚರಂಡಿಗೆ ವಿಸರ್ಜಿತವಾಗತಕ್ಕದ್ದು.

(ಸಿ) ಈ ಉಪ-ಪ್ರಕರಣದ ಉಪಬಂಧಗಳು, ತನ್ನ ಯಾವುದೇ ಭಾಗವು ಮಂಡಲಿಯ ಒಳಚರಂಡಿಯಿಂದ ಮೂವತ್ತೈದು ಮೀಟರುಗಳ ಅಂತರದೊಳಗಿರುವಂಥ ಯಾವುದೇ ಆವರಣಕ್ಕೆ ಅನ್ವಯವಾಗತಕ್ಕದ್ದು.

(4) ಯಾವುದೇ ಆವರಣಗಳನ್ನು ಮಂಡಲಿಯ ಒಳಚರಂಡಿಯೊಡನೆ ಜೋಡಿಸುವ ಯಾವುದೇ ಚರಂಡಿಯು ಅಂಥ ಆವರಣದ ನೀರು ಪರಿಣಾಮಕಾರಿಯಾಗಿ ಹರಿದುಹೋಗಲು ಸಾಕಷ್ಟಿದ್ದರೆ ಮತ್ತು ಅನ್ಯಥಾ ಆಕ್ಷೇಪಣೀಯವಾಗಿರದಿದ್ದರೆ, ಮಂಡಲಿಯ ಅಭಿಪ್ರಾಯದ ಮೇರೆಗೆ, ಸದರಿ ಸ್ಥಳೀಯ ಪ್ರದೇಶದಲ್ಲಿರುವ ಸಾಮಾನ್ಯ ಚರಂಡಿ ವ್ಯವಸ್ಥೆಗೆ ಅನುಗುಣವಾಗಿರದಿದ್ದರೆ, ಮಂಡಲಿಯು ಸದರಿ ಆವರಣಗಳ ಮಾಲೀಕನ ವಿಳಾಸಕ್ಕೆ ಕಳಿಸಲಾದ ಲಿಖಿತ ನೋಟೀಸಿನ ಮೂಲಕ-

(ಎ) ಇಂಥ ಚರಂಡಿಯನ್ನು ಮುಚ್ಚಬೇಕೆಂದು, ನಿಲ್ಲಿಸಬೇಕೆಂದು ಅಥವಾ ನಾಶ ಮಾಡಬೇಕೆಂದು ಮತ್ತು ಆ ಉದ್ದೇಶದ ಸಲುವಾಗಿ ಅವಶ್ಯವಿರುವ ಯಾವುದೇ ಕಾಮಗಾರಿಯನ್ನು ಮಾಡಬೇಕೆಂದು ನಿರ್ದೇಶಿಸಬಹುದು; ಅಥವಾ

(ಬಿ) ಈ ಬಗ್ಗೆ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಹೊಲಸಿನ ಮತ್ತು ದೂಷಿತ ನೀರಿನ ಬಗ್ಗೆ ಮಾತ್ರ ಅಥವಾ ಮಳೆ ನೀರಿನ ಹಾಗೂ ಭೂಮಿಯ ಕೆಳಪದರಿನ ಕಲುಷಿತವಲ್ಲದ ನೀರನ್ನು ಸಾಗಿಸುವುದಕ್ಕೆ ಮಾತ್ರ ಆ ಚರಂಡಿಯನ್ನು ಉಪಯೋಗಿಸಬಹುದೆಂದು ನಿರ್ದೇಶಿಸಬಹುದು:

ಪರಂತು,-

(i) ಆವರಣಗಳ ನೀರು ಅಷ್ಟೇ ಪರಿಣಾಮಕಾರಿಯಾಗಿ ಹರಿದುಹೋಗಲು ಮತ್ತು ತಾನು ಸೂಕ್ತವೆಂದು ಭಾವಿಸುವ ಯಾವುದೇ ಮಂಡಲಿಯ ಒಳಚರಂಡಿಯೊಡನೆ ಕೂಡಿಕೊಳ್ಳಲು ಬೇರೊಂದು ಚರಂಡಿಯನ್ನು ಮಂಡಲಿಯು ಏರ್ಪಡಿಸುವ ಷರತ್ತಿಗೆ ಒಳಪಟ್ಟ ಹೊರತು (ಎ) ಖಂಡದ ಮೇರೆಗೆ ಮಂಡಲಿಯು ಯಾವುದೇ ಚರಂಡಿಯನ್ನು ಮುಚ್ಚಬಾರದು, ನಿಲ್ಲಿಸಬಾರದು, ನಾಶಪಡಿಸಬಾರದು; ಮತ್ತು

(ii) ಮಂಡಲಿಯಿಂದ ಹಾಗೆ ಒದಗಿಸಲಾದ ಯಾವುದೇ ಚರಂಡಿಯ ಮತ್ತು (ಎ) ಖಂಡದ ಮೇರೆಗೆ ಮಾಡಲಾದ ಯಾವುದೇ ಕಾಮಗಾರಿಯ ವೆಚ್ಚಗಳನ್ನು ಮಂಡಲಿಯು ವಹಿಸತಕ್ಕದ್ದು.][1]

## ಅಧ್ಯಾಯ - VII

## ಹಣಕಾಸು, ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ

**29. ಮಂಡಲಿಯ ನಿಧಿಗಳು.**- (1) ಮಂಡಲಿಯು ತನ್ನ ಸ್ವಂತ ನಿಧಿಯನ್ನು ಹೊಂದಿರತಕ್ಕದ್ದು.

(2). ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಯಾರೇ ವ್ಯಕ್ತಿ ಅಥವಾ ನಿಕಾಯ ಅಥವಾ ಸಂಘಟನೆ ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ-ಇವುಗಳಿಂದ ಸಾಲಗಳು, ಅನುದಾನಗಳು, ಧನ ಸಹಾಯಗಳು, ದಾನಗಳು ಮತ್ತು ಕೊಡುಗೆಗಳನ್ನು ಮಂಡಲಿಯು ಸ್ವೀಕರಿಸಬಹುದು.

(3) ಈ ಅಧಿನಿಯಮದ ಕಾರಣದಿಂದಾಗಿ ಮಂಡಲಿಯಿಂದ ಅಥವಾ ಅದರ ಪರವಾಗಿ ಸ್ವೀಕರಿಸಲಾದ ಎಲ್ಲಾ ಹಣ, ಮಂಡಲಿಯಿಂದ ಮಾರಲಾದ ಜಮೀನಿನ ಅಥವಾ ಯಾವುದೇ ಇತರ ರೀತಿಯ ಸ್ವತ್ತಿನ ಉತ್ಪತ್ತಿ ಮಂಡಲಿಗೆ ಪ್ರಾಪ್ತವಾಗುವ ಎಲ್ಲಾ ಋಣಭಾರಗಳು, ಎಲ್ಲಾ ಬಡ್ಡಿಗಳು, ಲಾಭಗಳು ಮತ್ತು ಇತರ ಹಣಗಳು ಸೇರಿ ಮಂಡಲಿಯ ನಿಧಿಯಾಗತಕ್ಕದ್ದು.

(4) ಹಿಂದಿನ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಮತ್ತು ಮಂಡಲಿಯ ನಿಧಿಯ ಭಾಗವಾಗಿ ರಚಿತವಾಗಿರುವ ಎಲ್ಲಾ ಹಣ ಮತ್ತು ಸ್ವೀಕೃತಿಗಳನ್ನು ನಿಯಮಿಸಬಹುದಾದಂಥ ಸವಿವರ ಲೆಕ್ಕ ಶೀರ್ಷಿಕೆ ಅಡಿಯಲ್ಲಿ, ಸರ್ಕಾರದ ಸಾರ್ವಜನಿಕ ಲೆಕ್ಕದಲ್ಲಿ; ಅಥವಾ

(ಎ) ಭಾರತೀಯ ರಿಸರ್ವ್ ಬ್ಯಾಂಕು ಅಧಿನಿಯಮ,1934 (1934ರ ಕೇಂದ್ರ ಅಧಿನಿಯಮ 12)ರ ಮೇರೆಗೆ ರಚಿಸಲಾದ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ; ಅಥವಾ

(ಬಿ) ಭಾರತೀಯ ಸ್ಟೇಟ್ ಬ್ಯಾಂಕು ಅಧಿನಿಯಮ,1955 (1955ರ ಕೇಂದ್ರ ಅಧಿನಿಯಮ 23) ರ ಮೇರೆಗೆ ರಚಿಸಲಾದ ಭಾರತೀಯ ಸ್ಟೇಟ್ ಬ್ಯಾಂಕ್; ಅಥವಾ

[1][(ಬಿಬಿ) ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ; ಅಥವಾ][1]

1. 1977ರ ಅಧಿನಿಯಮ 20ರ ಮೂಲಕ 29.7.1977 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 5) ರಲ್ಲಿ ಪರಿಭಾಷಿಸಲಾಗಿರುವಂತೆ ಯಾವುದೇ ಸಂವಾದಿ ಹೊಸ ಬ್ಯಾಂಕಿನಲ್ಲಿ ಠೇವಣಿಯಿಡತಕ್ಕದ್ದು ಮತ್ತು ಸದರಿ ಖಾತೆಯನ್ನು, ಮಂಡಲಿಯು ಪ್ರಾಧಿಕಾರ ನೀಡಬಹುದಾದಂಥ ಅಧಿಕಾರಿಗಳು ನಿಯಮಿಸಬಹುದಾದಂತಹ ರೀತಿಯಲ್ಲಿ ನಿರ್ವಹಿಸತಕ್ಕದ್ದು:

ಪರಂತು, ಮಂಡಲಿಯು ತಕ್ಷಣದ ಉಪಯೋಗಕ್ಕೆ ಅವಶ್ಯಕವಿಲ್ಲದಂಥ ಮೊತ್ತವನ್ನು ಸರ್ಕಾರವು ಅನುಮೋದಿಸಿರುವಂಥ ಭದ್ರತೆಗಳು ಅಥವಾ ಡಿಬೆಂಚರುಗಳಲ್ಲಿ ತೊಡಗಿಸಬಹುದು.

**30. ಮಂಡಲಿಗೆ ಧನಸಹಾಯಗಳು, ಸಾಲಗಳು ಮತ್ತು ಅನುದಾನಗಳು.**- ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರತಿ ಸಂದರ್ಭದಲ್ಲಿ ಸರ್ಕಾರಗಳು ನಿರ್ಧರಿಸಬಹುದಾದಂತಹ ನಿಬಂಧನೆ ಮತ್ತು ಷರತ್ತುಗಳ ಮೇಲೆ ಮಂಡಲಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಕಾಲಕಾಲಕ್ಕೆ, ಧನ ಸಹಾಯಗಳು ಮತ್ತು ಅನುದಾನಗಳು ಅಥವಾ ಸಾಲಗಳನ್ನು ನೀಡಬಹುದು.

**31. ಸಾಲ ಪಡೆಯಲು ಮತ್ತು ಸಾಲ ನೀಡಲು ಮಂಡಲಿಯ ಅಧಿಕಾರ.**- (1) ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ಈ ಸಂಬಂಧದಲ್ಲಿ ಹೊರಡಿಸಲಾದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳಿಗೊಳಪಟ್ಟು ಮತ್ತು ಅದರ ಪೂರ್ವಾನುಮೋದನೆಯೊಂದಿಗೆ, ಮಂಡಲಿಯು ಕಾಲಕಾಲಕ್ಕೆ ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಿರುವ ಹಣವನ್ನು ಈ ಮುಂದೆ ಕೊಟ್ಟಿರುವ ಯಾವುದೇ ಒಂದು ವಿಧಾನ ಅಥವಾ ಹೆಚ್ಚಿನ ವಿಧಾನಗಳ ಮೂಲಕ ಸಾಲ ಪಡೆಯಬಹುದು, ಎಂದರೆ:-

(ಎ) ಯಾವುದೇ ಬ್ಯಾಂಕು ಅಥವಾ ಇತರ ಹಣಕಾಸು ಸಂಸ್ಥೆಗಳು ಅಥವಾ ಜೀವವಿಮಾ ನಿಗಮ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 31)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತ ಜೀವವಿಮಾ ನಿಗಮದಿಂದ ಸಾಲ ಎತ್ತುವುದು;

(ಬಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಸಾಲ ಎತ್ತುವುದು;

(ಸಿ) ಸಾರ್ವಜನಿಕರಿಗೆ ಬಾಂಡುಗಳ, ಸ್ಟಾಕುಗಳ, ಡಿಬೆಂಚರುಗಳನ್ನು ನೀಡುವ ಮೂಲಕ ಅಥವಾ ಅನ್ಯಥಾ ಸರ್ಕಾರದಿಂದ ಅನುಮೋದಿತವಾದ ರೀತಿ ಮತ್ತು ವಿಧದಲ್ಲಿ ಸಾಲ ಎತ್ತುವುದು.

(2) ಮಂಡಲಿಯು, ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳಿಗೊಳಪಟ್ಟು, ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಯಾವುದೇ ಯೋಜನೆಗೆ ಏರ್ಪಾಟು ಮಾಡಲು, ಅದನ್ನು ನಿಯಂತ್ರಿಸಲು ಅಥವಾ ಅಭಿವೃದ್ಧಿಪಡಿಸಲು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ತಾನು ನಿರ್ಣಯಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ತನ್ನ ನಿಧಿಯಿಂದ ಸಾಲಗಳು ಮತ್ತು ಮುಂಗಡಗಳನ್ನು ನೀಡಬಹುದು.

[1][**31ಎ. ದರಗಳು ಇತ್ಯಾದಿಗಳನ್ನು ವಿಧಿಸಲು ಮಂಡಲಿಯ ಅಧಿಕಾರ.**- ಮಂಡಲಿಯು, ತನ್ನಲ್ಲಿ ನಿಹಿತವಾಗಿರುವ ಯಾವುದೇ ನೀರು ಸರಬರಾಜು ಅಥವಾ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧದಲ್ಲಿ, ದರಗಳು, ಶುಲ್ಕಗಳು, ಬಾಡಿಗೆಗಳು ಮತ್ತು ಇತರ ವೆಚ್ಚಗಳನ್ನು ವಿಧಿಸಬಹುದು ಮತ್ತು ಈ ಮುಂದಿನವುಗಳಿಗಾಗಿ ಸಾಕಷ್ಟು ಆದಾಯವನ್ನು ಒದಗಿಸಲು, ಎಂದರೆ-

(ಎ) ಕಾರ್ಯಾಚರಣೆ ವೆಚ್ಚಗಳು, ತೆರಿಗೆಗಳು ಮತ್ತು ಬಡ್ಡಿಸಂದಾಯಗಳನ್ನು ಭರಿಸಲು ಮತ್ತು ಪರ್ಯಾಪ್ತ ನಿರ್ವಹಣೆ ಮತ್ತು ಸವಕಳಿಗೆ ಅವಕಾಶ ಕಲ್ಪಿಸಲು;

(ಬಿ) ಸಾಲಗಳು ಮತ್ತು ಇತರ ರೀತಿಯ ಎರವಲುಗಳನ್ನು ಮರುಪಾವತಿ ಮಾಡಲು;

(ಸಿ) ವರ್ಷದಿಂದ ವರ್ಷಕ್ಕೆ ಸಾಮಾನ್ಯವಾಗಿ ಮಾಡಬೇಕಾದ ಸುಧಾರಣೆಗಾಗಿ ಹಣ ಸಹಾಯ ಮಾಡಲು;

(ಡಿ) ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಪ್ರಗತಿಗಾಗಿ ಪ್ರಯೋಜನ ಕಾರಿಯಾಗುವಂಥ ಇತರ ಉದ್ದೇಶಗಳಿಗಾಗಿ

- ಕಾಲಕಾಲಕ್ಕೆ ಅಂಥ ದರಗಳನ್ನು, ಶುಲ್ಕಗಳನ್ನು, ಬಾಡಿಗೆಗಳನ್ನು ಮತ್ತು ಇತರ ವೆಚ್ಚಗಳನ್ನು ಬದಲಾಯಿಸಬಹುದು.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**32. ಸಾಲಗಳಿಗಾಗಿ ಸರ್ಕಾರದ ಖಾತರಿ.-** ಈ ಅಧಿನಿಯಮದ ಮೇರೆಗೆ ಸಿದ್ಧಪಡಿಸಲಾದ ಯೋಜನೆಗಳ ತನಿಖೆ, ಸಿದ್ಧತೆ ಅಥವಾ ಜಾರಿಯ ಸಂಬಂಧದಲ್ಲಿ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಮಂಡಲಿಯು ನೀಡಲು ಉದ್ದೇಶಿಸಲಾದ ಅಥವಾ ಮಂಡಲಿ ಎತ್ತಲು ಉದ್ದೇಶಿಸಿರುವ ಯಾವುದೇ ಸಾಲದ ಅಸಲಿನ ಮತ್ತು ಬಡ್ಡಿಯ ಸಂದಾಯದ ಬಗ್ಗೆ ಸರ್ಕಾರವು ತಾನು ಯುಕ್ತವೆಂದು ಭಾವಿಸುವ ರೀತಿಯಲ್ಲಿ ಖಾತರಿ ನೀಡಬಹುದು:

ಪರಂತು, ಸರ್ಕಾರವು, ಅಂತಹ ಯಾವುದಾದರೂ ಖಾತರಿಗಳು ಜಾರಿಯಲ್ಲಿರುವಷ್ಟು ಕಾಲ, ಪ್ರಸಕ್ತ ಹಣಕಾಸು ವರ್ಷದಲ್ಲಿ ಖಾತರಿಗಳನ್ನೇನಾದರೂ ಕೊಟ್ಟಿದ್ದರೆ ಅವುಗಳ ವಿವರಣೆಯನ್ನು ಮತ್ತು ಅಂತಹ ಯಾವುದೇ ಖಾತರಿಗಳ ಕಾರಣದಿಂದಾಗಿ ರಾಜ್ಯದ ಸಂಚಿತ ನಿಧಿಯಿಂದ ಪಾವತಿ ಮಾಡಲಾಗಿರುವ ಅಥವಾ ಹಾಗೆ ಪಾವತಿ ಮಾಡಿದ ಯಾವುದಾದರೂ ಹಣದ ಮರುಪಾವತಿಗಾಗಿ ರಾಜ್ಯದ ಸಂಚಿತ ನಿಧಿಗೆ ಪಾವತಿ ಮಾಡಲಾಗಿರುವ ಒಟ್ಟು ಮೊಬಲಗುಗಳ ಇಂದಿನವರೆಗಿನ ಲೆಕ್ಕವನ್ನು ಪ್ರತಿ ವರ್ಷವೂ ಆಯವ್ಯಯದ ಅಧಿವೇಶನ ಕಾಲದಲ್ಲಿ ರಾಜ್ಯದ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**33. ಡಿಬೆಂಚರುಗಳ ನಮೂನೆ, ಸಹಿ, ವಿನಿಮಯ, ವರ್ಗಾವಣೆ ಮತ್ತು ಪರಿಣಾಮ.-** (1) ಡಿಬೆಂಚರುಗಳ ಮೇಲೆ ಮಂಡಲಿಯು ಹಣವನ್ನು ಸಾಲ ಪಡೆದುಕೊಂಡಾಗಲೆಲ್ಲಾ ಅದು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮಂಡಲಿಯು ನಿರ್ದಿಷ್ಟಪಡಿಸಬಹುದಾದ ನಮೂನೆಯಲ್ಲಿ ಇರತಕ್ಕದ್ದು.

(2) ಎಲ್ಲಾ ಡಿಬೆಂಚರುಗಳಿಗೆ ವ್ಯವಸ್ಥಾಪಕ ನಿರ್ದೇಶಕ ಅಥವಾ ಕಾರ್ಯದರ್ಶಿ ಅಥವಾ ಮಂಡಲಿಯ ಅಧಿಕಾರಿ ನಿರ್ದೇಶಕರುಗಳ ಪೈಕಿ ಯಾರೇ ಒಬ್ಬರು ರುಜು ಹಾಕತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಡಿಬೆಂಚರನ್ನು ಹೊಂದಿರುವವರು ಅದಕ್ಕೆ ಬದಲಾಗಿ (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಧದಲ್ಲಿ ಮತ್ತು ಮಂಡಲಿಯು ನಿರ್ಧರಿಸಬಹುದಾದಂಥ ನಿಬಂಧನೆಗಳ ಮೇಲೆ ಡಿಬೆಂಚರುಗಳನ್ನು ಪಡೆಯಬಹುದು.

(4) ಮಂಡಲಿಯು ನೀಡಿದ ಪ್ರತಿಯೊಂದು ದಿಬೆಂಚರು ಅದರಲ್ಲಿ ಇತರೇ ವಿಧಾನದಲ್ಲಿ ವರ್ಗಾವಣೆಯನ್ನು ನಿರ್ದಿಷ್ಟಪಡಿಸಿದ್ದ ಹೊರತು ಹಿಂಬರಹದ ಮೂಲಕ ವರ್ಗಾಯಿತವಾಗತಕ್ಕದ್ದು.

(5) ಮಂಡಲಿಯಿಂದ ಹೊರಡಿಸಿದ ಡಿಬೆಂಚರುಗಳಿಗೆ ಲಗತ್ತಿಸಲಾದ ಎಲ್ಲಾ ಕೂಪನ್‌ಗಳು ವ್ಯವಸ್ಥಾಪಕ ನಿರ್ದೇಶಕನ ಸಹಿಯೊಂದಿಗಿರತಕ್ಕದ್ದು ಮತ್ತು ಅಂಥ ಸಹಿಯನ್ನು ಕೆತ್ತಿಸಬಹುದು, ಕಲ್ಲಚ್ಚು ಮಾಡಬಹುದು ಅಥವಾ ಯಾವುದೇ ರೀತಿಯ ಯಂತ್ರ ವಿಧಾನದ ಮೂಲಕ ಮುದ್ರಿಸಬಹುದು.

**34. ಮಂಡಲಿಯ ಆದಾಯ ಮತ್ತು ವೆಚ್ಚದ ಅಂದಾಜುಗಳನ್ನು ಪರಿಗಣನೆಗಾಗಿ ವಾರ್ಷಿಕವಾಗಿ ಮಂಡಲಿ ಮುಂದೆ ಮಂಡಿಸುವುದು.-** (1) ಸಭಾಧ್ಯಕ್ಷರು, ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯಬೇಕಾದ ವಿಶೇಷ ಸಭೆಯಲ್ಲಿ ಮುಂದಿನ ವರ್ಷದ ಮಂಡಲಿಯ ಆದಾಯ ಮತ್ತು ವೆಚ್ಚದ ಒಂದು ಅಂದಾಜನ್ನು ಮಂಡಲಿಯ ಮುಂದೆ ಮಂಡಿಸತಕ್ಕದ್ದು.

(2) ಅಂಥ ಪ್ರತಿಯೊಂದು ಅಂದಾಜು, ಮಂಡಲಿಯ ಎಲ್ಲಾ ಹೊಣೆಗಳ ಯುಕ್ತ ನೆರವೇರಿಕೆಗಾಗಿ ಮತ್ತು ಈ ಅಧಿನಿಯಮದ ಧಕ್ಷ ನಿರ್ವಹಣೆಗಾಗಿ ಉಪಬಂಧಗಳನ್ನು ಕಲ್ಪಿಸತಕ್ಕದ್ದು.

(3) ಅಂಥ ಪ್ರತಿಯೊಂದು ಅಂದಾಜಿನಲ್ಲಿ ಬಂಡವಾಳ ಮತ್ತು ರಾಜಸ್ವ ನಿಧಿಗಳನ್ನು ಪ್ರತ್ಯೇಕವಾಗಿ ತೋರಿಸತಕ್ಕದ್ದು ಮತ್ತು ಮಂಡಲಿಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಅದನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಅಂಥ ಪ್ರತಿಯೊಂದು ಅಂದಾಜನ್ನು ಸಂಕಲಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಅಂಚೆಯ ಮೂಲಕ ಅಥವಾ ಇತರ ರೀತಿಯಲ್ಲಿ ಮಂಡಲಿಯ ಮುಂದೆಅಂದಾಜನ್ನು ಮಂಡಿಸಲಿರುವ ದಿನಾಂಕಕ್ಕೆ ಕಡೇಪಕ್ಷ ಹತ್ತು ಪೂರ್ಣ ದಿನಗಳ ಮೊದಲು ಪ್ರತಿಯೊಬ್ಬ ನಿರ್ದೇಶಕನಿಗೆ ಕಳುಹಿಸಿಕೊಡತಕ್ಕದ್ದು.

(5) ಮೂಲ ಬಜೆಟ್ ಅಂದಾಜಿನಲ್ಲಿ ಒಳಗೊಂಡಿಲ್ಲದ ಎಲ್ಲಾ ವೆಚ್ಚಗಳೂ ಸೇರಿದ ಒಂದು ಪರಿಷ್ಕೃತ ಅಂದಾಜು ಇದ್ದಲ್ಲಿ, ಅದನ್ನು ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ನಡೆಯಬೇಕಾದ ವಿಶೇಷ ಸಭೆಯಲ್ಲಿ ಮಂಡಲಿಯ ಮುಂದೆ ಮಂಡಿಸತಕ್ಕದ್ದು.

(6) ಮಂಡಲಿಯು ಹಾಗೆ ಅದರ ಮುಂದೆ ಮಂಡಿಸಲಾದ ಪ್ರತಿಯೊಂದು ಅಂದಾಜನ್ನು ಪರಿಶೀಲಿಸತಕ್ಕದ್ದು ಮತ್ತು ಯಾವುದೇ ಮಾರ್ಪಾಟುಗಳಿಲ್ಲದೆ ಅಥವಾ ತಾನು ಸೂಕ್ತವೆಂದು ಭಾವಿಸುವ ಮಾರ್ಪಾಟುಗಳೊಂದಿಗೆ ಅದನ್ನು ಮಂಜೂರು ಮಾಡತಕ್ಕದ್ದು.

**35. ಅಂದಾಜುಗಳಿಗೆ ಸರ್ಕಾರದ ಅನುಮೋದನೆ.-** (1) ಮಂಡಲಿಯಿಂದ ಮಂಜೂರಾದಂಥ ಪ್ರತಿಯೊಂದು ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಸ್ವೀಕರಿಸಿದ ನಂತರ ಮೂರು ತಿಂಗಳ ಒಳಗೆ ಯಾವುದೇ ಸಮಯದಲ್ಲಿ ಅದು,-

(ಎ) ಅಂದಾಜನ್ನು ಅನುಮೋದಿಸಬಹುದು, ಅಥವಾ

(ಬಿ) ಅಂದಾಜನ್ನು ಅಥವಾ ಅದರ ಯಾವುದೇ ಒಂದು ಭಾಗವನ್ನು ಅನುಮತಿಸದೇ ತಿದ್ದುಪಡಿಗಾಗಿ ಮಂಡಲಿಗೆ ಹಿಂತಿರುಗಿಸಬಹುದು.

(2) ಆ ರೀತಿ ಮಂಡಲಿಗೆ ಯಾವುದೇ ಅಂದಾಜನ್ನು ಹಿಂತಿರುಗಿಸಿದ್ದರೆ, ಅದನ್ನು ಕೂಡಲೇ ತಿದ್ದುಪಡಿ ಮಾಡತಕ್ಕದ್ದು ಮತ್ತು ತಿದ್ದುಪಡಿ ಮಾಡಲಾದ ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಅನಂತರ ಸರ್ಕಾರ ಅದನ್ನು ಪುನಃ ಅನುಮೋದಿಸಬಹುದು.

**36. ಪೂರಕ ಅಂದಾಜು.-** (1) ಯಾವುದೇ ವರ್ಷಕ್ಕೆ ಅಂದಾಜು ಮಂಜೂರಾಗಿದ್ದರೆ, ಆ ವರ್ಷಾವಧಿಯ ಯಾವುದೇ ಸಮಯದಲ್ಲಿ ಮಂಡಲಿಯು, ಪೂರಕ ಅಂದಾಜನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು ಮತ್ತು ಅದನ್ನು ವಿಶೇಷ ಸಭೆಯಲ್ಲಿ ಮಂಡಿಸುವಂತೆ ಮಾಡಬಹುದು.

(2) 34ನೇ ಪ್ರಕರಣದ (3),(4) ಮತ್ತು (6)ನೇ ಉಪ-ಪ್ರಕರಣಗಳ ಉಪಬಂಧಗಳು ಮತ್ತು 35ನೇ ಪ್ರಕರಣವು ಪ್ರತಿಯೊಂದು ಪೂರಕ ಅಂದಾಜುಗಳಿಗೆ ಅನ್ವಯವಾಗತಕ್ಕದ್ದು.

**37. ಮಂಡಲಿಯಿಂದ ಸಾಲಗಳ ಮರು ಸಂದಾಯ.-** ಮಂಡಲಿಯು ತಾನು ತೆಗೆದುಕೊಂಡ ಸಾಲವನ್ನು, ಸರ್ಕಾರದವರಿಂದ ಅನುಮೋದಿತವಾದಂಥ ಈ ಮುಂದಿನ ವಿಧಾನಗಳ ಪೈಕಿ ಯಾವುದಾದರು ಒಂದು ವಿಧಾನದಲ್ಲಿ ತಾನು ಒಪ್ಪಿಕೊಳ್ಳಲಾದ ಅವಧಿಯೊಳಗೆ ಅದನ್ನು ಮರು ಸಂದಾಯ ಮಾಡತಕ್ಕದ್ದು, ಎಂದರೆ-

(ಎ) ಆ ಸಾಲದ ಸಂಬಂಧದಲ್ಲಿ 38ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಒಂದು ಋಣತೀರಿಕೆ ನಿಧಿಯಿಂದ;

(ಬಿ) ಸದರಿ ಅವಧಿಯ ಪೂರ್ತಿ ಅಸಲು ಅಥವಾ ಅಸಲು ಮತ್ತು ಬಡ್ಡಿಯೊಂದಿಗೆ ವಾರ್ಷಿಕ ಅಥವಾ ಅರೆ ವಾರ್ಷಿಕ ಸಮನಾದ ಕಂತುಗಳಲ್ಲಿ ಸಂದಾಯ ಮಾಡುವ ಮೂಲಕ;

(ಸಿ) ಈ ಉದ್ದೇಶಗಳಿಗಾಗಿ ಸಾಲ ತೆಗೆದುಕೊಂಡ ಹಣದಿಂದ;

(ಡಿ) ಸಾಲದ ಸಂಬಂಧದಲ್ಲಿ 38ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಋಣ ತೀರಿಕೆ ನಿಧಿಯಿಂದ ಭಾಗಶಃ ಮತ್ತು ಈ ಉದ್ದೇಶಗಳಿಗಾಗಿ ಹಣವನ್ನು ಸಾಲ ಪಡೆಯಲಾಗಿರುವ ಹಣದಿಂದ ಭಾಗಶಃವಾಗಿ; ಅಥವಾ

(ಇ) ಸರ್ಕಾರದ ಪೂರ್ವ ಅನುಮತಿಯೊಂದಿಗೆ ಯಾವುದೇ ಇತರ ಮೂಲಗಳಿಂದ

- ಸಂದಾಯ ಮಾಡತಕ್ಕದ್ದು.

**38. ಋಣತೀರಿಕೆ ಮತ್ತು ಇತರ ನಿಧಿಗಳ ಸ್ಥಾಪನೆ ಮತ್ತು ಅವುಗಳ ನಿರ್ವಹಣೆ.-** ಮಂಡಲಿಯು, ವಿನಿಯಮಗಳಿಂದ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ರೀತಿಯಲ್ಲಿ ಒಂದು ಋಣ ತೀರಿಕೆ ನಿಧಿ, ಉಳಿತಾಯ ಮೀಸಲು ನಿಧಿ ಮತ್ತು ಒಂದು ಅಭಿವೃದ್ಧಿ ನಿಧಿಯನ್ನು ರಚಿಸಬಹುದು, ಅಂಥ ನಿಧಿಗಳನ್ನು ಸರ್ಕಾರದ ಅನುಮೋದನೆಯೊಂದಿಗೆ ಮಂಡಲಿಯು ನಿರ್ಧರಿಸಬಹುದಾದಂಥ ರೀತಿಯಲ್ಲಿ ಬಂಡವಾಳ ಹೂಡತಕ್ಕದ್ದು.

**39. ವಾರ್ಷಿಕ ವರದಿಗಳು, ಅಂಕಿ ಅಂಶ ಮತ್ತು ವಿವರಣೆಗಳು.-** (1) ಮಂಡಲಿಯು, ಪ್ರತಿ ವರ್ಷದ ಕೊನೆಯಲ್ಲಿ ಸಾಧ್ಯವಾದಷ್ಟು ಕೂಡಲೇ ನಿಯಮಿಸಬಹುದಾದಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ರೀತಿಯಲ್ಲಿ ಹಿಂದಿನ ವರ್ಷದಲ್ಲಿನ ಅದರ ಚಟುವಟಿಕೆಗಳನ್ನು ವಿವರಿಸುವ ಒಂದು ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಆ ವರದಿಯಲ್ಲಿ ಮುಂದಿನ ವರ್ಷದಲ್ಲಿ ಮಂಡಲಿಯವರು ಕೈಗೊಳ್ಳಬಹುದಾದಂಥ ಚಟುವಟಿಕೆಗಳೇನಾದರೂ ಇದ್ದಲ್ಲಿ ಅದರ ವಿವರಗಳನ್ನು ಕೊಡತಕ್ಕದ್ದು ಮತ್ತು ಸರ್ಕಾರವು, ಆ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಅದನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(2) ಯಾವುದೇ ಪ್ರಸ್ತಾವಿತ ಅಥವಾ ಸರ್ಕಾರದವರು ಕಾಲಕಾಲಕ್ಕೆ ಅಗತ್ಯ ಪಡಿಸಬಹುದಾದಂಥ ಚಾಲ್ತಿ ಯೋಜನೆ ಸಂಬಂಧದಲ್ಲಿ ಮಂಡಲಿಯು, ನಿಯಮಿಸಬಹುದಾದಂಥ ಅಥವಾ ಸರ್ಕಾರವು ನಿರ್ದೇಶಿಸಬಹುದಾದಂಥ ಸಮಯದಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ವಿಧಾನಗಳಲ್ಲಿ, ಅಂಥ ಅಂಕಿ ಅಂಶಗಳು, ಮತ್ತು ವಿವರಣೆಗಳು ಹಾಗೂ ಅಂಥ ವಿವರಪಟ್ಟಿಕೆಗಳನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

**40. ಲೆಕ್ಕ ಮತ್ತು ಲೆಕ್ಕಪರಿಶೋಧನೆ.-** (1) ಮಂಡಲಿಯ ಲೆಕ್ಕಗಳನ್ನು ವಿನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ನಿರ್ವಹಿಸತಕ್ಕದ್ದು. ಮಂಡಲಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಗಳ ವಾರ್ಷಿಕ ವಿವರಣೆ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಮಂಡಲಿಯ ಲೆಕ್ಕಗಳು ಈ ಸಂಬಂಧದಲ್ಲಿ ಸರ್ಕಾರವು ನೇಮಕ ಮಾಡಬಹುದಾದಂಥ ಲೆಕ್ಕಪರಿಶೋಧಕರಿಂದ ವರ್ಷಕ್ಕೊಮ್ಮೆ ಪರಿಶೋಧಿತವಾಗತಕ್ಕದ್ದು.

(3) (2)ನೇ ಉಪ-ಪ್ರಕರಣದ ಮೇರೆಗೆ ನೇಮಕ ಮಾಡಲಾದ ಲೆಕ್ಕ ಪರಿಶೋಧಕನು, ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ನಿಯಮಿಸಬಹುದಾದಂಥ ಹಕ್ಕುಗಳು, ವಿಶೇಷಾಧಿಕಾರಗಳು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು

ವಿಶೇಷವಾಗಿ ಪುಸ್ತಕಗಳು, ಲೆಕ್ಕಗಳಿಗೆ ಸಂಬಂಧಿಸಿದ ವೋಚರುಗಳು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಮಂಡಲಿಯ ಯಾವುದಾದರೂ ಕಚೇರಿಗಳ ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಕಾರ್ಯದರ್ಶಿಯು, ಲೆಕ್ಕಪರಿಶೋಧಕರ ವರದಿಯನ್ನು ಮುದ್ರಿಸುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ಅದರ ಒಂದು ಮುದ್ರಿತ ಪ್ರತಿಯನ್ನು ಪ್ರತಿಯೊಬ್ಬ ನಿರ್ದೇಶಕನಿಗೂ ಕಳುಹಿಸತಕ್ಕದ್ದು ಮತ್ತು ಅದರ ಮೇಲಿನ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮಂಡಲಿಯ ಮುಂದೆ ಅಂಥ ವರದಿಯನ್ನು ಮಂಡಿಸತಕ್ಕದ್ದು.

(5) ಮಂಡಲಿಯು, ಲೆಕ್ಕಪರಿಶೋಧಕರು ಎತ್ತಿ ತೋರಿಸಬಹುದಾದ ಯಾವುದೇ ದೋಷಗಳು ಅಥವಾ ಅಕ್ರಮಗಳನ್ನು ಕೂಡಲೇ ಪರಿಹರಿಸತಕ್ಕದ್ದು ಮತ್ತು ಅದರ ಮೇಲೆ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.

41. **ಲೆಕ್ಕಪರಿಶೋಧಕರಿಗೆ ಪರಿಶ್ರಮ ಧನ.-** ಮಂಡಲಿಯು ಸದರಿ ಲೆಕ್ಕ ಪರಿಶೋಧಕರಿಗೆ ಸರ್ಕಾರದವರು ನಿರ್ದೇಶಿಸಬಹುದಾದಂಥ ಪರಿಶ್ರಮ ಧನವನ್ನು ಸಂದಾಯ ಮಾಡತಕ್ಕದ್ದು.

42. **ಸರ್ಕಾರಕ್ಕೆ ಕಳುಹಿಸಬೇಕಾದ ಮತ್ತು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾದ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿ.-** (1) ಲೆಕ್ಕ ಪರಿಶೋಧಕರಿಂದ ಪ್ರಮಾಣೀಕರಿಸಲಾದ, ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಮಂಡಲಿಯ ಲೆಕ್ಕಗಳನ್ನು ಸರ್ಕಾರಕ್ಕೆ ವಾರ್ಷಿಕವಾಗಿ ಕಳುಹಿಸತಕ್ಕದ್ದು ಮತ್ತು ಸರ್ಕಾರವು ಈ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಸೂಚನೆಗಳನ್ನು ಮಂಡಲಿಗೆ ನೀಡಬಹುದು ಮತ್ತು ಮಂಡಲಿಯು ಅಂಥ ಸೂಚನೆಗಳನ್ನು ಪಾಲಿಸತಕ್ಕದ್ದು.

(2) ಸರ್ಕಾರವು,-

(ಎ) (1)ನೇ ಉಪ-ಪ್ರಕರಣದ ಮೇರೆಗೆ, ತನಗೆ ಕಳುಹಿಸಲಾದ ಮಂಡಲಿಯ ಲೆಕ್ಕಗಳನ್ನು ಅದರ ಮೇಲಿನ ಪರಿಶೋಧನಾ ವರದಿಯೊಂದಿಗೆ ವಿಧಾನ ಮಂಡಲದ ಮುಂದೆ ಪ್ರತಿ ವರ್ಷ ಮಂಡಿಸುವಂತೆ ಮಾಡತಕ್ಕದ್ದು; ಮತ್ತು

(ಬಿ) ನಿಯಮಿಸಿದ ರೀತಿಯಲ್ಲಿ, ಮಂಡಲಿಯ ಲೆಕ್ಕಗಳನ್ನು ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಸೂಕ್ತ ಬೆಲೆಯಲ್ಲಿ ಅದರ ಪ್ರತಿಗಳು ಲಭ್ಯವಾಗುವಂತೆ ಮಾಡತಕ್ಕದ್ದು.

43. **ವಸೂಲಾಗದ ಮೊತ್ತಗಳನ್ನು ಲೆಕ್ಕದಿಂದ ತೆಗೆದು ಹಾಕುವುದಕ್ಕೆ ಅಧಿಕಾರಗಳು.-** ಮಂಡಲಿಯು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಕರಾರಿನ ಮೇರೆಗೆ ಅಥವಾ ಅನ್ಯಥಾ ಆಗಿರುವ ಬಾಕಿಯ ಅಥವಾ ಆ ಸಂಬಂಧದಲ್ಲಿ ಸಂದಾಯವಾಗತಕ್ಕ ಯಾವುದೇ ಮೊತ್ತವನ್ನು, ಅದಕ್ಕೆ ಬರಬೇಕಾದ ಯಾವುದೇ ಬಾಕಿಯನ್ನು ಲೆಕ್ಕದಿಂದ ತೆಗೆದುಹಾಕಬಹುದು.

## ಅಧ್ಯಾಯ - VIII

## ದಂಡನೆಗಳು ಮತ್ತು ಕಾರ್ಯವಿಧಾನ

44. **ಕೆಲವು ಸಂದರ್ಭಗಳಲ್ಲಿ ಯಾವುದೇ ಅನರ್ಹತೆ ಇಲ್ಲದಿರುವುದು.-** ಯಾರೇ ವ್ಯಕ್ತಿಯು, ಅವನು ಮಂಡಲಿಯ ಅಧ್ಯಕ್ಷ ಅಥವಾ ನಿರ್ದೇಶಕನಾಗಿರುವ ಕಾರಣ ಮಾತ್ರದಿಂದಲೇ ಅವನು ಕರ್ನಾಟಕ ವಿಧಾನ ಸಭೆಯ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯನಾಗಲು ಅಥವಾ ಸದಸ್ಯನಾಗಿ ಆಯ್ಕೆಯಾಗಲು, ಅನರ್ಹನಾಗಿರತಕ್ಕದ್ದಲ್ಲ.

[1][44ಎ. **ನೀರು ಸರಬರಾಜು ಸಂಬಂಧವಾದ ಅಪರಾಧಕ್ಕಾಗಿ ಮಾಲೀಕರ ಮತ್ತು ಅನುಭವದಾರರ ಜಂಟಿ ಮತ್ತು ಪ್ರತ್ಯೇಕ ಹೊಣೆಗಾರಿಕೆ.-** ಮಂಡಲಿಯ ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದ ಯಾವುದೇ ಆವರಣದಲ್ಲಿ, ಈ ಅಧಿನಿಯಮದ ಮೇರೆಗೆ ನೀರು ಸರಬರಾಜಿನ ಸಂಬಂಧದಲ್ಲಿ ಯಾವುದೇ ಅಪರಾಧವು ಘಟಿಸಿದರೆ, ನೀರಿನ ಚಾರ್ಜುಗಳನ್ನು ಪಾವತಿ ಮಾಡಲು ಮಾಲೀಕನು, ಮೂಲತಃ ಹೊಣೆಗಾರನಾದ ವ್ಯಕ್ತಿ ಮತ್ತು ಆ ಆವರಣದ ಅನುಭವದಾರನು ಅಂಥ ಅಪರಾಧಕ್ಕೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಯಾಗಿರತಕ್ಕದ್ದು.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

45. **ಕಂಟ್ರಾಕ್ಟರನಿಗೆ ಅಡ್ಡಿಪಡಿಸುವುದಕ್ಕಾಗಿ ಅಥವಾ ಗುರುತನ್ನು ತೆಗೆದುಹಾಕಿದುದಕ್ಕಾಗಿ ದಂಡನೆ.-** ಯಾರೇ ವ್ಯಕ್ತಿಯು,-

(ಎ) ಮಂಡಲಿಯು ಯಾವ ವ್ಯಕ್ತಿಯೊಂದಿಗೆ ಕರಾರು ಮಾಡಿಕೊಂಡಿರುವುದೋ ಆ ವ್ಯಕ್ತಿಯನ್ನು, ಅವನು ತನ್ನ ಕರ್ತವ್ಯದ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಆಧಾರದಿಂದ ಅಥವಾ ಪರಿಣಾಮದಿಂದ ಅವನು ಅಧಿಕಾರ ಪಡೆದ ಅಥವಾ ಅವನನ್ನು ಅಗತ್ಯಪಡಿಸಿದ ಯಾವುದೇ ಕಾರ್ಯ ತತ್ವ ನೆರವೇರಿಕೆಯಲ್ಲಿ ಅಥವಾ ನಿರ್ವಹಣೆಯಲ್ಲಿ ಅಡ್ಡಿಪಡಿಸಿದರೆ ಅಥವಾ ಪೀಡಿಸಿದರೆ, ಅಥವಾ

(ಬಿ) ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಅಥವಾ ಮಂಜೂರು ಮಾಡಲಾದ ಯೋಜನೆಯ ಮೂಲಕ, ಅಧಿಕಾರ ನೀಡಲಾದ ಕಾಮಗಾರಿಗಳ ನಿರ್ವಹಣೆಗೆ

ಅವಶ್ಯಕವಾಗಿರುವ ಯಾವುದೇ ಮಟ್ಟ ಅಥವಾ ದಿಕ್ಕನ್ನು ಸೂಚಿಸುವ ಉದ್ದೇಶಕ್ಕಾಗಿ ಹಾಕಲಾದ ಯಾವುದೇ ಗುರುತನ್ನು ತೆಗೆದು ಹಾಕಿದರೆ

- ಇನ್ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂತಹ ಜುಲ್ಮಾನೆಯಿಂದ ಅವನು ದಂಡನೀಯನಾಗತಕ್ಕದ್ದು.

**46. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡನೆ.**- ಈ ಅಧಿನಿಯಮದ ಯಾವುದೇ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಯೋಜನೆ ಅಥವಾ ಅದರ ಮೇರೆಗೆ ಮಂಜೂರು ಮಾಡಿದ ಯೋಜನೆಗಳನ್ನು ಉಲ್ಲಂಘಿಸುವ [1][ಅಥವಾ ಸದರಿ ಯಾವುದೇ ಉಪಬಂಧಗಳ ಮೇರೆಗೆ ಅವನಿಗೆ ಕಾನೂನು ಬದ್ಧವಾಗಿ ನೀಡಿದ ಯಾವುದೇ ಆದೇಶ ಅಥವಾ ಸೂಚನೆ ಅಥವಾ ಅದರ ಮೇರೆಗೆ ಕಾನೂನು ಬದ್ಧವಾಗಿ ಮಾಡಿದ ಯಾವುದೇ ಕೋರಿಕೆಯನ್ನು ಪಾಲಿಸಲು ತಪ್ಪಿದ][1] ಯಾರೇ ವ್ಯಕ್ತಿಯು, ಅಂತಹ ಉಲ್ಲಂಘನೆಗಾಗಿ ಯಾವುದೇ ಇತರ ದಂಡನೆಯನ್ನು ಉಪಬಂಧಿಸಿರದಿದ್ದರೆ,

(ಎ) ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಮತ್ತು

(ಬಿ) ಅಂಥ ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ ಅಂಥ ಮೊದಲನೇ ಉಲ್ಲಂಘನೆಯ ತರುವಾಯದ ಪ್ರತಿಯೊಂದು ದಿನಕ್ಕಾಗಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**47. ಪ್ರಾಸಿಕ್ಯೂಷನ್ ಮತ್ತು ಅಪರಾಧಗಳ ಅಧಿವಿಚಾರಣೆ.**- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಅಥವಾ ಯೋಜನೆಯ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧದ ಬಗ್ಗೆ ಮಂಡಲಿ ಅಥವಾ ಈ ಸಂಬಂಧದಲ್ಲಿ ಅದರಿಂದ ಅಧಿಕಾರ ಪಡೆದ ಇತರ ಯಾರೇ ಅಧಿಕಾರಿಯು, ಅಂಥ ಅಪರಾಧದ ಬಗ್ಗೆ, ಅದು ನಡೆದ ನಂತರದ ಆರು ತಿಂಗಳ ಅವಧಿಯೊಳಗಾಗಿ, ಅದರ ಬಗ್ಗೆ ಫಿರ್ಯಾದಿ ಮಾಡಿದ ಹೊರತು ಯಾವುದೇ ನ್ಯಾಯಾಲಯವು ಯಾವುದೇ ಅಪರಾಧದ ಬಗ್ಗೆ ಸಂಜ್ಞಾನ ತೆಗೆದುಕೊಳ್ಳತಕ್ಕದ್ದಲ್ಲ.

(2) ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕೆಳಗಿನ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

**48. ಅಪರಾಧಿಗಳ ದಸ್ತಗಿರಿ.**- (1) ಮುಖ್ಯ ಕಾನ್‌ಸ್ಟೇಬಲ್ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಯಾರೇ ಪೋಲೀಸ್ ಅಧಿಕಾರಿಯು, ತನ್ನ ಸಮ್ಮುಖದಲ್ಲಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಯೋಜನೆಯ ವಿರುದ್ಧವಾಗಿ ಯಾವುದೇ ಅಪರಾಧವನ್ನು ಮಾಡಿದ ಯಾರೇ ವ್ಯಕ್ತಿಯನ್ನು, ಅವನಿಗೆ ಅಪರಾಧ ಮಾಡಿದ ವ್ಯಕ್ತಿಯ ಹೆಸರು ಮತ್ತು ವಿಳಾಸ ತಿಳಿಯದಿದ್ದರೆ ಮತ್ತು ಅಂಥ ವ್ಯಕ್ತಿಯನ್ನು ಕೇಳಿದಾಗ ತನ್ನ ಹೆಸರು ಮತ್ತು ವಿಳಾಸವನ್ನು ಕೊಡಲು ಅವನು ನಿರಾಕರಿಸಿದರೆ ಅಥವಾ ಆ ಅಧಿಕಾರಿಗೆ ಸುಳ್ಳೆಂದು ನಂಬಲು ಕಾರಣವಿರುವ ಹೆಸರು ಮತ್ತು ವಿಳಾಸವನ್ನು ಕೊಟ್ಟಿದ್ದರೆ ಅವನನ್ನು ದಸ್ತಗಿರಿ ಮಾಡಬಹುದು.

(2) ಹಾಗೆ ದಸ್ತಗಿರಿ ಮಾಡಲಾದ ಯಾರೇ ವ್ಯಕ್ತಿಯನ್ನು ಅವನ ನಿಜವಾದ ಹೆಸರು ಮತ್ತು ವಿಳಾಸವನ್ನು ಖಚಿತಪಡಿಸಿಕೊಂಡ ತರುವಾಯ ಅಥವಾ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸುವುದಕ್ಕೆ ಅವಶ್ಯಕವಾದ ಸಮಯಕ್ಕಿಂತ ಹೆಚ್ಚಿನ ಅವಧಿಯವರೆಗೆ ಬಂಧನದಲ್ಲಿಡತಕ್ಕದ್ದಲ್ಲ ಮತ್ತು ಯಾವ ಸಂದರ್ಭದಲ್ಲೂ, ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ಅವನ ಬಂಧನದ ಅವಧಿಯು ದಸ್ತಗಿರಿ ಮಾಡಿದ ಸಮಯದಿಂದ ಇಪ್ಪತ್ತ ನಾಲ್ಕು ಗಂಟೆಗಳ ಅವಧಿಯನ್ನು ಮೀರತಕ್ಕದ್ದಲ್ಲ.

**49. ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಿದ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ಘಟಿಸಿದ ಕಾಲಕ್ಕೆ ಕಂಪನಿಯ ವ್ಯವಹಾರ ನಿರ್ವಹಣೆಯ ಪ್ರಭಾರದಲ್ಲಿರುವ ಮತ್ತು ಜವಾಬ್ದಾರನಾದ ಪ್ರತಿಯೊಬ್ಬನನ್ನು ಹಾಗೂ ಆ ಕಂಪನಿಯನ್ನು ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡನೀಯನಾಗತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ಘಟಿಸಿತೆಂದು ಅಥವಾ ಅಪರಾಧ ಘಟಿಸುವುದನ್ನು ತಡೆಯಲು ತಾನು ಎಲ್ಲಾ ಯಥೋಚಿತ ಪ್ರಯತ್ನವನ್ನು ಮಾಡಿದ್ದನೆಂದು ರುಜುವಾತುಪಡಿಸಿದರೆ, ಈ ಉಪ-ಪ್ರಕರಣದಲ್ಲಿರುವುದಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಯಾವುದೇ ಶಿಕ್ಷೆಗೆ, ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1) ನೆಯ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವು ಕಂಪೆನಿಯಿಂದ ಘಟಿಸಿದಲ್ಲಿ ಮತ್ತು ಅಪರಾಧವು ಕಂಪೆನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಘಟಿಸಿದೆ ಎಂದು ಅಥವಾ ಅವನ ನಿರ್ಲಕ್ಷ್ಯತೆಗೆ ಅದನ್ನು ಆರೋಪಿಸಬಹುದೆಂದು ರುಜುವಾತಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದನ್ನು ತನ್ನ ವಿರುದ್ಧ ಕಾನೂನು ವ್ಯವಹರಣೆ ಮತ್ತು ತದನುಸಾರವಾಗಿ ದಂಡನೀಯನಾಗಲು ಬದ್ಧನಾಗಿರತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪೆನಿ" ಎಂದರೆ ಒಂದು ನಿಗಮಿತ ನಿಕಾಯ ಮತ್ತು ಇದರಲ್ಲಿ ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವೂ ಸೇರುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ.

## ಅಧ್ಯಾಯ - IX

### ಸಂಕೀರ್ಣ

**50. ವ್ಯವಸ್ಥಾಪಕ ನಿರ್ದೇಶಕನ ತುರ್ತು ಅಧಿಕಾರಗಳು.-** ವ್ಯವಸ್ಥಾಪಕ ನಿರ್ದೇಶಕನು, ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕ ಸೇವೆ ಅಥವಾ ಅವರ ಸುರಕ್ಷತೆಗಾಗಿ, ಮಂಡಲಿಯ ಮಂಜೂರಾತಿಯ ಅವಶ್ಯಕತೆಯಿರುವ ಯಾವುದೇ ಕಾಮಗಾರಿಯ ನಿರ್ವಹಣೆ ಅಥವಾ ಯಾವುದೇ ಕಾರ್ಯ ಮಾಡುವುದು ತೀರ ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅಂತಹ ಯಾವುದೇ ಕಾರ್ಯ ನಿರ್ವಹಣೆ ಅಥವಾ ಯಾವುದೇ ಕಾರ್ಯ ಮಾಡುವುದಕ್ಕೆ ನಿರ್ದೇಶಿಸಬಹುದು ಮತ್ತು ಅಂಥ ಕಾಮಗಾರಿಯ ನಿರ್ವಹಣೆ ಮತ್ತು ಅಂಥ ಕಾರ್ಯ ನಿರ್ವಹಣೆಯ ಸಂಬಂಧದ ವೆಚ್ಚಗಳನ್ನು ಮಂಡಲಿಯ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದೂ ನಿರ್ದೇಶಿಸಬಹುದು:

ಪರಂತು,-

(ಎ) ಯಾವುದೇ ನಿರ್ದಿಷ್ಟ ಕಾಮಗಾರಿಯನ್ನು ನಿರ್ವಹಿಸುವುದನ್ನು ಅಥವಾ ಯಾವುದೇ ನಿರ್ದಿಷ್ಟ ಕಾರ್ಯ ಮಾಡುವುದನ್ನು ನಿಷೇಧಿಸುವ ಮಂಡಲಿಯ ಅಥವಾ ಸರ್ಕಾರದ ಯಾವುದೇ ನಿರ್ದೇಶನವನ್ನು ಉಲ್ಲಂಘಿಸಿ ಈ ಪ್ರಕರಣದ ಮೇರೆಗೆ ಅವನು ಕಾರ್ಯ ಮಾಡತಕ್ಕದ್ದಲ್ಲ.

(ಬಿ) ಈ ಪ್ರಕರಣದ ಮೇರೆಗೆ ಅವನು ತೆಗೆದುಕೊಂಡ ಕ್ರಮವನ್ನು ಮತ್ತು ಅದರ ಬಗೆಗಿನ ಕಾರಣಗಳನ್ನು ಮಂಡಲಿಯ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಸಹ ಸಲ್ಲಿಸತಕ್ಕದ್ದು ಮತ್ತು ಸಂದರ್ಭಾನುಸಾರ ಮಂಡಲಿ ಅಥವಾ ಸರ್ಕಾರವು, ಅಂಥ ವರದಿಯ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ನೀಡಬಹುದು.

**51. ಕಾನೂನು ವ್ಯವಹರಣೆಗಳ ಹೂಡುವಿಕೆ, ರಾಜಿ, ಮುಂತಾದವುಗಳು ಮತ್ತು ಕಾನೂನು ಸಲಹೆಯನ್ನು ಪಡೆಯುವುದು- ಇವುಗಳಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರ ಅಧಿಕಾರಗಳು.-** ಮಂಡಲಿಯ ನಿಯಂತ್ರಣಕ್ಕೊಳಪಟ್ಟು, ವ್ಯವಸ್ಥಾಪಕ ನಿರ್ದೇಶಕನು,-

(ಎ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಕಾನೂನು ವ್ಯವಹರಣೆಗಳನ್ನು ಹೂಡಬಹುದು, ಸಮರ್ಥಿಸಿಕೊಳ್ಳಬಹುದು ಅಥವಾ ಹಿಂತೆಗೆದುಕೊಳ್ಳಬಹುದು;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಥವಾ ಸರ್ಕಾರವು ನಿಯಮಿಸಲಾದ ನಿಯಮದ ಮೇರೆಗೆ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮಗಳಿಗೆ ವಿರುದ್ಧವಾದ ಯಾವುದೇ ಅಪರಾಧದ ಸಂಬಂಧದಲ್ಲಿ, ಕಾನೂನು ಬದ್ಧವಾಗಿ ರಾಜಿಮಾಡಿಕೊಳ್ಳಬಹುದು;

(ಸಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳ ಅಥವಾ ವಿನಿಯಮಗಳ ಅಥವಾ ಯೋಜನೆಗಳ ಮೇರೆಗೆ ಮಾಡಲಾದ ಯಾವುದೇ ಕ್ಲೇಮನ್ನು ಅಂಗೀಕರಿಸಬಹುದು, ಆ ಸಂಬಂಧದಲ್ಲಿ ರಾಜಿ ಮಾಡಿಕೊಳ್ಳಬಹುದು ಅಥವಾ ಅದನ್ನು ಹಿಂತೆಗೆದುಕೊಳ್ಳಬಹುದು; ಮತ್ತು

(ಡಿ) ಮಂಡಲಿಯಲ್ಲಿ ಅಥವಾ ಮಂಡಲಿಗೆ ಅಥವಾ ಮಂಡಲಿಯ ಯಾರೇ ಅಧಿಕಾರಿ ಅಥವಾ ನೌಕರನಲ್ಲಿ ನಿಹಿತವಾದ ಅಥವಾ ಅವನಿಗೆ ವಿಧಿಸಲಾದ ಯಾವುದೇ ಅಧಿಕಾರ ಅಥವಾ ಕರ್ತವ್ಯಗಳನ್ನು ಕಾನೂನುಬದ್ಧವಾಗಿ ಚಲಾಯಿಸುವುದು ಅಥವಾ ನಿರ್ವಹಿಸುವುದು ಅವಶ್ಯಕವೆಂದು ಅಥವಾ ಯುಕ್ತವಾದುದೆಂದು ಅಥವಾ ಮಂಡಲಿಯು ಅಪೇಕ್ಷಿಸಬಹುದಾದುದೆಂದು ಭಾವಿಸುವಂಥ ಈ ಪ್ರಕರಣದ ಪೂರ್ವೋಕ್ತ ಖಂಡಗಳಲ್ಲಿ, ಉಲ್ಲೇಖಿಸಲಾದ ಯಾವುದೇ ಉದ್ದೇಶಗಳಿಗಾಗಿ, ಕಾಲಕಾಲಕ್ಕೆ ಕಾನೂನು ಸಲಹೆ ಮತ್ತು ನೆರವನ್ನು ಪಡೆಯಬಹುದು.

**52. ಅಧಿಕಾರಗಳ ಪ್ರತ್ಯಾಯೋಜನೆ.-** (1) ಸರ್ಕಾರವು, ಅಧಿಸೂಚನೆಯ ಮೂಲಕ, 68ನೆಯ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರದ ಹೊರತು ಈ ಅಧಿನಿಯಮದ ಮೂಲಕ ಅದರಲ್ಲಿ ನಿಹಿತವಾದ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಯಾವುದೇ ಪ್ರಾಧಿಕಾರ ಅಥವಾ ಯಾರೇ ಅಧಿಕಾರಿಗೆ ಅಧಿಕಾರ ನೀಡಬಹುದು ಮತ್ತು ಹಾಗೆ ನೀಡಿದ ಅಧಿಕಾರವನ್ನು ಅದೇ ರೀತಿಯಲ್ಲಿ ಹಿಂತೆಗೆದುಕೊಳ್ಳಬಹುದು.

(2) ಮಂಡಲಿಯು, 18ನೇ ಪ್ರಕರಣದ ಮೇರೆಗೆ ಭೂಮಿಯನ್ನು ಆರ್ಜಿಸುವ ಮತ್ತು 68ನೇ ಪ್ರಕರಣದ ಮೇರೆಗೆ ವಿನಿಯಮಗಳನ್ನು ರಚಿಸುವ ಅಧಿಕಾರಗಳ ಹೊರತಾಗಿ, ಈ ಅಧಿನಿಯಮದ ಮೇರೆಗೆ, ತಾನು ಅವಶ್ಯವೆಂದು ಭಾವಿಸುವಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಅಧ್ಯಕ್ಷನಿಗೆ ಅಥವಾ ವ್ಯವಸ್ಥಾಪಕ ನಿರ್ದೇಶಕನಿಗೆ ಅಥವಾ ಮಂಡಲಿಯ ಯಾರೇ

ಇತರ ಅಧಿಕಾರಿಗೆ ಅಥವಾ ಮಂಡಲಿಯ ಕಾರ್ಯದರ್ಶಿ ಅಥವಾ ಯಾರೇ ಇತರ ಅಧಿಕಾರಿಗೆ ಲಿಖಿತದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಪ್ರತ್ಯಾಯೋಜಿಸಬಹುದು ಮತ್ತು ಅಂಥ ಅಧಿಕಾರಗಳನ್ನು ಅದೇ ರೀತಿಯಲ್ಲಿ ಹಿಂತೆಗೆದುಕೊಳ್ಳಬಹುದು.

(3) (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಪ್ರತ್ಯಾಯೋಜಿಸಲಾದ ಯಾವುದೇ ಅಧಿಕಾರಗಳ ಚಲಾಯಿಸುವಿಕೆಯು, ಅಧಿಸೂಚನೆ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಹಾಗೂ ಸರ್ಕಾರವು ಅಥವಾ ಈ ಸಂಬಂಧದಲ್ಲಿ ಸರ್ಕಾರವು ಅಧಿಕಾರ ನೀಡಿದ ಅಧಿಕಾರಿ ಅಥವಾ ಸಂದರ್ಭಾನುಸಾರ ಮಂಡಲಿಯು ಅಥವಾ ಈ ಸಂಬಂಧದಲ್ಲಿ ಮಂಡಲಿಯು ಅಧಿಕಾರ ನೀಡಿದ ಅಧಿಕಾರಿಯ ನಿಯಂತ್ರಣಕ್ಕೆ ಮತ್ತು ಪರಿಷ್ಕರಣೆಗೆ ಸಹ ಒಳಪಟ್ಟಿರತಕ್ಕದ್ದು.

(4) ಸಂದರ್ಭಾನುಸಾರ ಸರ್ಕಾರ ಅಥವಾ ಮಂಡಲಿಯು, ಹಾಗೆ ಅಧಿಕಾರ ಪಡೆದ ಯಾರೇ ಅಧಿಕಾರಿಯ ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ನಿಯಂತ್ರಿಸುವ ಅಥವಾ ಪರಿಷ್ಕರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**53. ಮಂಡಲಿಗೆ ಅಥವಾ ಸ್ಥಳೀಯ ಪ್ರಾಧಿಕಾರಗಳಿಗೆ ಆದೇಶಗಳು ಮತ್ತು ನಿರ್ದೇಶನಗಳನ್ನು ನೀಡುವುದಕ್ಕೆ ಸರ್ಕಾರದ ಅಧಿಕಾರ.-** ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅದರ ಅಭಿಪ್ರಾಯದಲ್ಲಿ ಅವಶ್ಯವಿರುವ ಅಥವಾ ಯುಕ್ತವಾಗಿರುವಂಥ ಆದೇಶಗಳು ಮತ್ತು ನಿರ್ದೇಶನಗಳನ್ನು ಮಂಡಲಿಗೆ ಅಥವಾ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಸಂದರ್ಭಾನುಸಾರ ಮಂಡಲಿ ಅಥವಾ ಅಂಥ ಸ್ಥಳೀಯ ಪ್ರಾಧಿಕಾರವು ಎಲ್ಲಾ ಅಂಥ ಆದೇಶಗಳು ಮತ್ತು ನಿರ್ದೇಶನಗಳನ್ನು ಜಾರಿಗೊಳಿಸತಕ್ಕದ್ದು.

**54. ಪೊಲೀಸ್ ಅಧಿಕಾರಿಗಳ ಕರ್ತವ್ಯಗಳು.-** (1) (ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾರ್ಯ ಯೋಜನೆಯ ಉಪಬಂಧಗಳನ್ನು ಕಾರ್ಯಗತಗೊಳಿಸಲು ಮತ್ತು ಜಾರಿಗೊಳಿಸಲು ಮಂಡಲಿಯೊಂದಿಗೆ ಸಹಕರಿಸುವುದು;

(ಬಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಯೋಜನೆಗೆ ವಿರುದ್ಧವಾದ ಯಾವುದೇ ಅಪರಾಧದ ಘಟನೆಯ ಬಗ್ಗೆ ಸಂಚು ಮಾಡುವ ಅಥವಾ ಅಪರಾಧ ನಡೆಸುವ ಬಗ್ಗೆ ಮಾಹಿತಿಯು ದೊರೆತ ಕೂಡಲೇ ಅಂಥ ಪೊಲೀಸ್ ಅಧಿಕಾರಿಯು, ಆ ಬಗ್ಗೆ ಮಂಡಲಿಯ ಸೂಕ್ತ ಅಧಿಕಾರಿಗೆ ಅಥವಾ ನೌಕರನಿಗೆ ವಿಳಂಬವಿಲ್ಲದೆ ತಿಳಿಸುವುದು; ಮತ್ತು

(ಸಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮ ಅಥವಾ ವಿನಿಯಮ ಅಥವಾ ಯೋಜನೆಯ ಮೇರೆಗೆ ಮಂಡಲಿಯಲ್ಲಿ ಅಥವಾ ಯಾರೇ ಅಂಥ ಅಧಿಕಾರಿ ಅಥವಾ ನೌಕರನಲ್ಲಿ ನಿಹಿತವಾದ ಯಾವುದೇ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸಲು, ಅಂಥ ಪೊಲೀಸ್ ಅಧಿಕಾರಿಯ ಸಹಾಯವನ್ನು ಸಕಾರಣವಾಗಿ ಕೋರುವ ಮಂಡಲಿಗೆ ಅಥವಾ ಮಂಡಲಿಯ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ನೆರವು ನೀಡುವುದು-ಪ್ರತಿಯೊಬ್ಬ ಪೊಲೀಸ್ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(2) ಈ ಅಧಿನಿಯಮದ ಮೂಲಕ ವಿಧಿಸಲಾದಂತಹ ಯಾವುದೇ ಕರ್ತವ್ಯ ಪಾಲನೆಯನ್ನು ಮಾಡದಿರುವ ಅಥವಾ ನಿರಾಕರಿಸುವ ಯಾರೇ ಪೊಲೀಸ್ ಅಧಿಕಾರಿಯು, 1963ರ [1][ಕರ್ನಾಟಕ][1] ಪೊಲೀಸ್ ಅಧಿನಿಯಮದ (1964ರ [1][ಕರ್ನಾಟಕ][1] ಅಧಿನಿಯಮ 4)ರ 65(ಬಿ) ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು.

1. 1976ರ ಅಧಿನಿಯಮ ಸಂಖ್ಯೆ 7ರ ಮೂಲಕ 4.3.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**55. ಮಂಡಲಿಯ ಮತ್ತು ಸ್ಥಳೀಯ ಪ್ರಾಧಿಕಾರಗಳ ನಡುವಿನ ವಿವಾದಗಳ ನ್ಯಾಯ ನಿರ್ಣಯ.-** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ವಿಷಯದ ಸಂಬಂಧದಲ್ಲಿ ಮಂಡಲಿ ಮತ್ತು ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸ್ಥಳೀಯ ಪ್ರಾಧಿಕಾರದ ನಡುವೆ ಅಥವಾ ಪ್ರಾಧಿಕಾರಗಳ ನಡುವೆ ವಿವಾದವು ಉದ್ಭವಿಸಿದಾಗ ಮತ್ತು ಆ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳು ಯಾವುವೇ ಮನವಿಗಳನ್ನು ಸಲ್ಲಿಸಿದ್ದರೆ, ಸರ್ಕಾರವು ಅವುಗಳನ್ನು ಪರಿಶೀಲಿಸಿದ ನಂತರ ಆ ಪಕ್ಷಕಾರರು ತಮ್ಮ ತಮ್ಮಲ್ಲೇ ಸ್ನೇಹಭಾವದಿಂದ ಅದನ್ನು ಇತ್ಯರ್ಥಪಡಿಸಿಕೊಳ್ಳಲು ಸಾಧ್ಯವಿಲ್ಲವೆಂದು ಅದು ಅಭಿಪ್ರಾಯಪಟ್ಟಲ್ಲಿ, ಅಂಥ ವಿವಾದವನ್ನು ಗಮನಕ್ಕೆ ತೆಗೆದುಕೊಳ್ಳಬಹುದು ಮತ್ತು ಅದನ್ನು ತಾನೇ ಇತ್ಯರ್ಥಪಡಿಸಬಹುದು.

(2) ಅದರ ಮೇಲಿನ ಸರ್ಕಾರದ ತೀರ್ಮಾನಕ್ಕೆ ಮಂಡಲಿ ಮತ್ತು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ಬದ್ಧವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಲು ಅವಕಾಶವಿರತಕ್ಕದ್ದಲ್ಲ.

[1][**55ಎ. ಕೆಲವು ಸಂದರ್ಭಗಳಲ್ಲಿ ಸರಬರಾಜು ಕಡಿಮೆಯಾದಾಗ ಅಥವಾ ಸರಬರಾಜು ಮಾಡದಿದ್ದಾಗ ಮಂಡಲಿಯ ಹೊಣೆಗಾರಿಕೆ ಆಗದಿರುವುದು.-** ಅಸಾಧಾರಣ ಅನಾವೃಷ್ಟಿ, ಇತರ ಅನಿವಾರ್ಯ ಕಾರಣ ಅಥವಾ ಅಪಘಾತ ಅಥವಾ ಕೊಳಾಯಿಗಳನ್ನು ಪುನಃ ಹಾಕುವ ಅಥವಾ ದುರಸ್ತಿ ಮಾಡುವ ಅವಶ್ಯಕತೆಯ ಸಂದರ್ಭದಲ್ಲಿ, ನೀರು ಸರಬರಾಜನ್ನು ನಿಲ್ಲಿಸಿದ ಬಗ್ಗೆ ಅಥವಾ ನೀರು ಸರಬರಾಜು ಮಾಡದ ಸಂದರ್ಭದಲ್ಲಿ ಮಂಡಲಿಯು ಯಾವುದೇ ದಂಡನೆಗೆ ಅಥವಾ ಹಾನಿ ಪರಿಹಾರಕ್ಕೆ ಬದ್ಧವಾಗತಕ್ಕದ್ದಲ್ಲ.

**55ಬಿ. ಕೊಳವೆಗಳು, ಸಾಲು ಕೊಳಾಯಿಗಳು ಮೊದಲಾದುವನ್ನು ಉಪಯೋಗಿಸುವ ಹಕ್ಕು.-** (1) ಮಂಡಲಿಯು, ಸ್ಥಳೀಯ ಪ್ರದೇಶದೊಳಗಿರುವ ಅಥವಾ ಇಲ್ಲದಿರುವ ಯಾವುದೇ ಸ್ಥಿರ ಸ್ವತ್ತನ್ನು ಆರ್ಜಿಸದೆ, ಅಂತಹ ಸ್ವತ್ತಿನ ಮೇಲೆ, ಕೆಳಗೆ, ಉದ್ದಕ್ಕೂ ಅಥವಾ ಅಡ್ಡಲಾಗಿ ಮುಖ್ಯ ಕೊಳವೆಗಳು ಅಥವಾ ಮುಖ್ಯ ಕೊಳವೆಗಳ ಸಾಲುಗಳನ್ನು ಹಾಕಬಹುದು ಅಥವಾ ಮುಖ್ಯ ಕೊಳವೆಗಳ ಸಾಲುಗಳನ್ನು ಅಥವಾ ಪೈಪುಗಳನ್ನು ಇಡಬಹುದು ಅಥವಾ ಹಾಕಬಹುದು ಅಥವಾ ವ್ಯವಸ್ಥೆ ಮಾಡಬಹುದು ಮತ್ತು ಮುಖ್ಯ ಕೊಳವೆಗಳನ್ನು ಅಥವಾ ಮುಖ್ಯ ಕೊಳವೆಗಳ ಸಾಲುಗಳನ್ನು ಅಥವಾ ಪೈಪುಗಳನ್ನು ಪರೀಕ್ಷಿಸುವ, ರೀಪೇರಿ ಮಾಡುವ, ಬದಲಾಯಿಸುವ ಅಥವಾ ತೆಗೆದು ಹಾಕುವ ಉದ್ದೇಶಕ್ಕಾಗಿ ಯಾವುದೇ ಸಮಯದಲ್ಲಾಗಲೀ ಯಾವುದೇ ಸ್ವತ್ತಿನ ಮೇಲೆ, ಕೆಳಗೆ, ಉದ್ದಕ್ಕೂ ಅಥವಾ ಅಡ್ಡಲಾಗಿ ಮುಖ್ಯ ಕೊಳವೆಗಳ ಸಾಲುಗಳನ್ನು ಅಥವಾ ಮುಖ್ಯ ಕೊಳವೆಗಳ ಪೈಪುಗಳನ್ನು ಇಡಲಾಗಿದೆಯೋ ಆ ಸ್ವತ್ತನ್ನು ಪ್ರವೇಶಿಸಬಹುದು:

ಪರಂತು, ಮಂಡಲಿಯು, ಯಾವ ಸ್ವತ್ತಿನ ಮೇಲೆ, ಕೆಳಗೆ, ಉದ್ದಕ್ಕೂ ಅಥವಾ ಅಡ್ಡಲಾಗಿ ಯಾವುದೇ ಕೊಳವೆಯನ್ನು ಅಥವಾ ಮುಖ್ಯ ಕೊಳಾಯಿಗಳ ಸಾಲುಗಳನ್ನು ಅಥವಾ ಪೈಪುಗಳನ್ನು ಇಟ್ಟಿದೆಯೋ ಅಥವಾ ಹಾಕಿದೆಯೋ ಅಂತಹ ಸ್ವತ್ತನ್ನು ಉಪಯೋಗಿಸುವ ಹಕ್ಕನ್ನು ಹೊರತುಪಡಿಸಿ ಇತರ ಯಾವುದೇ ಹಕ್ಕನ್ನು ಆರ್ಜಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಂಡಲಿಯು ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಸಾಧ್ಯವಾಗಬಹುದಾದಷ್ಟು ಕಡಿಮೆ ಹಾನಿ ಆಗುವ ಹಾಗೆ ಮತ್ತು ಅನಾನುಕೂಲತೆ ಆಗದ ಹಾಗೆ ಕೆಲಸ ಮಾಡತಕ್ಕದ್ದು ಮತ್ತು ತನ್ನಿಂದ ಆದ ಯಾವುದಾದರು ಹಾನಿ ಅಥವಾ ಅನಾನುಕೂಲತೆಯ ಬಗ್ಗೆ ಪೂರ್ಣ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 55ಎ ಮತ್ತು 55ಬಿ ಪ್ರಕರಣಗಳನ್ನು 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**56. ಇತರ ಕಾನೂನುಗಳ ಪರಿಣಾಮ.-** (1) ಈ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದಲ್ಲಿ ತಿಳಿಸಲಾದ ಯಾವುದೇ ವಿಷಯಗಳನ್ನು ವಿನಿಯಮಗೊಳಿಸುವುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಹೆಚ್ಚಿಗೆಯಾಗಿರತಕ್ಕದ್ದೇ ಹೊರತು ಅದನ್ನು ಅಲ್ಪೀಕರಿಸತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದಾವುದೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಯಾವುದೇ ಸ್ಥಳೀಯ ಪ್ರಾಧಿಕಾರವನ್ನು ಆ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿನ ಯಾವುದೇ ಪ್ರದೇಶದ ಸಂಬಂಧದಲ್ಲಿ ಯಾವುದೇ ಜಲಮಾರ್ಗ ನಿರ್ಮಿಸುವ, ಬದಲಾಯಿಸುವ, ದುರಸ್ತಿ ಮಾಡುವ ಅಥವಾ ನವೀಕರಿಸುವ ಅಥವಾ ಇತರ ಕೆಲಸಗಳ ಸಂಬಂಧದಲ್ಲಿ ಅದರ ಕರ್ತವ್ಯಗಳ ನಿರ್ವಹಣೆಯನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಯಾವುದೇ ರೂಢಿ, ಸಂಪ್ರದಾಯ ಅಥವಾ ಕರಾರು ಅಥವಾ ಒಂದು ನ್ಯಾಯಾಲಯದ ಡಿಕ್ರಿ ಅಥವಾ ಆದೇಶ ಅಥವಾ ಇತರ ಪ್ರಾಧಿಕಾರದಲ್ಲಿ ಇದಕ್ಕೆ ಅಸಂಗತವಾಗಿರುವುದು ಏನೇ ಇದ್ದರೂ ಪರಿಣಾಮಕಾರಿಯಾಗತಕ್ಕದ್ದು.

**57. ಮಂಡಲಿಯ ವಿರುದ್ಧ ದಾವೆಯ ನೋಟೀಸು.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾರ್ಯ ಯೋಜನೆಯ ಮೇರೆಗೆ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕೃತ್ಯದ ಬಗ್ಗೆ ಮಂಡಲಿಯ ವಿರುದ್ಧವಾಗಿ ಅಥವಾ ಮಂಡಲಿಯ ಯಾರೇ ನಿರ್ದೇಶಕ ಅಥವಾ ಅಧಿಕಾರಿ ಅಥವಾ ನೌಕರನ ವಿರುದ್ಧವಾಗಿ ಅಥವಾ ಮಂಡಲಿ ಅಥವಾ ಮಂಡಲಿಯ ಅಧ್ಯಕ್ಷ ಅಥವಾ ವ್ಯವಸ್ಥಾಪಕ ನಿರ್ದೇಶಕನ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧವಾಗಿ, ವ್ಯಾಜ್ಯದ ಕಾರಣ ಮತ್ತು ವಾದಿಯ ಹೆಸರು ಮತ್ತು ವಾಸಸ್ಥಳವನ್ನು ಮತ್ತು ಅವನು ಕ್ಲೇಮು ಮಾಡುವ ಪರಿಹಾರವನ್ನು ತಿಳಿಸಿರುವ ಲಿಖಿತ ನೋಟೀಸನ್ನು ಮಂಡಲಿಯ ಕಚೇರಿಗೆ ಅಥವಾ ಅಂಥ ಅಧಿಕಾರಿ, ನೌಕರ ಅಥವಾ ವ್ಯಕ್ತಿಯ ವಾಸಸ್ಥಳಕ್ಕೆ ಅದನ್ನು ರವಾನಿಸಿದ ಅಥವಾ ಅಲ್ಲಿ ಬಿಟ್ಟ ಶುರುವಾಯದ ಅರವತ್ತು ದಿನಗಳು ಮುಕ್ತಾಯವಾಗುವವರೆಗೆ, ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ ಮತ್ತು ವಾದಪತ್ರವು ಅಂಥ ನೋಟೀಸನ್ನು ರವಾನಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಒಂದು ಹೇಳಿಕೆಯನ್ನು ಒಳಗೊಂಡಿರಬೇಕು.

**58. ಪರಿಹಾರ ಸಂದಾಯ ಮಾಡಲು ಮಂಡಲಿಯ ಸಾಮಾನ್ಯ ಅಧಿಕಾರ.-** ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರದ ಹೊರತು ಯಾವುದೇ ಸಂದರ್ಭದಲ್ಲಿ, ಮಂಡಲಿಯಲ್ಲಿ ಅಥವಾ ಮಂಡಲಿಯ ಅಧ್ಯಕ್ಷ ಅಥವಾ ವ್ಯವಸ್ಥಾಪಕನಲ್ಲಿ ನಿರ್ದೇಶಕ ಅಥವಾ ಯಾರೇ ಅಧಿಕಾರಿ ಅಥವಾ ನೌಕರನಲ್ಲಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವನಲ್ಲಿ ನಿಹಿತವಾದ ಯಾವುವೇ ಅಧಿಕಾರಗಳನ್ನು ಚಲಾಯಿಸಿದ ಕಾರಣದಿಂದ ಯಾರೇ ವ್ಯಕ್ತಿಗೆ ಉಂಟಾದ ಹಾನಿಗೆ ಮಂಡಲಿಯು ಯುಕ್ತ ಪರಿಹಾರವನ್ನು ಸಂದಾಯ ಮಾಡಬಹುದು.

**59. ಅಪರಾಧಿಗಳು ತಮ್ಮಿಂದ ಉಂಟಾದ ಹಾನಿಗಳಿಗೆ ಸಂದಾಯ ಮಾಡಬೇಕಾದ ಪರಿಹಾರ.-** (1) ಯಾರೇ ಒಬ್ಬ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾರ್ಯ ಯೋಜನೆಯ ಮೇರೆಗೆ ಯಾವುದೇ ಒಂದು ಅಪರಾಧದ ಸಿದ್ಧದೋಷಿಯಾಗಿದ್ದಲ್ಲಿ, ಅಂಥ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸುವ ಮ್ಯಾಜಿಸ್ಟ್ರೇಟನು, ಅಂಥ ವ್ಯಕ್ತಿಯು ಅವನ ಯಾವ ಕೃತ್ಯ ಅಥವಾ ಲೋಪದ ಸಂಬಂಧದಲ್ಲಿ ಆತನು ಸಿದ್ಧದೋಷಿಯಾಗಿರುವನೋ ಆ ಕೃತ್ಯ ಅಥವಾ ಲೋಪದಿಂದ ಉಂಟಾದ ಯಾವುದೇ ಹಾನಿಯ ಬಗ್ಗೆ ಮಂಡಲಿಯಿಂದ ಅಥವಾ ಈ ಸಂಬಂಧದಲ್ಲಿ ಮಂಡಲಿಯು ಪ್ರಾಧಿಕೃತಗೊಳಿಸಿದ ಅದರ ಅಧಿಕಾರಿ ಅಥವಾ ನೌಕರನಿಂದ ಸ್ವೀಕರಿಸಿದ ಅರ್ಜಿಯ ಮೇರೆಗೆ

ಮಂಡಲಿ ಪರಿಹಾರವನ್ನು ಏಕೆ ಸಂದಾಯ ಮಾಡಬಾರದು ಎಂಬುದಕ್ಕೆ ಕೂಡಲೇ ಕಾರಣ ತೋರಿಸಲು ಅಂಥ ವ್ಯಕ್ತಿಯನ್ನು ಕೋರಬಹುದು.

(2) ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿಯು ತೋರಿಸಬಹುದಾದಂಥ ಯಾವುದೇ ಕಾರಣವನ್ನು ದಾಖಲು ಮಾಡತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು ಮತ್ತು ಅವನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ನಂತರ, ಮ್ಯಾಜಿಸ್ಟ್ರೇಟನಿಗೆ ಅಂಥ ವ್ಯಕ್ತಿಯು ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ಬಾಧ್ಯನಾಗಿರುವನೆಂದು ಮನಗಂಡರೆ, ಅವನು ತಾನು ನಿರ್ಣಯಿಸಬಹುದಾದಂಥ ಒಂದು ಸಾವಿರ ರೂಪಾಯಿಯನ್ನು ಮೀರದಂಥ ಮೊತ್ತದ ನಷ್ಟ ಪರಿಹಾರವನ್ನು ಅಂಥ ವ್ಯಕ್ತಿಯು ಮಂಡಲಿಗೆ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಬೇಕೆಂದು ನಿರ್ದೇಶಿಸಲಾದ ನಷ್ಟ ಪರಿಹಾರದ ಮೊತ್ತವನ್ನು ಕೂಡಲೇ ಅವನು ಸಂದಾಯ ಮಾಡದಿದ್ದರೆ, ಅಂಥ ವ್ಯಕ್ತಿಯ ಮೇಲೆ ಮ್ಯಾಜಿಸ್ಟ್ರೇಟನು ವಿಧಿಸಲಾದ ಜುಲ್ಮಾನೆ ಎಂಬಂತೆ ಅದನ್ನು ವಸೂಲು ಮಾಡತಕ್ಕದ್ದು.

**60. ಬಾಕಿಗಳನ್ನು ವಸೂಲು ಮಾಡುವ ವಿಧಾನ.**- ಕರಾರಿನ ನಿಬಂಧನೆಗಳ ಅನುಸಾರ ಅಥವಾ ಅನ್ಯಥಾ ಮಂಡಲಿಗೆ ಯಾವುದೇ ಮೊಬಲಗು ಬಾಕಿಯಿರುವ ಅಥವಾ ಅದರ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ಮಂಡಲಿಗೆ ಸಂದಾಯ ಮಾಡದಿದ್ದಲ್ಲಿ, ಮಂಡಲಿಯು ಅಂಥ ಮೊಬಲಗು ಅಥವಾ ಮೊತ್ತವನ್ನು, ಕಾನೂನಿನಲ್ಲಿ ಉಪಬಂಧಿಸಲಾದ ಯಾವುದೇ ಇತರ ಪರಿಹಾರೋಪಾಯಗಳಿಗೆ ಪ್ರತಿಕೂಲವಾಗದಂತೆ ಭೂಕಂದಾಯದ ಬಾಕಿ ಎಂಬಂತೆ ವಸೂಲು ಮಾಡತಕ್ಕದ್ದು.

**61. ಮಂಡಲಿಯ ಆದೇಶಗಳು ಮತ್ತು ಇತರ ಲಿಖಿತಗಳನ್ನು ಅಧಿಪ್ರಮಾಣೀಕರಿಸುವುದು.**- (1) ಮಂಡಲಿಯ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಮಂಡಲಿಯ ಕಾರ್ಯದರ್ಶಿ ಅಥವಾ ಈ ಸಂಬಂಧದಲ್ಲಿ ಮಂಡಲಿಯು ಲಿಖಿತದಲ್ಲಿ ಅಧಿಕೃತಗೊಳಿಸಿದ ಮಂಡಲಿಯ ಯಾರೇ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

(2) ವ್ಯವಸ್ಥಾಪಕ ನಿರ್ದೇಶಕ ಅಥವಾ ಈ ಸಂಬಂಧದಲ್ಲಿ ಲಿಖಿತದಲ್ಲಿ ಅಧಿಕೃತಗೊಳಿಸಿದ ಮಂಡಲಿಯ ಯಾರೇ ಒಬ್ಬ ಅಧಿಕಾರಿಯು, ಮಂಡಲಿಯ ಪರವಾಗಿ ಯಾವುದೇ ಒಪ್ಪಂದ ಅಥವಾ ಮಂಡಲಿಯ ಪರವಾಗಿ ಬರೆದುಕೊಡಬೇಕಾದ ಇತರೇ ಲಿಖಿತಗಳಿಗೆ ರುಜು ಮಾಡಬಹುದು.

**62. ನೋಟೀಸುಗಳ ಅಥವಾ ಬಿಲ್ಲುಗಳ ಸಹಿಗೆ ಮುದ್ರೆಯೊತ್ತುವುದು.**- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಮೂಲಕ ಮಂಡಲಿಯ ವ್ಯವಸ್ಥಾಪಕ ನಿರ್ದೇಶಕ ಅಥವಾ ಯಾರೇ ಇತರ ನಿರ್ದೇಶಕ ಅಥವಾ ಯಾರೇ ಒಬ್ಬ ಅಧಿಕಾರಿ ಅಥವಾ ನೌಕರನ ಸಹಿಯನ್ನು ಅಗತ್ಯಪಡಿಸುವ ಪ್ರತಿ ನೋಟೀಸು ಅಥವಾ ಬಿಲ್ಲು, ಅಂಥ ವ್ಯವಸ್ಥಾಪಕ ನಿರ್ದೇಶಕ ಅಥವಾ ಸಂದರ್ಭಾನುಸಾರ ಅಂಥ ಇತರ ನಿರ್ದೇಶಕ ಅಥವಾ ಅಂಥ ಅಧಿಕಾರಿ ಅಥವಾ ನೌಕರನ ಸಹಿಯ ಯಥಾ ಪ್ರತಿ ಮುದ್ರೆ ಹೊಂದಿದ್ದರೆ ಅದನ್ನು ಯುಕ್ತವಾಗಿ ಸಹಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**63. ಪ್ರವೇಶಾಧಿಕಾರ.**- (1) ವ್ಯವಸ್ಥಾಪಕ ನಿರ್ದೇಶಕ ಅಥವಾ ಈ ಪರವಾಗಿ ವ್ಯವಸ್ಥಾಪಕ ನಿರ್ದೇಶಕರಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಲಾದ ಯಾರೇ ಇತರ ವ್ಯಕ್ತಿಯು, ಸಹಾಯಕರು ಅಥವಾ ಕೆಲಸಗಾರರೊಂದಿಗೆ ಅಥವಾ ಅವರಿಲ್ಲದೆಯೇ-

(ಎ) ಯಾವುದೇ ತಪಾಸಣೆ ಮಾಡಲು, ಮೋಜಣಿ ಮಾಡಲು, ಅಳೆಯಲು, ಮೌಲ್ಯ ಮಾಪನ ಮಾಡಲು ಅಥವಾ ವಿಚಾರಣೆ ನಡೆಸಲು;

(ಬಿ) ಮಟ್ಟ ತೆಗೆದುಕೊಳ್ಳಲು;

(ಸಿ) ಅಗೆಯಲು ಅಥವಾ ಮೇಲ್ಮಣ್ಣಿನಲ್ಲಿ ಕೊರೆಯಲು;

(ಡಿ) ಎಲ್ಲೆಗಳನ್ನು ಮತ್ತು ಕಾಮಗಾರಿಯ ಉದ್ದೇಶಿತ ಸಾಲುಗಳನ್ನು ಗುರುತಿಸಲು;

(ಇ) ಗುರುತುಗಳನ್ನು ಇಡುವ ಮತ್ತು ಕಂದಕಗಳನ್ನು ತೋಡುವ ಮೂಲಕ ಅಂಥ ಮಟ್ಟಗಳನ್ನು, ಎಲ್ಲೆಗಳನ್ನು ಮತ್ತು ಸಾಲುಗಳನ್ನು ಗುರುತಿಸಲು;

(ಎಫ್) ಯಾವುದೇ ಜಮೀನಿನ ಮೇಲೆ, ಉದ್ದಕ್ಕೆ ಮತ್ತು ಅಡ್ಡಲಾಗಿ ಅಥವಾ ಕೆಳಗೆ ಪೈಪುಗಳನ್ನು ಇಡಲು ಚರಂಡಿಗಳನ್ನು ನಿರ್ಮಿಸಲು ಮತ್ತು ಇತರ ಅಳವಡಿಕೆಗಳನ್ನು ನಿರ್ವಹಿಸಲು; ಅಥವಾ

(ಜಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಮಂಜೂರು ಮಾಡಲಾದ ಕಾರ್ಯ ಯೋಜನೆ ಅಥವಾ ಅದರ ಮೇರೆಗೆ ಮಂಡಲಿಯು ರಚಿಸಲು ಉದ್ದೇಶಿಸಿರುವಂಥ ಯಾವುದೇ ಕಾರ್ಯ ಯೋಜನೆಯ ಉದ್ದೇಶಗಳಿಗಾಗಿ ಯಾವುದೇ ಕಾರ್ಯವನ್ನು ಮಾಡುವುದು ಅವಶ್ಯಕವಾದಾಗಲೆಲ್ಲ ಹಾಗೆ ಮಾಡಲು

-ಯಾವುದೇ ಜಮೀನಿನೊಳಗೆ ಅಥವಾ ಅದರ ಮೇಲೆ ಪ್ರವೇಶಿಸಬಹುದು:

ಪರಂತು,-

(ಎ) ಅಂಥ ಯಾವುದೇ ಪ್ರವೇಶವನ್ನು ಸೂರ್ಯಾಸ್ತದ ಹಾಗೂ ಸೂರ್ಯೋದಯದ ನಡುವಣ ಅವಧಿಯಲ್ಲಿ ಮಾಡತಕ್ಕದ್ದಲ್ಲ.

(ಬಿ) ಯಾವುದೇ ವಾಸದ ಮನೆ ಅಥವಾ ಸಾರ್ವಜನಿಕ ಕಟ್ಟಡ ಅಥವಾ ವಾಸದ ಸ್ಥಳವನ್ನಾಗಿ ಬಳಸುವ ಗುಡಿಸಲನ್ನು ಅದರ ಅನುಭೋಗದಾರನ ಸಮ್ಮತಿಯಿಲ್ಲದೆ ಹಾಗೂ ಅಂಥ ಪ್ರವೇಶದ ತನ್ನ ಉದ್ದೇಶವನ್ನು ಲಿಖಿತ ನೋಟೀಸಿನ ಮೂಲಕ ಅನುಭೋಗದಾರನಿಗೆ ಕೊನೇ ಪಕ್ಷ 24 ಗಂಟೆಗಳಿಗಿಂತ ಕಡಿಮೆಯಿಲ್ಲದಷ್ಟು ಅವಧಿಯ ಮೊದಲು ತಿಳಿಸದೇ ಯಾವುದೇ ಪ್ರವೇಶವನ್ನು ಮಾಡತಕ್ಕುದಲ್ಲ.

(ಸಿ) ಯಾವುದೇ ಆವರಣವನ್ನು, ನೋಟೀಸನ್ನು ಕೊಡದೆ ಅನ್ಯಥಾ ಪ್ರವೇಶಿಸಬಹುದಾದರೂ ಮಹಿಳೆಯರಿಗಾಗಿ ಇರುವ ಯಾವುದೇ ಕಟ್ಟಡದಿಂದ ಅದರಲ್ಲಿ ವಾಸಿಸುವವರು ತಮ್ಮ ಏಕಾಂತಕ್ಕೆ ಅಡ್ಡಿಯಾಗದಂತೆ ಕಟ್ಟಡದ ಬೇರೆ ಭಾಗಕ್ಕೆ ಹೋಗಲು ಸಾಧ್ಯವಾಗುವಂತೆ ಅವರಿಗೆ ಸಾಕಷ್ಟು ಮೊದಲು ನೋಟೀಸನ್ನು ಪ್ರತಿಯೊಂದು ಪ್ರಕರಣದಲ್ಲೂ ನೀಡತಕ್ಕದ್ದು.

(ಡಿ) ಆ ರೀತಿ ಪ್ರವೇಶಿಸಿದ ಸ್ಥಳದ ಅನುಭವದಾರರ ಸಾಮಾಜಿಕ ಮತ್ತು ಧಾರ್ಮಿಕ ಸಂಪ್ರದಾಯಗಳ ರೂಢಿಗೆ ಹಾಗೆ ಪ್ರವೇಶಿಸಿದ ಉದ್ದೇಶದ ಅವಶ್ಯಕತೆಗೆ ಸಂಗತವಾಗುವಷ್ಟು ಮಟ್ಟಿಗೆ ಯುಕ್ತ ಗಮನ ನೀಡತಕ್ಕದ್ದು.

(2) ಒಬ್ಬ ವ್ಯವಸ್ಥಾಪಕ ನಿರ್ದೇಶಕ ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ಅಧಿಕೃತಗೊಳಿಸಲಾದ ಒಬ್ಬ ವ್ಯಕ್ತಿಯು ಆ ಉಪ-ಪ್ರಕರಣದ ಅನುಸರಣೆಯಲ್ಲಿ ಯಾವುದೇ ಜಮೀನನ್ನು ಅಥವಾ ಜಮೀನಿನೊಳಗೆ ಪ್ರವೇಶ ಮಾಡಿದರೆ, ಅವನು ಅಂಥ ಪ್ರವೇಶವನ್ನು ಮಾಡಿದ ಸಮಯದಲ್ಲಿ ಮೇಲೆ ಹೇಳಿದಂತೆ ಉಂಟಾಗಬಹುದಾದ ಎಲ್ಲಾ ಹಾನಿಗಳಿಗೆ ಅವಶ್ಯಕ ಹಣವನ್ನು ಸಂದಾಯ ಮಾಡಬೇಕು ಅಥವಾ ನೀಡಬೇಕು ಮತ್ತು ಆ ರೀತಿ ಸಂದಾಯ ಮಾಡಿದ ಅಥವಾ ನೀಡಿದ ಮೊತ್ತವು ಸಾಕಾಗುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ವಿವಾದ ಉಂಟಾದ ಸಂದರ್ಭದಲ್ಲಿ ಅವನು ಆ ವಿವಾದವನ್ನು ಕೂಡಲೇ ಮಂಡಲಿಗೆ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ಮಂಡಲಿಯ ನಿರ್ಣಯವು ಅಂತಿಮವಾಗಿರತಕ್ಕದ್ದು.

**64. ಸದ್ಭಾವನೆಯಿಂದ ಮಾಡಿದ ಕ್ರಮದ ರಕ್ಷಣೆ.-** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾರ್ಯ ಯೋಜನೆಯ ಅನುಸರಣೆಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಗಳಿಗಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಗ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮ ಅಥವಾ ಕಾರ್ಯ ಯೋಜನೆಯ ಮೇರೆಗೆ ಸದ್ಭಾವನೆಯಿಂದ ರಚಿಸಿದ ಅಥವಾ ರಚಿಸಲು ಉದ್ದೇಶಿಸಿದ ಯಾವುದೇ ಕೃತ್ಯಗಳಿಂದ ಉಂಟಾದ ಅಥವಾ ಉಂಟಾಗಬಹುದಾದ ಯಾವುದೇ ಹಾನಿಗಳಿಗಾಗಿ ಸರ್ಕಾರ, ಮಂಡಲಿ ಅಥವಾ ಅದರ ಯಾವುದೇ ಸಮಿತಿಯವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರೇ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**65. ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು.-** ಮಂಡಲಿಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರನ್ನು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಕಾರ್ಯಗಳ ಜಾರಿಯನ್ನು ವಹಿಸಿಕೊಡಲಾದ ಯಾರೇ ವ್ಯಕ್ತಿಯನ್ನು ಭಾರತ ದಂಡ ಸಂಹಿತೆ 1860ರ (1860ರ ಕೇಂದ್ರ ಅಧಿನಿಯಮ XLV) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**66. 1894ರ ಕೇಂದ್ರ ಅಧಿನಿಯಮ I ಮತ್ತು 1914ರ ಕೇಂದ್ರ ಅಧಿನಿಯಮ IXರ ಮೇರೆಗೆ ಮಂಡಲಿಯು ಸ್ಥಳೀಯ ಪ್ರಾಧಿಕಾರವಾಗಿರುವುದು.-** ಮಂಡಲಿಯನ್ನು, ಭೂ ಅರ್ಜನಾ ಅಧಿನಿಯಮ, 1894ರ (1894ರ ಕೇಂದ್ರ ಅಧಿನಿಯಮ I) ಮತ್ತು 1914ರ ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮದ (1914ರ ಕೇಂದ್ರ ಅಧಿನಿಯಮ IX) ಉದ್ದೇಶಗಳಿಗಾಗಿ ಮಂಡಲಿಯನ್ನು ಒಂದು ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

[1]**66ಎ. ರಾಜ್ಯ ಸರ್ಕಾರದ ನಿರ್ದೇಶನಗಳು.-** (1) ಮಂಡಲಿಯು, ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರವು ಕಾರ್ಯನೀತಿಯ ಪ್ರಶ್ನೆಗಳ ಸಂಬಂಧದಲ್ಲಿ, ಅದಕ್ಕೆ ನೀಡಬಹುದಾದಂಥ ನಿರ್ದೇಶನಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು:

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 66ಎ ಯಿಂದ 66ಹೆಚ್ ವರೆಗಿನ ಪ್ರಕರಣಗಳನ್ನು 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, ಅಂಥ ನಿರ್ದೇಶನಗಳನ್ನು ಮಂಡಲಿಯೊಂದಿಗೆ ಸಮಾಲೋಚಿಸಿದ ನಂತರ ನೀಡತಕ್ಕದ್ದು.

(2) ಕಾರ್ಯನೀತಿಯ ಪ್ರಶ್ನೆ ಏನು ಎಂಬ ಬಗ್ಗೆ ಯಾವುದೇರೀತಿಯ ಭಿನ್ನಾಭಿಪ್ರಾಯವಿದ್ದರೆ, ಅದರ ಮೇಲೆ ರಾಜ್ಯ ಸರ್ಕಾರದ ನಿರ್ಣಯವೇ ಅಂತಿಮವಾಗಿರತಕ್ಕದ್ದು.

**66ಬಿ. ಲೈಸೆನ್ಸುಗಳು ಮತ್ತು ಲಿಖಿತ ಅನುಮತಿಗಳು.-** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದಲ್ಲಿ ಯಾವುದೇ ಉದ್ದೇಶಕ್ಕಾಗಿ ಒಂದು ಲೈಸೆನ್ಸನ್ನು ಅಥವಾ ಒಂದು ಲಿಖಿತ ಅನುಮತಿಯನ್ನು ಮಂಜೂರು ಮಾಡಬಹುದೆಂದು ಉಪಬಂಧಿಸಿದಾಗಲೆಲ್ಲಾ, ಅಂಥ ಲೈಸೆನ್ಸನ್ನು ಅಥವಾ ಲಿಖಿತ

ಅನುಮತಿಯನ್ನು ಕಾರ್ಯ ನಿರ್ವಾಹಕ ಇಂಜಿನಿಯರು ಅಥವಾ ಸಂದರ್ಭಾನುಸಾರ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮ ಅಥವಾ ವಿನಿಯಮಗಳ ಮೇರೆಗೆ ಅದನ್ನು ಮಂಜೂರು ಮಾಡಲು ಅಧಿಕಾರ ನೀಡಲಾದ ಅಧಿಕಾರಿಯು ವಿಧ್ಯುಕ್ತವಾಗಿ ಸಹಿ ಮಾಡಿರಬೇಕು ಮತ್ತು ಈ ಅಧಿನಿಯಮದ ಯಾವುದೇ ಇತರ ಉಪಬಂಧ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಯಾವುದೇ ಉಪಬಂಧಗಳ ಮೇರೆಗೆ ನಿರ್ದಿಷ್ಟಪಡಿಸುವುದು ಅಗತ್ಯವಾಗಿರುವಂಥ ಯಾವುದೇ ಇತರ ವಿಷಯಗಳ ಜೊತೆಯಲ್ಲಿ, ಈ ಮುಂದಿನವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು, ಎಂದರೆ,-

(ಎ) ಅದರ ಮಂಜೂರಾತಿಯ ದಿನಾಂಕ;

(ಬಿ) ಯಾವ ಉದ್ದೇಶಕ್ಕಾಗಿ ಮತ್ತು ಅವಧಿಗಾಗಿ ಅದನ್ನು ಮಂಜೂರು ಮಾಡಲಾಗಿದೆಯೋ ಆ ಉದ್ದೇಶ ಮತ್ತು ಅವಧಿ, ಯಾವುದಾದರೂ ಇದ್ದರೆ;

(ಸಿ) ಯಾವ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅದನ್ನು ಮಂಜೂರು ಮಾಡಲಾಗಿದೆಯೋ ಆ ನಿರ್ಬಂಧಗಳು ಮತ್ತು ಷರತ್ತುಗಳು, ಯಾವುದಾದರೂ ಇದ್ದರೆ;

(ಡಿ) ಯಾವ ವ್ಯಕ್ತಿಗೆ ಅದನ್ನು ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ; ಮತ್ತು

(ಇ) ಲೈಸೆನ್ಸಿಗೆ ಅಥವಾ ಲಿಖಿತ ಅನುಮತಿಗೆ ಸಂದಾಯ ಮಾಡಿದ ಯಾವುದೇ ಫೀಜು, ಯಾವುದಾದರೂ ಇದ್ದಲ್ಲಿ.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಅಂಥ ಪ್ರತಿಯೊಂದು ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಗಾಗಿ, ಮಂಡಲಿಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರದಲ್ಲಿ ಫೀಜನ್ನು ವಿಧಿಸಬಹುದು ಮತ್ತು ಅಂಥ ಫೀಜನ್ನು ಯಾರಿಗೆ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

(3) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಅಥವಾ ವಿನಿಯಮದ ಮೇರೆಗೆ ನೀಡಲಾದ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು, ಮಂಡಲಿ ಅಥವಾ ಯಾವ ಅಧಿಕಾರಿಯಿಂದ ಅದನ್ನು ಕೊಡಲಾಯಿತೋ ಅಂಥ ಅಧಿಕಾರಿಯು ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಪಡೆದವನು ಅದನ್ನು ತಪ್ಪು ನಿರೂಪಣೆಯ ಮೂಲಕ ಅಥವಾ ಮೋಸದಿಂದ ಪಡೆದಿದ್ದಾನೆಂದು ಅದಕ್ಕೆ ಅಥವಾ ಅವನಿಗೆ ಮನದಟ್ಟಾದರೆ ಅಥವಾ ಅದನ್ನು ಪಡೆದವನು ಅದರ ನಿರ್ಬಂಧಗಳ ಅಥವಾ ಷರತ್ತುಗಳ ಪೈಕಿ ಯಾವುದೇ ನಿರ್ಬಂಧವನ್ನು ಅಥವಾ ಷರತ್ತುಗಳನ್ನು ಉಲ್ಲಂಘಿಸಿದ್ದಾನೆಂದು ಅಥವಾ ಅದರಿಂದ ತಪ್ಪಿಸಿಕೊಂಡಿದ್ದಾನೆಂದು, ಅಥವಾ ಅದನ್ನು ಪಡೆದವನು ಯಾವ ವಿಷಯದ ಬಗ್ಗೆ ಲೈಸೆನ್ಸನ್ನು ಅಥವಾ ಅನುಮತಿಯನ್ನು ನೀಡಲಾಗಿದೆಯೋ ಅಂಥ ಯಾವುದೇ ವಿಷಯದ ಸಂಬಂಧವಾಗಿ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಅಥವಾ ವಿನಿಯಮದ ಯಾವುದೇ ಉಪಬಂಧದ ಉಲ್ಲಂಘನೆಗಾಗಿ ಸಿದ್ಧದೋಷಿಯೆಂದು ನಿರ್ಣೀತನಾದರೆ ಅವನನ್ನು ಯಾವುದೇ ಕಾಲಕ್ಕೆ ಅಮಾನತ್ತು ಮಾಡಬಹುದು ಅಥವಾ ರದ್ದುಮಾಡಬಹುದು:

ಪರಂತು,-

(ಎ) ಅಮಾನತ್ತಿನ ಅಥವಾ ರದ್ದಿಯಾತಿಯ ಯಾವುದೇ ಆದೇಶವನ್ನು ಮಾಡುವುದಕ್ಕಿಂತ ಮುಂಚೆ, ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಪಡೆದವನಿಗೆ ಅದನ್ನು ಏಕೆ ಅಮಾನತ್ತುಗೊಳಿಸಬಾರದು ಅಥವಾ ರದ್ದು ಮಾಡಬಾರದು ಎಂಬುದಕ್ಕೆ ಕಾರಣ ತೋರಿಸಲು ಒಂದು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(ಬಿ) ಅಂಥ ಪ್ರತಿಯೊಂದು ಆದೇಶದಲ್ಲಿ, ಲೈಸೆನ್ಸಿನ ಅಥವಾ ಲಿಖಿತ ಅನುಮತಿಯ ಅಮಾನತ್ತಿನ ಅಥವಾ ರದ್ದಿಯಾತಿಯ ಬಗೆಗಿನ ಕಾರಣಗಳ ಒಂದು ಸಂಕ್ಷಿಪ್ತ ವಿವರಣೆ ಇರತಕ್ಕದ್ದು.

(4) ಅಂಥ ಯಾವುದೇ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ಅಮಾನತ್ತು ಗೊಳಿಸಿದಾಗ ಅಥವಾ ರದ್ದು ಮಾಡಿದಾಗ ಅಥವಾ ಯಾವ ಅವಧಿಯವರೆಗೆ ಅದನ್ನು ನೀಡಲಾಗಿದ್ದಿತೋ ಅಂಥ ಅವಧಿಯು ಮುಕ್ತಾಯವಾದಾಗ, ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಪಡೆದವನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಎಲ್ಲ ಉದ್ದೇಶಗಳ ಸಲುವಾಗಿ, ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಅಮಾನತ್ತುಗೊಳಿಸುವ ಅಥವಾ ರದ್ದು ಮಾಡುವ ಆದೇಶವನ್ನು ರದ್ದು ಮಾಡುವವರೆಗೆ ಅಥವಾ ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ನವೀಕರಿಸುವವರೆಗೆ ಅವನು ಲೈಸೆನ್ಸು ಇಲ್ಲದ ಅಥವಾ ಲಿಖಿತ ಅನುಮತಿ ಇಲ್ಲದ ವ್ಯಕ್ತಿಯೆಂದು ಪರಿಗಣಿತವಾಗತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ನೀಡಲಾದ ಯಾವುದೇ ಅಂಥ ಲೈಸೆನ್ಸನ್ನು ಅಥವಾ ಲಿಖಿತ ಅನುಮತಿಯನ್ನು ಪಡೆದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಲೈಸೆನ್ಸು ಅಥವಾ ಲಿಖಿತ ಅನುಮತಿಯು ಜಾರಿಯಲ್ಲಿದ್ದಾಗ, ಅಂಥ ಲೈಸೆನ್ಸು ಅಥವಾ ಲಿಖಿತ ಅನುಮತಿಯನ್ನು ಹಾಜರುಪಡಿಸಬೇಕೆಂದು ಅದನ್ನು ನೀಡಿದ ಮಂಡಲಿ ಅಥವಾ ಪ್ರಾಧಿಕಾರವು ಅಗತ್ಯಪಡಿಸಿದಲ್ಲಿ ಅದನ್ನು ಎಲ್ಲ ಯುಕ್ತ ಕಾಲದಲ್ಲಿ ಮಂಡಲಿಯ ಅಥವಾ ಪ್ರಾಧಿಕಾರದ ಮುಂದೆ ಹಾಜರುಪಡಿಸತಕ್ಕದ್ದು.

**66ಸಿ. ಯುಕ್ತ ಕಾಲವನ್ನು ನಿಗದಿಪಡಿಸಲು ನೋಟೀಸುಗಳು, ಇತ್ಯಾದಿ.-** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳು ಅಥವಾ ವಿನಿಯಮಗಳ ಮೇರೆಗೆ ನೀಡಲಾದ ಅಥವಾ ಮಾಡಲಾದ ಯಾವುದೇ

ನೋಟೀಸು, ಬಿಲ್, ಆದೇಶ ಅಥವಾ ಕೋರಿಕೆಯಲ್ಲಿ ಯಾವ ಕೃತ್ಯವನ್ನು ಮಾಡುವುದರ ಸಲುವಾಗಿ ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಲಾದ ನಿಯಮದಲ್ಲಿ ಯಾವುದೇ ಕಾಲವನ್ನು ನಿಗದಿಪಡಿಸದೇ ಇರುವಂಥ ಯಾವುದೇ ಕೃತ್ಯವನ್ನು ಮಾಡುವುದು ಅಗತ್ಯವಾದಲ್ಲಿ, ನೋಟೀಸು, ಬಿಲ್ಲು, ಆದೇಶ ಅಥವಾ ಕೋರಿಕೆಯಲ್ಲಿ ಅಂಥ ಕೃತ್ಯವನ್ನು ಮಾಡಲು ಯುಕ್ತಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು.

**66ಡಿ. ನೋಟೀಸುಗಳ ಜಾರಿ, ಇತ್ಯಾದಿ.-** (1) ಈ ಅಧಿನಿಯಮದ ಮೂಲಕ ಅಥವಾ ಯಾವುದೇ ನಿಯಮ ಅಥವಾ ವಿನಿಯಮದ ಮೂಲಕ ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಂದು ನೋಟೀಸು, ಬಿಲ್ಲು, ಸಮನ್ಸುಗಳು, ಆದೇಶ, ಕೋರಿಕೆ ಅಥವಾ ಇತರ ದಸ್ತಾವೇಜುಗಳನ್ನು-

(ಎ) ಅದನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಒಂದು ಕಂಪನಿಯಾಗಿದ್ದಲ್ಲಿ, ಆ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಅಥವಾ ಅದರ ಮುಖ್ಯ ಕಚೇರಿಯಲ್ಲಿ ಅಥವಾ ವ್ಯವಹಾರ ಸ್ಥಳದಲ್ಲಿ ಕಂಪನಿಯ ಕಾರ್ಯದರ್ಶಿಯ ವಿಳಾಸಕ್ಕೆ ಬರೆದಿದ್ದರೆ; ಮತ್ತು-

(i) ಅದನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೆ; ಅಥವಾ

(ii) ಅದನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಅಥವಾ ಮುಖ್ಯ ಕಚೇರಿಯಲ್ಲಿ ಅಥವಾ ವ್ಯವಹಾರ ಸ್ಥಳದಲ್ಲಿ ನೀಡಿದ್ದರೆ;

(ಬಿ) ಅದನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಒಂದು ಪಾಲುಗಾರಿಕೆಯ ಸಂಸ್ಥೆಯಾಗಿದ್ದರೆ, ಅದರ ವ್ಯವಹಾರವು ಯಾವ ಹೆಸರಿನಿಂದ ಅಥವಾ ಅಭಿದಾನದಿಂದ ನಡೆಯುವುದೋ ಆ ಹೆಸರನ್ನು ಮತ್ತು ಅಭಿದಾನವನ್ನು ಸ್ಪಷ್ಟವಾಗಿ ಸೂಚಿಸಿ, ಅದರ ವ್ಯವಹಾರದ ಮುಖ್ಯ ಸ್ಥಳದಲ್ಲಿ ಆ ಪಾಲುಗಾರಿಕೆ ಸಂಸ್ಥೆಯ ವಿಳಾಸಕ್ಕೆ ದಸ್ತಾವೇಜನ್ನು ಕಳಿಸಿದ್ದರೆ;

(i) ಅದನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೆ; ಅಥವಾ

(ii) ಸದರಿ ವ್ಯವಹಾರ ಸ್ಥಳದಲ್ಲಿ ನೀಡಿದ್ದರೆ;

(ಸಿ) ಅದನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಒಂದು ಸಾರ್ವಜನಿಕ ನಿಕಾಯ ಅಥವಾ ನಿಗಮ, ಸಂಘ ಅಥವಾ ಇತರ ನಿಕಾಯವಾಗಿದ್ದಲ್ಲಿ, ದಸ್ತಾವೇಜನ್ನು ಆ ನಿಕಾಯ, ನಿಗಮ ಅಥವಾ ಸಂಘದ ಕಾರ್ಯದರ್ಶಿ, ಖಜಾಂಚಿ ಅಥವಾ ಇತರ ಮುಖ್ಯ ಪದಾಧಿಕಾರಿಗೆ ಅದರ ಮುಖ್ಯ ಕಚೇರಿಯ ವಿಳಾಸಕ್ಕೆ ಕಳಿಸಿದ್ದರೆ, ಮತ್ತು-

(i) ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೆ; ಅಥವಾ

(ii) ಆ ಕಚೇರಿಗೆ ತಲುಪಿಸಿದ್ದರೆ;

(ಡಿ) ಇತರ ಯಾವುದೇ ಸಂದರ್ಭದಲ್ಲಿ, ದಸ್ತಾವೇಜು ಜಾರಿಯಾಗಬೇಕಾದ ವ್ಯಕ್ತಿಯ ವಿಳಾಸಕ್ಕೆ ಕಳಿಸಿದ್ದರೆ; ಮತ್ತು

(i) ಅದನ್ನು ಆತನಿಗೆ ಕೊಟ್ಟಿದ್ದರೆ ಅಥವಾ ತಲುಪಿಸಿದ್ದರೆ; ಅಥವಾ

(ii) ಅಂಥ ವ್ಯಕ್ತಿಯು ಸಿಕ್ಕದಿದ್ದರೆ, ಅದನ್ನು ಅವನು ಕೊನೆಯದಾಗಿ ವಾಸಿಸುತ್ತಿದ್ದ ಸ್ಥಳವು ಅಥವಾ ವ್ಯವಹಾರದ ಸ್ಥಳವು ಕರ್ನಾಟಕ ರಾಜ್ಯದಲ್ಲಿದ್ದರೆ ಆ ಸ್ಥಳದ ಯಾವುದಾದರೊಂದು ಎದ್ದುಕಾಣುವ ಸ್ಥಳದಲ್ಲಿ ಅದನ್ನು ಅಂಟಿಸಿದ್ದರೆ ಅಥವಾ ಅದನ್ನು ಆತನ ಕುಟುಂಬದ ಯಾರಾದರೂ ವಯಸ್ಕ ಸದಸ್ಯನಿಗೆ ತಲುಪಿಸಿದ್ದರೆ ಅಥವಾ ನೀಡಿದ್ದರೆ ಅಥವಾ ಅದನ್ನು, ಅದಕ್ಕೆ ಸಂಬಂಧಪಟ್ಟ ಭೂಮಿ ಅಥವಾ ಕಟ್ಟಡ ಯಾವುದಾದರೂ ಇದ್ದರೆ ಅದರ ಎದ್ದು ಕಾಣುವ ಭಾಗದಲ್ಲಿ ಅಂಟಿಸಿದ್ದರೆ; ಅಥವಾ

(iii) ಅದನ್ನು ಆ ವ್ಯಕ್ತಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದರೆ

-ಅದು ಕ್ರಮಬದ್ಧವಾಗಿ ಜಾರಿಯಾಗಿದೆ ಎಂದು ಭಾವಿಸತಕ್ಕದ್ದು.

(2) ಯಾವ ಭೂಮಿಯ ಅಥವಾ ಕಟ್ಟಡದ ಮಾಲೀಕನಿಗೆ ಅಥವಾ ಅನುಭವದಾರನಿಗೆ ಯಾವುದೇ ದಸ್ತಾವೇಜನ್ನು ಜಾರಿ ಮಾಡುವುದು ಅಗತ್ಯವಾಗಿದೆಯೋ ಅಥವಾ ಜಾರಿ ಮಾಡಲು ಅಧಿಕೃತಗೊಳಿಸಲಾಗಿದೆಯೋ ಆ ಯಾವುದೇ ದಸ್ತಾವೇಜನ್ನು ಸಂದರ್ಭಾನುಸಾರ, ಆ ಭೂಮಿಯ ಅಥವಾ ಕಟ್ಟಡದ (ಆ ಭೂಮಿಯ ಅಥವಾ ಕಟ್ಟಡದ ಹೆಸರನ್ನು ತಿಳಿಸಿ.) "ಮಾಲೀಕನಿಗೆ ಅಥವಾ ಅನುಭೋಗದಾರನಿಗೆ" ವಿಳಾಸಕ್ಕೆ, ಹೆಚ್ಚಿನ ಹೆಸರು ಅಥವಾ ವರ್ಣನೆಯನ್ನು ನೀಡದೆಯೇ ಬರೆಯಬಹುದು; ಮತ್ತು ಅದು-

(ಎ) ಆ ರೀತಿ ಬರೆದ ದಸ್ತಾವೇಜನ್ನು (1)ನೇ ಉಪ-ಪ್ರಕರಣದ (ಡಿ) ಖಂಡದ ಅನುಸಾರವಾಗಿ ಕಳುಹಿಸಿದ್ದರೆ ಅಥವಾ ತಲುಪಿಸಿದ್ದರೆ; ಅಥವಾ

(ಬಿ) ಹಾಗೆ ಬರೆದ ದಸ್ತಾವೇಜನ್ನು ಅಥವಾ ಅದರ ಒಂದು ಪ್ರತಿಯನ್ನು ಸದರಿ ಭೂಮಿಯಲ್ಲಿ ಅಥವಾ ಕಟ್ಟಡದಲ್ಲಿರುವ ಯಾರೇ ಒಬ್ಬ ವ್ಯಕ್ತಿಗೆ ತಲುಪಿಸಿದ್ದರೆ ಅಥವಾ ಆ ಭೂಮಿಯಲ್ಲಿ ಅಥವಾ ಕಟ್ಟಡದಲ್ಲಿ ಅದನ್ನು ಯಾರಿಗೆ ತಲುಪಿಸಬಹುದೋ ಅಂಥ ಯಾರೇ ವ್ಯಕ್ತಿಯೂ ಇರದಿದ್ದರೆ, ಅದನ್ನು ಆ ಭೂಮಿಯ ಅಥವಾ ಕಟ್ಟಡದ ಯಾವುದಾದರೊಂದು ಎದ್ದುಕಾಣುವ ಭಾಗದ ಮೇಲೆ ಅಂಟಿಸಿದ್ದರೆ

– ಅದು ಕ್ರಮಬದ್ಧವಾಗಿ ಜಾರಿಯಾಗಿರುವುದೆಂದು ಭಾವಿಸತಕ್ಕದ್ದು.

(3) ಒಂದು ದಸ್ತಾವೇಜನ್ನು ಈ ಪ್ರಕರಣಕ್ಕನುಸಾರವಾಗಿ ಯಾವುದಾದರೊಂದು ಪಾಲುಗಾರಿಕೆ ಸಂಸ್ಥೆಗೆ ಜಾರಿ ಮಾಡಿದಾಗ ಆ ದಸ್ತಾವೇಜನ್ನು ಪ್ರತಿಯೊಬ್ಬ ಪಾಲುಗಾರನಿಗೆ ಜಾರಿ ಮಾಡಿರುವುದಾಗಿ ಭಾವಿಸತಕ್ಕದ್ದು.

(4) ಯಾವುದೇ ದಸ್ತಾವೇಜನ್ನು ಯಾವುದೇ ಕಟ್ಟಡದ ಮಾಲೀಕನಿಗೆ ಜಾರಿ ಮಾಡುವ ಉದ್ದೇಶಕ್ಕಾಗಿ, ಕಾರ್ಯ ನಿರ್ವಾಹಕ ಇಂಜಿನಿಯರ್‌ನು ಲಿಖಿತ ನೋಟೀಸನ್ನು ನೀಡುವ ಮೂಲಕ ಅಥವಾ ಹಾಗೆ ಲಿಖಿತ ನೋಟೀಸು ನೀಡಲು ಅಧಿಕೃತಗೊಳಿಸಲಾದ ಅಥವಾ ಅಧಿಕಾರ ಪಡೆದ ಯಾರೇ ಅಧಿಕಾರಿಯು ಸದರಿ ಕಟ್ಟಡದ ಮಾಲೀಕನ ಹೆಸರು ಮತ್ತು ವಿಳಾಸವನ್ನು ತಿಳಿಸುವಂತೆ ಆ ಕಟ್ಟಡದ ಅನುಭೋಗದಾರನನ್ನು ಅಗತ್ಯಪಡಿಸಬಹುದು.

(5) ದಸ್ತಾವೇಜನ್ನು ಯಾವ ವ್ಯಕ್ತಿಗೆ ಜಾರಿ ಮಾಡಬೇಕಾಗಿರುವುದೋ ಆ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ, ಅವನ ಪಾಲಕನಿಗೆ ಅಥವಾ ಅವನ ಕುಟುಂಬದ ಯಾರೇ ಪ್ರೌಢ ಸದಸ್ಯನಿಗೆ ಜಾರಿ ಮಾಡಿದ್ದಲ್ಲಿ ಅದನ್ನು ಆ ಅಪ್ರಾಪ್ತ ವಯಸ್ಕನಿಗೆ ಜಾರಿ ಮಾಡಿರುವುದಾಗಿ ಭಾವಿಸತಕ್ಕದ್ದು.

(6) 61 ಮತ್ತು 62ನೇ ಪ್ರಕರಣದಲ್ಲಿರುವುದಾವುದೂ ಮತ್ತು ಈ ಪ್ರಕರಣದಲ್ಲಿರುವುದಾವುದೂ ಈ ಅಧಿನಿಯಮದ ಮೇರೆಗೆ ಯಾವುದೇ ನ್ಯಾಯಾಲಯವು ಹೊರಡಿಸಿದ ಯಾವುದೇ ಸಮನ್‌ಗೆ ಅನ್ವಯಿಸತಕ್ಕದ್ದಲ್ಲ.

(7) ಒಬ್ಬ ಸೇವಕನು, ಈ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಕುಟುಂಬದ ಒಬ್ಬ ಸದಸ್ಯನಾಗಿರುವುದಿಲ್ಲ.

**66ಇ. ಚಾರ್ಜುಗಳಿಗಾಗಿ ಮಾಡಿದ ಬಿಲ್‌ಗಳು ಅಥವಾ ತಗಾದೆ ನೋಟೀಸನ್ನು ಸಾಮಾನ್ಯ ಅಂಚೆಯ ಮೂಲಕ ಜಾರಿ ಮಾಡುವುದು.**– 66ಡಿ ಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ಚಾರ್ಜುಗಳಿಗಾಗಿ ಮಾಡಿದ ಒಂದು ಬಿಲ್ಲನ್ನು ಅಥವಾ ಒಂದು ತಗಾದೆ ನೋಟೀಸನ್ನು 66ಡಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮುಚಿತ ವ್ಯಕ್ತಿಗೆ ಅವನ ಕೊನೆಯ ವಾಸಸ್ಥಳದ ಅಥವಾ ವ್ಯವಹಾರ ಸ್ಥಳದ ವಿಳಾಸಕ್ಕೆ ಬರೆಯಲಾದ ಮತ್ತು ಪೂರ್ವ ಸಂದಾಯಿತ ಅಂಚೆ ಪ್ರಮಾಣ ಪಡೆದ ಪತ್ರದೊಂದಿಗೆ ಅದನ್ನು ಸಾಮಾನ್ಯ ಅಂಚೆಯ ಮೂಲಕ ಕಳುಹಿಸಿ ಜಾರಿ ಮಾಡಬಹುದು ಮತ್ತು ಹಾಗೆ ಕಳುಹಿಸಲಾದ ಪ್ರತಿಯೊಂದು ಬಿಲ್ಲು ಅಥವಾ ನೋಟೀಸಿನ ಜಾರಿಯನ್ನು ರುಜುವಾತು ಪಡಿಸುವಲ್ಲಿ ಪತ್ರವನ್ನು ಸರಿಯಾದ ವಿಳಾಸದೊಂದಿಗೆ ಅಂಚೆ ಪ್ರಮಾಣ ಪತ್ರ ಪಡೆದ ಪತ್ರದ ಮೂಲಕ ಕಳುಹಿಸಲಾಗಿದೆ ಎಂದು ರುಜುವಾತು ಪಡಿಸಲು ಸಾಕಷ್ಟಾಗಿರತಕ್ಕದ್ದು.

**66ಎಫ್. ನೋಟೀಸು ಮುಂತಾದವುಗಳನ್ನು ಪಾಲಿಸದಿದ್ದ ಸಂದರ್ಭದಲ್ಲಿ ಅಧಿಕಾರ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಮೇರೆಗೆ ಯಾರೇ ವ್ಯಕ್ತಿಗೆ ಯಾವುದೇ ಕಾಮಗಾರಿಯನ್ನು ನಿರ್ವಹಿಸಬೇಕೆಂದು ಅಥವಾ ಯಾವುದೇ ಕೃತ್ಯವನ್ನು ಮಾಡಬೇಕೆಂದು ಅಗತ್ಯಪಡಿಸಿ, ಯಾವುದೇ ನೋಟೀಸನ್ನು, ಆದೇಶವನ್ನು ಅಥವಾ ಕೋರಿಕೆಯನ್ನು ಜಾರಿ ಮಾಡಿದ್ದು ಅವನು ಅದರ ನಿಬಂಧನೆಗಳನ್ನು ಪಾಲಿಸದಿದ್ದ ಸಂದರ್ಭದಲ್ಲಿ, ಯಾವ ಪ್ರಾಧಿಕಾರ ಅಥವಾ ಅಧಿಕಾರಿಯ ಇಚ್ಛೆಯ ಮೇರೆಗೆ ಆ ನೋಟೀಸನ್ನು, ಆದೇಶವನ್ನು ಅಥವಾ ಕೋರಿಕೆಯನ್ನು ನೀಡಲಾಗಿದೆಯೋ ಅಂಥ ಪ್ರಾಧಿಕಾರವು ಅಥವಾ ಅಧಿಕಾರಿಯು, ತಪ್ಪಿತಸ್ಥನಾದ ವ್ಯಕ್ತಿಯು ಅಂತ ತಪ್ಪಿನ ಬಗ್ಗೆ ಶಿಕ್ಷೆಗೆ ಬದ್ಧನಾಗಿರಲಿ ಅಥವಾ ಇಲ್ಲದಿರಲಿ; ಅಭಿಯೋಜನೆಗೆ ಗುರಿಪಡಿಸಿರಲಿ ಅಥವಾ ಇಲ್ಲದಿರಲಿ ಅಥವಾ ಆ ಬಗ್ಗೆ ಅವನಿಗೆ ಯಾವುದೇ ಶಿಕ್ಷೆ ವಿಧಿಸಿರಲಿ ಅಥವಾ ವಿಧಿಸಿಲ್ಲದಿರಲಿ, ಅಂಥ ವ್ಯಕ್ತಿಗೆ ಲಿಖಿತದಲ್ಲಿ ನೋಟೀಸನ್ನು ನೀಡಿದ ನಂತರ, ಅಂಥ ವ್ಯಕ್ತಿಯು ನಿರ್ವಹಿಸುವುದು ಅಥವಾ ಮಾಡಲು ಅಗತ್ಯವಾಗಿದ್ದ ಕಾಮಗಾರಿಯನ್ನು ಅಥವಾ ಕೃತ್ಯವನ್ನು ಪೂರ್ಣಗೊಳಿಸಲು ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳುವುದು ಕಾನೂನು ಸಮ್ಮತವಾಗತಕ್ಕದ್ದು. ಮತ್ತು ಅದಕ್ಕಾಗಿ ತಗುಲಿದ ಎಲ್ಲಾ ವೆಚ್ಚವನ್ನು ಮಂಡಲಿಯ ತಗಾದೆಯ ಮೇರೆಗೆ ಅದಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ತಗಾದೆಯ ನಂತರದ ಹತ್ತು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ಅವುಗಳನ್ನು ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಚಾರ್ಜುಗಳ ಬಾಕಿಯಂತೆ ವಸೂಲು ಮಾಡತಕ್ಕದ್ದು.

**66ಜಿ. ಅಪರಾಧಗಳ ಬಗೆಗಿನ ರಾಜಿ.**– (1) ಮಂಡಲಿ ಅಥವಾ ಈ ಪರವಾಗಿ ಮಂಡಲಿಯಿಂದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಮಂಡಲಿಯ ಯಾರೇ ಅಧಿಕಾರಿಯು, ವ್ಯವಹರಣೆಗಳನ್ನು ಹೂಡುವ ಮೊದಲು ಅಥವಾ ತರುವಾಯ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು:

ಪರಂತು, ಮಂಡಲಿಯಿಂದ ಅಥವಾ ಅದರ ಪರವಾಗಿ ಹೊರಡಿಸಲಾದ ಯಾವುದೇ ನೋಟೀಸು, ಆದೇಶ ಅಥವಾ ಕೋರಿಕೆಯನ್ನು ಸಾಧ್ಯವಿರುವಷ್ಟರ ಮಟ್ಟಿಗೆ ಪಾಲಿಸಿದ ಹೊರತು ಮತ್ತು ಅದನ್ನು ಪಾಲಿಸುವವರೆಗೆ, ಅದನ್ನು ಪಾಲಿಸಲು ತಪ್ಪಿದ ಕಾರಣದಿಂದ ಉಂಟಾದ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

(2) ಒಂದು ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಾಗ, ಅಪರಾಧಿಯು, ಆತನು ಅಭಿರಕ್ಷೆಯಲ್ಲಿದ್ದರೆ, ಅವನನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಆ ರೀತಿ ರಾಜಿಮಾಡಿಕೊಳ್ಳಲಾದ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧವಾಗಿ ಯಾವುವೇ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**66ಎಚ್. ನೋಟೀಸುಗಳ ಮತ್ತು ಇತರ ದಸ್ತಾವೇಜುಗಳ ಸಿಂಧುತ್ವ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ ಅಥವಾ ವಿನಿಯಮದ ಮೇರೆಗೆ ನೀಡಲಾದ ಯಾವುದೇ ನೋಟೀಸು, ಆದೇಶ, ಕೋರಿಕೆ,

ಲೈಸೆನ್ಸು, ಲಿಖಿತದಲ್ಲಿನ ಅನುಮತಿ ಅಥವಾ ಯಾವುದೇ ಇತರ ದಸ್ತಾವೇಜುಗಳು ನಮೂನೆಯ ದೋಷ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.][1]

**67. ಪುನರ್ ಅವಲೋಕನ.-** ಸರ್ಕಾರವು, [1][ತಾನಾಗಿಯೇ ಅಥವಾ ಬಾಧಿತ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ][1] ಯಾವುದೇ ಆದೇಶದ ಅಥವಾ ವ್ಯವಹರಣೆಗಳ ಕಾನೂನು ಸಮ್ಮತತೆಯನ್ನು ಅಥವಾ ಔಚಿತ್ಯವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮಂಡಲಿಯ ಅಥವಾ ಮಂಡಲಿಯ ಅಧೀನದಲ್ಲಿರುವ ಯಾರೇ ಅಧಿಕಾರಿಯ ಯಾವುದೇ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅವುಗಳ ಸಂಬಂಧದಲ್ಲಿ ತನಗೆ ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

(2) ಮಂಡಲಿಯು [1][ತಾವಾಗಿಯೇ ಅಥವಾ ಬಾಧಿತ ವ್ಯಕ್ತಿಯಿಂದ ಬಂದ ಅರ್ಜಿಯ ಮೇಲೆ][1] ಯಾವುದಾದರೂ ಆದೇಶ ಅಥವಾ ವ್ಯವಹರಣೆಯ ಕಾನೂನು ಸಮ್ಮತತೆಯನ್ನು ಅಥವಾ ಔಚಿತ್ಯವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ತಮ್ಮ ಅಧೀನದಲ್ಲಿರುವ ಯಾರೇ ಅಧಿಕಾರಿಯ ಯಾವುದಾದರೂ ವ್ಯವಹರಣೆಯ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಅವುಗಳ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಯಾರೇ ವ್ಯಕ್ತಿಗೆ, ತನ್ನ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ಹೊರತು ಪ್ರತಿಕೂಲವಾಗುವಂತೆ (1)ನೇ ಉಪ-ಪ್ರಕರಣ ಅಥವಾ (2) ನೇ ಉಪ-ಪ್ರಕರಣದ ಮೇರೆಗಿನ ಆದೇಶವನ್ನು ಹೊರಡಿಸತಕ್ಕದ್ದಲ್ಲ.

## ಅಧ್ಯಾಯ - X

## ನಿಯಮಗಳು ಮತ್ತು ವಿನಿಯಮಗಳು

**68. ನಿಯಮ ರಚನಾಧಿಕಾರ.-** (1) ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಕೆಳಗಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು-

(ಎ) ಈ ಅಧಿನಿಯಮದ ಮೂಲಕ ನಿಯಮಿಸಬೇಕೆಂದು ವ್ಯಕ್ತವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಬಹುದಾದ ಎಲ್ಲಾ ವಿಷಯಗಳು;

(ಬಿ) ಮಂಡಲಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನ ನೇಮಕಾತಿಯ ಬಗೆಗಿನ ಅರ್ಹತೆಗಳು ಮತ್ತು ಅವರಿಗೆ ಗೈರುಹಾಜರಿಯ ರಜೆಯ ಮಂಜೂರಾತಿ;

(ಸಿ) ಮಂಡಲಿಯ ಸಭೆಗಳಿಗೆ ಹಾಜರಾಗುವುದಕ್ಕೆ ಯಾವುದೇ ಗೌರವಧನ ಅಥವಾ ಉಪವೇಶನ ಶುಲ್ಕ ಮತ್ತು ಇತರ ಭತ್ಯಗಳ ಸಂದಾಯವೂ ಸೇರಿದಂತೆ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ಸರ್ಕಾರೇತರ ನಿರ್ದೇಶಕರುಗಳ ಸೇವಾ ಷರತ್ತುಗಳು ಮತ್ತು ಮಂಡಲಿಯ ಸರ್ಕಾರೇತರ ನಿರ್ದೇಶಕರ ಹುದ್ದೆಗಳಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿಗೊಳಿಸುವ ವಿಧಾನ;

(ಡಿ) ಮಂಡಲಿಯ ಪ್ರಕಾರ್ಯಗಳು;

(ಇ) ಮಂಡಲಿಯಿಂದ ಯಾವುದೇ ಸ್ವತ್ತಿನ ಆರ್ಜನೆ ಮತ್ತು ವರ್ಗಾವಣೆಯ ಷರತ್ತುಗಳು;

(ಎಫ್) ಮಂಡಲಿಯಿಂದ ಯೋಜನೆಗಳ ಸಿದ್ಧತೆ ಮತ್ತು ನಿರ್ವಹಣೆಗಾಗಿ ಸ್ಥಳೀಯ ಪ್ರಾಧಿಕಾರವು ಯಾವ ಕಾಲಮಿತಿಯೊಳಗೆ ನಿರ್ಣಯಗಳನ್ನು ಅಂಗೀಕರಿಸಿ ಅದನ್ನು ಮಂಡಲಿಗೆ ತಿಳಿಸಬೇಕಾಗಿರುವುದೋ ಅಂಥ ಕಾಲಮಿತಿ;

(ಜಿ) ಮಂಡಲಿಯು ಸಿದ್ಧಪಡಿಸಿ ಕಳುಹಿಸಿಕೊಟ್ಟ ಯೋಜನೆಗಳ ಕರಡುಗಳಿಗೆ ಯಾವ ಅವಧಿಯೊಳಗೆ ಸರ್ಕಾರವು ಅನುಮೋದನೆ ನೀಡಬೇಕಾಗಿರುವುದೋ ಅಂಥ ಕಾಲಮಿತಿ;

(ಎಚ್) ಯೋಜನೆಗಳ ವೆಚ್ಚವನ್ನು ವಸೂಲ್ಮಾಡುವ ವಿಧಾನ ಮತ್ತು ಕಂತುಗಳ ಸಂಖ್ಯೆ ಮತ್ತು ಕಾಲಾವಧಿ ಅಥವಾ ಕಾಲಾವಧಿಗಳು;

(ಐ) ಮಂಡಲಿಯಿಂದ ನಿಧಿಗಳ ನಿರ್ವಹಣಾ ವಿಧಾನ;

(ಜೆ) ಮಂಡಲಿ ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳು, ಯಾವ ವಿಷಯದಲ್ಲಿ ಅವರು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುತ್ತಾರೋ ಅದರಲ್ಲಿನ ಅವರ ಪರಸ್ಪರ ಸಂಬಂಧ;

(ಕೆ) ಮಂಡಲಿಯು ಹಣ ಸಾಲ ಪಡೆಯುವುದು ಮತ್ತು ಸಾಲ ಕೊಡುವುದು;

(ಎಲ್) ಸ್ಥಳೀಯ ಪ್ರಾಧಿಕಾರಗಳಿಗೆ ಮಂಡಲಿಯಿಂದ ಸಾಲಗಳು ಮತ್ತು ಮುಂಗಡಗಳ ಮಂಜೂರಾತಿಗಾಗಿ ಷರತ್ತು ಮತ್ತು ಮಿತಿಗಳು;

(ಎಂ) ಈ ಅಧಿನಿಯಮದ ಮೇರೆಗೆ ನೇಮಕ ಮಾಡಲಾದ ಲೆಕ್ಕ ಪರಿಶೋಧಕರ ಹಕ್ಕುಗಳು, ವಿಶೇಷಾಧಿಕಾರ ಮತ್ತು ಅಧಿಕಾರ;

(ಎನ್) ಮಂಡಲಿಯು ತನ್ನ ಮಂಡಲಿಯ ವರದಿಗಳನ್ನು ಸಿದ್ಧಪಡಿಸಬೇಕಾಗಿರುವಂಥ ನಮೂನೆ ಮತ್ತು ಮಂಡಲಿಯು ಸರ್ಕಾರಕ್ಕೆ ಅಂಕಿ ಅಂಶಗಳನ್ನು ಮತ್ತು ವಿವರಣೆ ಪಟ್ಟಿಯನ್ನು ಒಪ್ಪಿಸುವ ನಮೂನೆ ಮತ್ತು ವಿಧಾನ;

(ಓ) ಮಂಡಲಿಯ ಲೆಕ್ಕಗಳನ್ನು ಪ್ರಕಟಿಸಬೇಕಾದ ವಿಧಾನ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ನಿರ್ದಿಷ್ಟ ದಿನಾಂಕದಂದು ಅವುಗಳು ಜಾರಿಗೆ ಬರತಕ್ಕದ್ದು ಎಂದು ವ್ಯಕ್ತಪಡಿಸಿದ ಹೊರತು ಅವು ಹಾಗೆ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದಲ್ಲಿಯೂ, ಒಂದು ಅಥವಾ ಎರಡು ಅಥವಾ ಅದಕ್ಕೂ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದು; ಮತ್ತು ಸದರಿ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಅಥವಾ ನಿಕಟಪೂರ್ವ ಅಧಿವೇಶನ ಅಥವಾ ನಂತರದ ಅಧಿವೇಶನದಲ್ಲಿ ರಾಜ್ಯ ವಿಧಾನ ಮಂಡಲದ ಉಭಯ ಸದನಗಳೂ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಒಪ್ಪಿದಲ್ಲಿ ಅಥವಾ ನಿಯಮವನ್ನು ಮಾಡಬಾರದೆಂದು ನಿರ್ಧರಿಸಿದಲ್ಲಿ ನಿಯಮವು, ರಾಜ್ಯ ಪತ್ರದಲ್ಲಿ ಸರ್ಕಾರದಿಂದ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಿನೊಂದಿಗೆ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದಲ್ಲ, ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**69. ವಿನಿಯಮಗಳ ರಚನಾಧಿಕಾರ:-** (1) ಮಂಡಲಿಯು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವ ಉದ್ದೇಶಕ್ಕಾಗಿ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅಸಂಗತವಾಗಿಲ್ಲದ ವಿನಿಯಮಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲವಾಗದಂತೆ ಅಂಥ ವಿನಿಯಮಗಳು ಈ ಮುಂದಿನ ವಿಷಯಗಳಿಗೆ ಉಪಬಂಧಿಸಬಹುದು.

(ಎ) ವಿನಿಯಮಗಳ ಮೂಲಕ ನಿಯಮಿಸಬೇಕೆಂದು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಅಗತ್ಯಪಡಿಸಿರುವ ಅಥವಾ ಅನುಮತಿಸಲಾಗಿರುವ ಎಲ್ಲಾ ವಿಷಯಗಳು;

(ಬಿ) ಮಂಡಲಿಯ ಅಧಿಕಾರಿಗಳು ಮತ್ತು ನೌಕರರು ಕೈಗೊಂಡ ಪ್ರಯಾಣಗಳ ಸಂಬಂಧದಲ್ಲಿನ ಪ್ರಯಾಣ ಭತ್ಯ ಮತ್ತು ದಿನಭತ್ಯೆಗಳ ಸಂದಾಯವೂ ಸೇರಿದಂತೆ ಮಂಡಲಿಯ ಅಂಥ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ನಿಬಂಧನೆ ಮತ್ತು ಷರತ್ತುಗಳು, ಹಾಗೂ ವೇತನ ಶ್ರೇಣಿ;

(ಸಿ) ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಕೃತ್ಯಗಳು ಮತ್ತು ವ್ಯವಹಾರಗಳ ಬಗ್ಗೆ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ಮಂಡಲಿಯ ಅಧಿಕಾರಿಗಳ ಮತ್ತು ನೌಕರರಲ್ಲಿ ಶಿಸ್ತು ಹಾಗೂ ನಡತೆಯ ನಿರ್ವಹಣೆ;

(ಡಿ) ಕೋರಂ ಸೇರಿದಂತೆ ಮಂಡಲಿಯ ಸಭೆಗಳಲ್ಲಿನ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನ;

(ಇ) ವ್ಯಕ್ತಿಗಳ ಒಂದು ತಾತ್ಕಾಲಿಕ ಸಂಘದ ರಚನೆಯ ಉದ್ದೇಶ ಮತ್ತು ರೀತಿ;

(ಎಫ್) ಸಮಿತಿಗಳ ಸದಸ್ಯರ ಕರ್ತವ್ಯಗಳು, ಪ್ರಕಾರ್ಯಗಳು, ಸೇವಾ ನಿಬಂಧನೆ ಮತ್ತು ಷರತ್ತುಗಳು;

(ಜಿ) ಮಂಡಲಿಯ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ, ಕಾರ್ಯದರ್ಶಿ ಮತ್ತು ಮುಖ್ಯ ಇಂಜಿನಿಯರ್-ಇವರ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಹಾಗೂ ಅಧಿಕಾರಗಳು;

(ಎಚ್) ಋಣತೀರಿಕೆ ನಿಧಿ, ಉಳಿತಾಯ ನಿಧಿ ಮತ್ತು ಅಭಿವೃದ್ಧಿ ನಿಧಿಗಳು ರಚಿಸಬೇಕಾಗಿರುವ ರೀತಿ ಮತ್ತು ವಿಧಾನ;

[1][(ಎಚ್‌ಎಚ್)][1] ಮಂಡಲಿಯ ಲೆಕ್ಕಪತ್ರಗಳನ್ನು ನಿರ್ವಹಿಸಿಕೊಂಡು ಬರುವುದಕ್ಕೆ ಸಂಬಂಧಪಟ್ಟ ರೀತಿ ಮತ್ತು ವಿಧಾನ:

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಪುನರ್ ಅಕ್ಷರ ನೀಡಲಾಗಿದೆ.

[1][(ಐ) ಮಂಡಲಿಯ ನೀರು ಸರಬರಾಜು ಕಾಮಗಾರಿಗಳಿಂದ ಯಾವುದೇ ಆವರಣಗಳಿಗೆ ನೀರು ಸರಬರಾಜು ಮಾಡುವುದಕ್ಕಾಗಿ ನೀರು ಸರಬರಾಜು ಪೈಪುಗಳನ್ನು ಜೋಡಿಸುವುದು;][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಜೆ) ಮಂಡಲಿಯ ನೀರು ಸರಬರಾಜು ಕಾಮಗಾರಿಯೊಂದಿಗೆ ಸಂಪರ್ಕ ಕಲ್ಪಿಸುವುದು ಮತ್ತು ಅದನ್ನು ನವೀಕರಿಸುವುದು;

(ವಿ) ಯಾವುದೇ ಒಂದು ದಿನ, ಮಂಡಲಿಯ ಒಳಚರಂಡಿಯಲ್ಲಿ ಸಮ್ಮತಿ ಅಥವಾ ಅನುಮತಿ ಇಲ್ಲದೆ ವ್ಯಾಪಾರ ಆವರಣದಿಂದ ಹರಿ ಬಿಡಬಹುದಾದ ವ್ಯಾಪಾರ ಕಶ್ಮಲದ ಗರಿಷ್ಠ ಪರಿಮಾಣ ಮತ್ತು ಮಂಡಲಿಯ ಅಂಥ ಒಳಚರಂಡಿಗೆ ಸಮ್ಮತಿ ಅಥವಾ ಅನುಮತಿ ಇಲ್ಲದೆ, ಹರಿ ಬಿಡಬಹುದಾದ ವ್ಯಾಪಾರ ಕಶ್ಮಲದ ಅತ್ಯಧಿಕ ಪ್ರಮಾಣ;

(ಡಬ್ಲ್ಯೂ) ಮಂಡಲಿಯ ಒಳಚರಂಡಿಯೊಳಗೆ, ವ್ಯಾಪಾರ ಕಶ್ಮಲವನ್ನು ಹರಿ ಬಿಡುವ ಕಾಲಕ್ಕೆ ಅದರ ಉಷ್ಣತಾ ಪ್ರಮಾಣವನ್ನು ನಿಯಂತ್ರಿಸುವುದು ಮತ್ತು ಹಾಗೆ ಹರಿಬಿಡುವ ಕಾಲದಲ್ಲಿ ವ್ಯಾಪಾರ ಕಶ್ಮಲವು ತಟಸ್ಥವಾಗಿ ಇಡುವಂತೆ ಮಾಡುವುದು (ಎಂದರೆ ಆಮ್ಲ ಅಥವಾ ಕ್ಷಾರವಾಗಿ ಸಂಯೋಜನೆಗೊಳ್ಳದಂತೆ ಇಡುವುದು);

(ಎಕ್ಸ್) ವ್ಯಾಪಾರ ಆವರಣದಿಂದ ಮಂಡಲಿಯ ಒಳಚರಂಡಿಗಳಲ್ಲಿ ಹರಿಯುವ ಪದಾರ್ಥದ ಮಾದರಿಗಳನ್ನು ಒಬ್ಬ ವ್ಯಕ್ತಿಯು ಯಾವುದೇ ಕಾಲದಲ್ಲಿ ಸುಲಭವಾಗಿ ತೆಗೆದುಕೊಳ್ಳಲು ಸಾಧ್ಯವಾಗುವಂತೆ ತಪಾಸಣೆ ಗುಂಡಿ ಅಥವಾ ಆಳುಗುಂಡಿ (ಮ್ಯಾನ್‌ಹೋಲ್) ಯನ್ನು ಒದಗಿಸುವುದು ಮತ್ತು ಅದನ್ನು ನಿರ್ವಹಿಸುವುದು;

(ವೈ) ಯಾವುದೇ ವ್ಯಾಪಾರ ಆವರಣದಿಂದ ಮಂಡಲಿಯ ಒಳಚರಂಡಿಗಳಿಗೆ ಹರಿಬಿಡುವ ನೀರಿನ ಘನಪರಿಮಾಣವನ್ನು ಅಳತೆ ಮಾಡಲು ಬೇಕಾಗಬಹುದಾದ ಮೀಟರ್‌ಗಳನ್ನು ಒದಗಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು ಮತ್ತು ಅವುಗಳನ್ನು ಪರೀಕ್ಷಿಸುವ ಬಗ್ಗೆ ಏರ್ಪಾಡು ಮಾಡುವುದು;

(ಜಡ್) ವ್ಯಾಪಾರ ಆವರಣದ ಅನುಭೋಗದಾರರು ಮಂಡಲಿಯ ಒಳಚರಂಡಿಗಳಲ್ಲಿ ವ್ಯಾಪಾರ ಕಶ್ಮಲವನ್ನು ಹರಿಬಿಡುವುದಕ್ಕಾಗಿ ಮತ್ತು ಅದನ್ನು ವಿಲೇವಾರಿ ಮಾಡುವ ಸಲುವಾಗಿ ಮಂಡಲಿಗೆ ಸಂದಾಯ ಮಾಡಬೇಕಾದ ಶುಲ್ಕಗಳು][1]

(3) ಯಾವುದೇ ವಿನಿಯಮದ ರಚನೆ ಅಥವಾ ಅದರ ರದ್ದಿಯಾತಿ ಅಥವಾ ಅದರಲ್ಲಿನ ಮಾರ್ಪಾಡಿಗೆ, ಸರ್ಕಾರವು ಅನುಮೋದನೆ ನೀಡಿದ ಹೊರತು, ಅದು, ಪರಿಣಾಮಕಾರಿಯಾಗತಕ್ಕದ್ದಲ್ಲ.

(4) ಸರ್ಕಾರವು ಅಧಿಸೂಚನೆಯ ಮೂಲಕ ಈ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ವಿನಿಯಮವನ್ನು ರದ್ದುಗೊಳಿಸಬಹುದು ಮತ್ತು ಆ ತರುವಾಯ ಆ ವಿನಿಯಮವು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

[1][(5) ಈ ಪ್ರಕರಣದ ಮೇರೆಗೆ ಯಾವುದೇ ವಿನಿಯಮವನ್ನು ರಚಿಸುವಾಗ ಮಂಡಲಿಯು ಅವುಗಳ ಉಲ್ಲಂಘನೆಗಾಗಿ ಒಂದು ನೂರು ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯನ್ನು ನಿಲ್ಲಿಸಲು ಮಂಡಲಿಯು ನೀಡಿದ ನೋಟೀಸನ್ನು ಸ್ವೀಕರಿಸಿದ ತರುವಾಯವೂ ಅಂಥ ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯನ್ನು ವಿಧಿಸಲು ಉಪಬಂಧ ಕಲ್ಪಿಸಬಹುದು.][1]

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**70. ನೀರು ಪೂರೈಕೆ ಮತ್ತು ಒಳಚರಂಡಿ ಕಾಮಗಾರಿಗಳ ಸಂಬಂಧದಲ್ಲಿ ನಿಯೋಜಿತರಾದ ಸ್ಥಳೀಯ ಪ್ರಾಧಿಕಾರಗಳ ನೌಕರರಿಗೆ ಸಂಬಂಧಿಸಿದ ಉಪಬಂಧಗಳು.-** (1) ಯಾವುದೇ ಸ್ಥಳೀಯ ಪ್ರಾಧಿಕಾರದ ಯಾವುದೇ ನೀರು ಸರಬರಾಜು ಅಥವಾ ಒಳಚರಂಡಿ ಉದ್ಯಮವು ಮಂಡಲಿಯಲ್ಲಿ ನಿಹಿತವಾಗಿರುವಲ್ಲಿ ಹಾಗೆ ನಿಹಿತವಾದ ದಿನಾಂಕದಿಂದ ಜಾರಿಗೆ ಬರುವಂತೆ, ಸಂದರ್ಭಾನುಸಾರ ನೀರು ಸರಬರಾಜು ಕಾಮಗಾರಿಯ ಅಥವಾ ಒಳಚರಂಡಿ ವ್ಯವಸ್ಥೆ ಕಾಮಗಾರಿಯ ಸಂಬಂಧದಲ್ಲಿ ನಿಯೋಜಿತವಾಗಿರುವ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರಿ ಅಥವಾ ಇತರ ನೌಕರನು, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಪದನಾಮದೊಡನೆ ಮಂಡಲಿಗೆ ವರ್ಗಾಯಿತನಾಗಿರತಕ್ಕುದು, ಮತ್ತು ಮಂಡಲಿಯ ಒಬ್ಬ ಅಧಿಕಾರಿ ಅಥವಾ ಇತರ ನೌಕರನಾಗತಕ್ಕದ್ದು ಮತ್ತು ತಾನು ಸ್ಥಳೀಯ ಪ್ರಾಧಿಕಾರ ವರ್ಗದ ಒಬ್ಬ ಅಧಿಕಾರಿಯಾಗಿ ಅಥವಾ ನೌಕರನಾಗಿ ಮುಂದುವರಿದಿದ್ದರೆ ಯಾವ ಪದಾವಧಿ, ಸಂಭಾವನೆ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಆ ಹುದ್ದೆಯನ್ನು ಹೊಂದಿರುತ್ತಿದ್ದನೋ ಅದೇ ಪದಾವಧಿ, ಸಂಭಾವನೆ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಪದಧಾರಣ ಮಾಡತಕ್ಕದ್ದು ಮತ್ತು ಅಂಥ ಪದಾವಧಿ, ಸಂಭಾವನೆ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಮಂಡಲಿಯು ವಿಧ್ಯುಕ್ತವಾಗಿ ಮಾರ್ಪಾಡಿಸಿದ ಹೊರತು ಮತ್ತು ಮಾರ್ಪಡಿಸುವವರೆಗೆ ಹಾಗೆ ಪದಧಾರಣ ಮಾಡುವುದು ಮುಂದುವರಿಯತಕ್ಕದ್ದು:

ಪರಂತು, ಸ್ಥಳೀಯ ಪ್ರಾಧಿಕಾರದಲ್ಲಿ ಅಂಥ ಅಧಿಕಾರಿಯು ಅಥವಾ ನೌಕರನು ಅಂಥ ವರ್ಗಾವಣೆಗೆ ಮುಂಚೆ ಸಲ್ಲಿಸಿದ ಯಾವುದೇ ಸೇವೆಯನ್ನು ಮಂಡಲಿಯ ಅಧೀನದಲ್ಲಿ ಸಲ್ಲಿಸಿದ ಸೇವೆಯೆಂದು ಭಾವಿಸತಕ್ಕದ್ದು.

1. 1981ರ ಅಧಿನಿಯಮ ಸಂಖ್ಯೆ 45ರ ಮೂಲಕ 1.10.1981 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**71. ನೇಮಕಾತಿಗಳು, ಅಧಿಸೂಚನೆಗಳು, ನಿಯಮಗಳು, ಉಪ-ವಿಧಿಗಳು, ಮುಂತಾದವುಗಳನ್ನು ಮುಂದುವರಿಸುವುದು.-** (1) ಯಾವುದೇ ಸ್ಥಳೀಯ ಪ್ರಾಧಿಕಾರದ ನೀರು ಸರಬರಾಜು ಅಥವಾ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಮಂಡಲಿಯಲ್ಲಿ ನಿಹಿತಗೊಳಿಸಿದ ದಿನಾಂಕದಿಂದ,-

(ಎ) 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ಮಾಡಲಾದ ಅಥವಾ ನೀಡಿದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ತೆರಿಗೆ, ದರಗಳು, ಬಾಡಿಗೆಗಳು, ಶುಲ್ಕಗಳು ಮತ್ತು ಇತರ

ಚಾರ್ಜುಗಳು, ಯೋಜನೆ, ನಿಯಮ, ಉಪ-ವಿಧಿ, ನಮೂನೆ ಅಥವಾ ನೋಟೀಸು ಮತ್ತು ನೀಡಲಾದ ಯಾವುದೇ ಲೈಸೆನ್ಸು ಅಥವಾ ಅನುಮತಿಯನ್ನು, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಅವು ಸಂಬಂಧಿಸಿರುವಷ್ಟರ ಮಟ್ಟಿಗೆ ಈ ಅಧಿನಿಯಮದ ಮೇರೆಗೆ ಮಾಡಲಾದ, ನೀಡಲಾದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ತೆರಿಗೆ, ದರಗಳು, ಬಾಡಿಗೆಗಳು, ಶುಲ್ಕಗಳು ಮತ್ತು ಇತರ ವೆಚ್ಚಗಳು, ಆದೇಶ, ಯೋಜನೆ, ನಿಯಮ, ಉಪ-ವಿಧಿ, ನಮೂನೆ, ನೋಟೀಸು, ಲೈಸೆನ್ಸು ಅಥವಾ ಅನುಮತಿಯ ಮೂಲಕ ಅವು ರದ್ದು ಮಾಡುವವರೆಗೆ ಅಥವಾ ಮಾರ್ಪಾಡು ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ನೀಡಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಸರ್ಕಾರವು ಅಧಿಸೂಚಿಸಬಹುದಾದಂಥ ನೀರು ಸರಬರಾಜು ಅಥವಾ ಒಳಚರಂಡಿ ಉದ್ಯಮದ ಸಂಬಂಧದಲ್ಲಿ ಅಂತಹ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ ಸ್ಥಳೀಯ ಪ್ರಾಧಿಕಾರದೊಡನೆ ಅಥವಾ ಅದರ ಪರವಾಗಿ ವಹಿಸಲಾದ ಎಲ್ಲಾ ಬದ್ಧತೆಗಳು ಮತ್ತು ಹೊಣೆಗಳು, ಮಾಡಿಕೊಳ್ಳಲಾದ ಎಲ್ಲ ಕರಾರುಗಳು, ಮಾಡಬೇಕೆಂದು ಒಪ್ಪಿಕೊಳ್ಳಲಾದ ಎಲ್ಲ ವಿಷಯಗಳನ್ನು, ಕಾರ್ಯಗಳನ್ನು ಮಂಡಲಿಯೊಡನೆ ಅಥವಾ ಮಂಡಲಿಯ ಪರವಾಗಿ ವಹಿಸಲಾಗಿದೆ ಎಂದು, ಮಾಡಿಕೊಳ್ಳಲಾಗಿದೆ ಎಂದು ಅಥವಾ ಮಾಡಲು ಒಪ್ಪಿಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(ಸಿ) ಸರ್ಕಾರವು ಅಧಿಸೂಚಿಸಬಹುದಾದಂತೆ, ನೀರು ಸರಬರಾಜು ಅಥವಾ ಒಳಚರಂಡಿ ಕಾಮಗಾರಿಯ ಸಂಬಂಧದಲ್ಲಿ ಅಂತಹ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಎಲ್ಲ ಸ್ಥಿರ ಮತ್ತು ಚರ ಸ್ವತ್ತನ್ನು ಮತ್ತು ಯಾವುದೇ ಸ್ವರೂಪದ ಮತ್ತು ರೀತಿಯ ಎಲ್ಲ ಹಿತಾಸಕ್ತಿಗಳು ಸ್ಥಳೀಯ ಪ್ರಾಧಿಕಾರವು ನೀರು ಸರಬರಾಜು ಅಥವಾ ಒಳಚರಂಡಿ ಉದ್ಯಮದ ಸಂಬಂಧದಲ್ಲಿ ಉಪಯೋಗಿಸುವ, ಅನುಭೋಗಿಸುವ ಅಥವಾ ಹೊಂದಿರುವ ಯಾವುದೇ ವಿವರಣೆಯ ಎಲ್ಲ ಹಕ್ಕುಗಳೊಡನೆ ಮಂಡಲಿಯಲ್ಲಿ ನಿಹಿತವಾಗತಕ್ಕದ್ದು.

(ಡಿ) ನೀರು ಸರಬರಾಜು ಅಥವಾ ಒಳಚರಂಡಿ ಕಾಮಗಾರಿಯ ಸಂಬಂಧದಲ್ಲಿ ಸ್ಥಳೀಯ ಪ್ರಾಧಿಕಾರಕ್ಕೆ ಬಾಕಿ ಇರುವ ಎಲ್ಲ ದರಗಳು, (ಕಟ್ಟಡ ಮತ್ತು ಜಮೀನುಗಳ ಮೇಲೆ ನಿರ್ಧರಣೆ ಮಾಡಲಾದ ತೆರಿಗೆಯ ರೂಪದಲ್ಲಿ ಸ್ಥಳೀಯ ಪ್ರಾಧಿಕಾರವು ವಿಧಿಸುವ ನೀರಿನ ದರವೂ ಸೇರಿದಂತೆ) ಫೀಜುಗಳು, ಬಾಡಿಗೆಗಳು ಮತ್ತು ಮಂಡಲಿಗೆ ಬರಬೇಕಾಗಿರುವ ಇತರ ಮೊಬಲಗುಗಳನ್ನು ಮಂಡಲಿಯ ಬಾಕಿ ಎಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ವಸೂಲ್ಮಾಡತಕ್ಕದ್ದು.

(ಇ) ನೀರು ಸರಬರಾಜು ಅಥವಾ ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಸ್ಥಳೀಯ ಪ್ರಾಧಿಕಾರದ ವಿರುದ್ಧ ಮಾಡಲಾದ ಅಥವಾ ಹೂಡಬಹುದಾಗಿದ್ದ, ಎಲ್ಲ ದಾವೆಗಳು, ಪ್ರಾಸಿಕ್ಯೂಷನ್‌ಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಮಂಡಲಿಯಿಂದ ಅಥವಾ ಮಂಡಲಿಯ ವಿರುದ್ಧವಾಗಿ ಮುಂದುವರಿಸಬಹುದು ಅಥವಾ ಅದರ ವಿರುದ್ಧ ಹೂಡಬಹುದು.][1]

* * *

## ಅಧಿಸೂಚನೆಗಳು

## I

**ಬೆಂಗಳೂರು ದಿನಾಂಕ 9/10ನೇ ಅಕ್ಟೋಬರ್ 1974 [I ಸಂಖ್ಯೆ ಎಚ್‌ಎಂ.ಎ 165 ಎಂಎನ್‌ಎಂ 747]**

**ಎಸ್.ಓ. 1758.**– ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ 1973ರ 1ನೇ ಪ್ರಕರಣದಲ್ಲಿ (3) ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಸಾವಿರದ ಒಂಬೈನೂರ ಎಪ್ಪತ್ತನಾಲ್ಕರ ಅಕ್ಟೋಬರ್ ಹದಿನೈದನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕ ಎಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

**ಸಿ.ಎನ್. ನರಸಿಂಹ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಪೌರಸಭಾ ಆಡಳಿತ ಇಲಾಖೆ.

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ IV 2ಸಿ (ii) ದಿನಾಂಕ 10.10.1974 ರಲ್ಲಿ ಸಂಖ್ಯೆ 3262 ರಲ್ಲಿ ಪ್ರಕಟವಾಗಿದೆ.)

II

**ಬೆಂಗಳೂರು, ದಿನಾಂಕ 1ನೇ ಅಕ್ಟೋಬರ್ 1981 [ಸಂಖ್ಯೆ ಎಚ್‌ಯುಡಿ 89 ಎಂಎನ್‌ಎಸ್ 79]**

ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ (ತಿದ್ದುಪಡಿ) ಅಧಿನಿಯಮ, (1981ರ ಕರ್ನಾಟಕ ಅಧಿನಿಯಮ ಸಂಖ್ಯೆ 45) 1ನೇ ಪ್ರಕರಣದ (2)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1981ರ ಅಕ್ಟೋಬರ್ ಮೊದಲನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕ ಎಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

**ಆರ್.ಎಸ್. ಸುಜಾತ**
ಸರ್ಕಾರದ ಉಪ ಕಾರ್ಯದರ್ಶಿ,
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ (ವಸತಿ).

(ಕರ್ನಾಟಕ ರಾಜಪತ್ರ (ವಿಶೇಷ ಸಂಚಿಕೆ) ಭಾಗ IV - 2ಸಿ (ii) ದಿನಾಂಕ 1.10.1984 ರಲ್ಲಿ ಸಂಖ್ಯೆ 736 ರಲ್ಲಿ ಪ್ರಕಟವಾಗಿದೆ.)

# ಕರ್ನಾಟಕ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ನಿಯಮಗಳು, 1974

## ಪ್ರಕರಣಗಳ ಅನುಕ್ರಮಣಿಕೆ


| ನಿಯಮಗಳು : | | ಪುಟಗಳು |
|---|---|---|
| | **ಭಾಗ- I** | |
| 1. | ಹೆಸರು ಮತ್ತು ಪ್ರಾರಂಭ | 40 |
| 2. | ಪರಿಭಾಷೆ | 40 |
| | **ಭಾಗ- II** | |
| | **ಮಂಡಲಿ** | |
| 3. | ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಗಾಗಿ ಅರ್ಹತೆ | 40 |
| 4. | ಪರಿಶ್ರಮ ಧನ ಮತ್ತು ಭತ್ಯೆಗಳು | 40 |
| 5. | ರಜೆ | 41 |
| 6. | ಪ್ರಯಾಣ ಭತ್ಯೆ | 41 |
| 7. | ರಾಜೀನಾಮೆ | 41 |
| 8. | ವ್ಯವಹರಣೆಗಳು | 41 |
| 9. | ಕೋರಂ | 41 |
| 10. | ಸಭೆಯ ಅಧ್ಯಕ್ಷ | 41 |
| 11. | ಸಭೆ ನಡೆಯುವ ಸ್ಥಳ | 41 |
| 12. | ಅಧ್ಯಕ್ಷತೆ ವಹಿಸುವ ಅಧಿಕಾರಿಯು ವ್ಯವಹಾರ ನಡೆಸುವುದನ್ನು ತೀರ್ಮಾನಿಸುವುದು | 41 |
| 13. | ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ನಿರ್ಬಂಧಗಳು | 41 |
| 14. | ಸ್ವತ್ತಿನ ವರ್ಗಾವಣೆ | 41 |
| 15. | ಸ್ಥಳೀಯ ಪ್ರಾಧಿಕಾರಗಳ ಯೋಜನೆಗಳ ಅಂಗೀಕಾರ | 42 |
| 16. | ಸರ್ಕಾರದ ಅನುಮೋದನೆಗೆ ಕಾಲಮಿತಿ | 42 |
| 17. | ಯೋಜನಾ ವೆಚ್ಚಗಳ ವಸೂಲಿ | 42 |
| 18. | ಮಂಡಲಿಯ ನಿಧಿಗಳು | 42 |
| 19. | ಮಂಡಲಿಯ ಲೆಕ್ಕಗಳ ಪ್ರಕಟಣೆ | 42 |

## ಆರೋಗ್ಯ ಮತ್ತು ಪೌರಾಡಳಿತ ಸಚಿವಾಲಯ

### ಅಧಿಸೂಚನೆ

**ಬೆಂಗಳೂರು, ದಿನಾಂಕ 15ನೇ ನವೆಂಬರ್ 1974.**

**ಜಿ.ಎಸ್.ಆರ್. 314.-** ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973 (1974ರ ಕರ್ನಾಟಕ ಅಧಿನಿಯಮ 25 ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸಿದೆ, ಸದರಿ ನಿಯಮಗಳ ಕರಡನ್ನು, ಸದರಿ ಅಧಿನಿಯಮದ 68ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ದಿನಾಂಕ 29ನೇ ಅಕ್ಟೋಬರ್ 1974ರ ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯ ಭಾಗ IVರ ವಿಭಾಗ 2ಸಿ (i) ನಲ್ಲಿ ಜಿ.ಎಸ್.ಆರ್. 297 ದಿನಾಂಕ 29ನೇ ಅಕ್ಟೋಬರ್ 1974ನೇ ಹೆಚ್.ಎಂ.ಎ. 165 ಎಂ.ಎನ್.ಎಂ. 74ನೇ ಕ್ರಮಾಂಕದ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದೆ.

### ಭಾಗ- I

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ನಿಯಮಗಳು, 1974 ಎಂದು ಕರೆಯತಕ್ಕದ್ದು.

(2) ಅವು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **ಪರಿಭಾಷೆ.-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ ಅಧಿನಿಯಮ, 1973 (1974ರ ಕರ್ನಾಟಕ ಅಧಿನಿಯಮ 25);

(ಬಿ) "ಮಂಡಲಿ" ಎಂದರೆ, 4ನೇ ಪ್ರಕರಣದ ಮೇರೆಗೆ ರಚಿತವಾದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆ ಮಂಡಲಿ;

(ಸಿ) "ಅಧ್ಯಕ್ಷ" ಎಂದರೆ, ಮಂಡಲಿಯ ಅಧ್ಯಕ್ಷ;

(ಡಿ) "ಸಮಿತಿ" ಎಂದರೆ, 4ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಸಮಿತಿ;

(ಇ) "ರಾಜ್ಯ ಸರ್ಕಾರ" ಎಂದರೆ, ಕರ್ನಾಟಕ ರಾಜ್ಯ ಸರ್ಕಾರ;

(ಎಫ್) "ಸರ್ಕಾರಿ ನೌಕರ" ಎಂದರೆ, ಸರ್ಕಾರದಿಂದ ನಿಯೋಜಿತಗೊಂಡ ವ್ಯಕ್ತಿ;

(ಜಿ) "ಪ್ರಕರಣ" ಎಂದರೆ, ಅಧಿನಿಯಮದ ಪ್ರಕರಣ.

### ಭಾಗ - II

### ಮಂಡಲಿ

3. **ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಗಾಗಿ ಅರ್ಹತೆ.-** ಅಧ್ಯಕ್ಷರು, ಸಾರ್ವಜನಿಕ ಕಲ್ಯಾಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅನುಭವ ಹೊಂದಿರತಕ್ಕ ವ್ಯಕ್ತಿಯಾಗಿರತಕ್ಕದ್ದು. ವ್ಯವಸ್ಥಾಪಕ ನಿರ್ದೇಶಕನು ಆಡಳಿತದಲ್ಲಿ ಅನುಭವ ಹೊಂದಿರುವ ಮತ್ತು ವಾಣಿಜ್ಯ ವಿಷಯಗಳನ್ನು ವ್ಯವಹರಿಸಲು ಸಮರ್ಥನಾಗಿರುವ ವ್ಯಕ್ತಿಯಾಗಿರತಕ್ಕದ್ದು.

4. **ಪರಿಶ್ರಮ ಧನ ಮತ್ತು ಭತ್ಯೆಗಳು.-** (1) ಒಬ್ಬ ನೌಕರನನ್ನು ಅಧ್ಯಕ್ಷನಾಗಿ ನೇಮಕ ಮಾಡಿದಲ್ಲಿ, ಅವನಿಗೆ ಅವನ ವೇತನ ಶ್ರೇಣಿಯಲ್ಲಿನ ವೇತನವನ್ನು ಮತ್ತು ಮಾಸಿಕ 150 ರೂ. ಗಳ ವಿಶೇಷ ವೇತನವನ್ನು ಮತ್ತು ಸರ್ಕಾರೇತರ ವ್ಯಕ್ತಿಯು ಅಧ್ಯಕ್ಷನಾಗಿ ನೇಮಕನಾದಲ್ಲಿ ಸರ್ಕಾರವು ನಿಗದಿಪಡಿಸಬಹುದಾದ ಪರಿಶ್ರಮ ಧನ ಮತ್ತು ಇತರ ಪರಿಹಾರ ಭತ್ಯಗಳನ್ನು ಸಂದಾಯ ಮಾಡತಕ್ಕದ್ದು:

ಪರಂತು, ಹಾಗೆ ನೇಮಕಗೊಂಡ ವ್ಯಕ್ತಿಯು ಸಚಿವ ಅಥವಾ ಶಾಸಕನಾಗಿದ್ದಲ್ಲಿ, ಅವನು ಯಾವುದೇ ಪರಿಶ್ರಮಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ವ್ಯವಸ್ಥಾಪಕ ನಿರ್ದೇಶಕನು, ಮಂಡಲಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವನಿಗೆ ಮಾಸಿಕವಾಗಿ 1500 ರೂ.ಗಳು ಹಾಗೂ ಇತರ ಭತ್ಯೆಗಳನ್ನು ಎಂದರೆ, ವಾಹನಭತ್ಯೆ, ಮನೆಬಾಡಿಗೆ ಭತ್ಯೆ ಮತ್ತು ತುಟ್ಟಿಭತ್ಯೆ ಇತ್ಯಾದಿಯನ್ನು 1ನೇ ವರ್ಗದ ರಾಜ್ಯ ಸರ್ಕಾರಿ ನೌಕರರಿಗೆ ಅಂಗೀಕಾರಾರ್ಹವಾಗುವ ದರದಲ್ಲಿ ಸಂದಾಯ ಮಾಡತಕ್ಕದ್ದು.

(3) ಇತರ ನಿರ್ದೇಶಕರು ಮಂಡಲಿಯ ಸಭೆಗಳಲ್ಲಿ, ಉಪವೇಶನದ ಪ್ರತಿದಿನಕ್ಕೆ ನಲವತ್ತು ರೂಪಾಯಿಗಳ ಉಪವೇಶನ ಭತ್ಯೆಯನ್ನು ಮಾತ್ರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು, ಆದರೆ, ಯಾವುದೇ ರೀತಿಯ ಇತರ ಭತ್ಯ ಅಥವಾ ಪರಿಶ್ರಮ ಧನವನ್ನು ಪಡೆಯಲು ಹಕ್ಕುಳ್ಳವರಾಗತಕ್ಕದ್ದಲ್ಲ.

5. **ರಜೆ.-** ಅಧ್ಯಕ್ಷನಿಗೆ ಅಥವಾ ವ್ಯವಸ್ಥಾಪಕ ನಿರ್ದೇಶಕನಿಗೆ ರಜೆಯನ್ನು ಮಂಜೂರು ಮಾಡುವ ಅಧಿಕಾರವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(i) ವ್ಯವಸ್ಥಾಪಕ ನಿರ್ದೇಶಕನು ಸರ್ಕಾರದ 1ನೇ ವರ್ಗದ ಅಧಿಕಾರಿಗೆ ಅನುಮತಿಸಲಾಗುವ ರಜೆಗೆ ಹಕ್ಕುಳ್ಳವನಾಗತಕ್ಕದ್ದು.

(ii) ಪರಂತು, ಅಧ್ಯಕ್ಷನು, ವ್ಯವಸ್ಥಾಪಕ ನಿರ್ದೇಶಕನಿಗೆ ಸಾಂದರ್ಭಿಕ ರಜೆ ಮಂಜೂರ್ಮಾಡಲು ಅಧಿಕಾರ ಹೊಂದಿರತಕ್ಕದ್ದು.

6. **ಪ್ರಯಾಣ ಭತ್ಯೆ.-** (1) ಒಬ್ಬ ಅಧಿಕಾರೇತರ ನಿರ್ದೇಶಕನು, ಮಂಡಲಿಯ ಉದ್ದೇಶಕ್ಕಾಗಿ ಪ್ರಯಾಣ ಕೈಗೊಂಡಲ್ಲಿ, ಅವನು ಕಾಲಕಾಲಕ್ಕೆ 1ನೇ ವರ್ಗದ ಅಧಿಕಾರಿಗಳಿಗೆ ಅನುಮತಿಸತಕ್ಕ ಕರ್ನಾಟಕ ಸಿವಿಲ್ ಸೇವಾ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ದರಗಳಲ್ಲಿ ಮತ್ತು ಷರತ್ತುಗಳಿಗೊಳಪಟ್ಟು ಪ್ರಯಾಣ ಭತ್ಯೆ ಪಡೆಯಲು ಹಕ್ಕುಳ್ಳವನಾಗತಕ್ಕದ್ದು.

(2) ಒಬ್ಬ ಸರ್ಕಾರಿ ನಿರ್ದೇಶಕನು, ಅವನು ಅಂಥ ಸೇವೆ ಅಥವಾ ಹುದ್ದೆಯಿಂದ ನಿವೃತ್ತನಾಗುವವರೆಗೆ, ಅಂಥ ಸೇವೆ ಅಥವಾ ಹುದ್ದೆಯಲ್ಲಿ ಅವನಿಗೆ ಅನ್ವಯಿಸತಕ್ಕ ಪ್ರಯಾಣ ಭತ್ಯೆಯ ನಿಯಮಗಳಿಗೆ ಒಳಪಟ್ಟಿರುವುದು ಮುಂದುವರಿಯತಕ್ಕದ್ದು. ಅಂಥ ಸೇವೆ ಅಥವಾ ಹುದ್ದೆಯಿಂದ ನಿವೃತ್ತನಾದ ಬಳಿಕ ಪ್ರಯಾಣಭತ್ಯೆಗೆ ಸಂಬಂಧಿಸಿದಂತೆ ಈ ನಿಯಮದ (1)ನೇ ಉಪನಿಯಮಕ್ಕೆ ಒಳಪಟ್ಟಿರತಕ್ಕದ್ದು.

7. **ರಾಜೀನಾಮೆ.-** ಅಧ್ಯಕ್ಷ ಅಥವಾ ಇತರ ಯಾರೇ ನಿರ್ದೇಶಕನು, ರಾಜ್ಯ ಸರ್ಕಾರಕ್ಕೆ, ಮೂರು ತಿಂಗಳ ಲಿಖಿತ ನೋಟೀಸು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು; ಆದಾಗ್ಯೂ, ರಾಜ್ಯ ಸರ್ಕಾರವು ತನ್ನ ವಿವೇಚನೆಯಂತೆ ಈ ಷರತ್ತನ್ನು ಮನ್ನಾ ಮಾಡಬಹುದು.

8. **ವ್ಯವಹರಣೆಗಳು.-** ಮಂಡಲಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳನ್ನು, ಆ ಉದ್ದೇಶಕ್ಕಾಗಿ ಇಡಲಾದ ನಡವಳಿ ಪುಸ್ತಕದಲ್ಲಿ ದಾಖಲ್ಮಾಡತಕ್ಕದ್ದು ಮತ್ತು ಆ ದಿನದ ಸಭೆಯ ಅಥವಾ ತರುವಾಯ ಸಭೆಯ ಅಧ್ಯಕ್ಷನು ಅದಕ್ಕೆ ಸಹಿ ಮಾಡತಕ್ಕದ್ದು.

9. **ಕೋರಂ.-** ಮಂಡಲಿಯ ಸಭೆಯ ಕೋರಂ, ಮಂಡಲಿಯ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟಿರತಕ್ಕದ್ದು. ತೀರ್ಮಾನಕ್ಕಾಗಿ ಉದ್ಭವಿಸುವ ಎಲ್ಲಾ ಪ್ರಶ್ನೆಗಳನ್ನು ಮತಗಳ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಈ ಸೂಚನೆಗೆ ಪರ ಮತ್ತು ವಿರುದ್ಧವಾಗಿ ಮತ ಚಲಾಯಿಸುವ ವ್ಯಕ್ತಿಗಳ ಹೆಸರನ್ನು ನಡವಳಿ ಪುಸ್ತಕದಲ್ಲಿ ದಾಖಲ್ಮಾಡತಕ್ಕದ್ದು, ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷರು ಎರಡನೆಯ ನಿರ್ಣಾಯಕ ಮತವನ್ನು ಚಲಾಯಿಸುವ ಅಧಿಕಾರ ಹೊಂದಿರತಕ್ಕದ್ದು.

10. **ಸಭೆಯ ಅಧ್ಯಕ್ಷ.-** ಅಧ್ಯಕ್ಷನು ಮಂಡಲಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅಧ್ಯಕ್ಷನ ಗೈರುಹಾಜರಿಯಲ್ಲಿ ಅಧ್ಯಕ್ಷನು ನಾಮನಿರ್ದೇಶನ ಮಾಡಿದ ಸದಸ್ಯನು ಮತ್ತು ಅಧ್ಯಕ್ಷ ಹಾಗೂ ಅಂಥ ಸದಸ್ಯರಿಬ್ಬರೂ ಗೈರು ಹಾಜರಿದ್ದಾಗ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿಯಿಂದ ಚುನಾಯಿಸಿದ ಒಬ್ಬ ಸದಸ್ಯನು ಅಧ್ಯಕ್ಷತೆ ವಹಿಸತಕ್ಕದ್ದು.

11. **ಸಭೆ ನಡೆಯುವ ಸ್ಥಳ.-** ಮಂಡಲಿಯು ಅನ್ಯಥಾ ಅಪೇಕ್ಷಿಸಿದ ಹೊರತು, ಎಲ್ಲಾ ಸಭೆಗಳು ಮಂಡಲಿಯ ಮುಖ್ಯ ಕಚೇರಿಯಲ್ಲಿ ನಡೆಯತಕ್ಕದ್ದು.

12. **ಅಧ್ಯಕ್ಷತೆ ವಹಿಸುವ ಅಧಿಕಾರಿಯು ವ್ಯವಹಾರ ನಡೆಸುವುದನ್ನು ತೀರ್ಮಾನಿಸುವುದು.-** ಈ ನಿಯಮಗಳಲ್ಲಿ ಅನ್ಯಥಾ ಉಪಬಂಧಿಸಿರದ ಹೊರತು, ಸಭೆಗಳಲ್ಲಿ ವ್ಯವಹಾರ ನಡೆಸುವುದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ ಸಭೆಯ ಅಧ್ಯಕ್ಷತೆ ವಹಿಸುವ ವ್ಯಕ್ತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

13. **ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ನಿರ್ಬಂಧಗಳು.-** ಈ ನಿಯಮಗಳಲ್ಲಿ ಏನೇ ಇದ್ದರೂ, ಅಧ್ಯಕ್ಷನು ಅಥವಾ ಅಧ್ಯಕ್ಷತೆ ವಹಿಸುವ ಸದಸ್ಯನು, ಯಾವುದೇ ಮಾಹಿತಿಯನ್ನು ಒದಗಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಗತ್ಯವಾದುದಲ್ಲವೆಂದು ಅಭಿಪ್ರಾಯಪಟ್ಟರೆ, ಮಂಡಲಿಯ ಯಾವುದೇ ಸಭೆಯಲ್ಲಿ ಅಂಥ ಯಾವುದೇ ಮಾಹಿತಿಯನ್ನು ಒದಗಿಸುವುದಕ್ಕೆ ಮಂಡಲಿಯು ಬದ್ಧವಾಗತಕ್ಕದ್ದಲ್ಲ.

14. **ಸ್ವತ್ತಿನ ವರ್ಗಾವಣೆ.-** 5,000 ರೂಪಾಯಿಗಳನ್ನು ಮೀರಿದ ಮೌಲ್ಯದ ಮಂಡಲಿಯ ಯಾವುದೇ ಸ್ವತ್ತನ್ನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ವರ್ಗಾಯಿಸತಕ್ಕದ್ದಲ್ಲ.

**15. ಸ್ಥಳೀಯ ಪ್ರಾಧಿಕಾರಗಳ ಯೋಜನೆಗಳ ಅಂಗೀಕಾರ.-** 20ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ಯೋಜನೆಯ ತನಿಖಾ ವರದಿಯನ್ನು ಸ್ಥಳೀಯ ಪ್ರಾಧಿಕಾರವು ಪರೀಕ್ಷಿಸತಕ್ಕ ಕಾಲಮಿತಿಯು ಮೂರು ತಿಂಗಳಾಗಿರತಕ್ಕದ್ದು.

**16. ಸರ್ಕಾರದ ಅನುಮೋದನೆಗೆ ಕಾಲಮಿತಿ.-** 21ನೇ ಪ್ರಕರಣದ ಮೇರೆಗೆ ಸರ್ಕಾರವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಕಾಲಮಿತಿಯು ಮೂರು ತಿಂಗಳಾಗಿರತಕ್ಕದ್ದು.

**17. ಯೋಜನಾ ವೆಚ್ಚಗಳ ವಸೂಲಿ.-** (1) ಮಂಡಲಿಯು ಯಾವುದೇ ಯೋಜನೆಯನ್ನು ತನಿಖೆ ಮಾಡುವುದಕ್ಕೆ ಸಂಬಂಧಿಸಿದ ವೆಚ್ಚವನ್ನು ಎರಡು ಅರ್ಧವಾರ್ಷಿಕ ಕಂತುಗಳಲ್ಲಿ ವಸೂಲು ಮಾಡತಕ್ಕದ್ದು.

(2) ಯಾವುದೇ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಸಂಬಂಧಿಸಿದ ವೆಚ್ಚವನ್ನು ಒಂದು ವರ್ಷದ ಅವಧಿಯೊಳಗೆ ವಸೂಲು ಮಾಡತಕ್ಕದ್ದು ಮತ್ತು ಯಾವುದೇ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ವೆಚ್ಚವನ್ನು ಇಪ್ಪತ್ತು ಸಮ ವಾರ್ಷಿಕ ಕಂತುಗಳಲ್ಲಿ ವಸೂಲು ಮಾಡತಕ್ಕದ್ದು.

**18. ಮಂಡಲಿಯ ನಿಧಿಗಳು.-** ಮಂಡಲಿಯ ನಿಧಿಗಳನ್ನು, "847 ಸ್ಥಳೀಯ ನಿಧಿಗಳ ಠೇವಣಿ (X) ಇತರ ನಿಧಿಗಳು (28) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ನಿಧಿಗಳು" ಎಂಬ ಶೀರ್ಷಿಕೆಯ ಅಡಿಯಲ್ಲಿ ಸರ್ಕಾರದ ಸಾರ್ವಜನಿಕ ಲೆಕ್ಕದಲ್ಲಿ ಠೇವಣಿ ಇಡತಕ್ಕದ್ದು.

(2) ವ್ಯವಸ್ಥಾಪಕ ನಿರ್ದೇಶಕನು ತನ್ನ ಸಹಿಯೊಂದಿಗೆ ಮಂಡಲಿಯ ನಿಧಿಗಳನ್ನು ನಿರ್ವಹಿಸತಕ್ಕದ್ದು.

**19. ಮಂಡಲಿಯ ಲೆಕ್ಕಗಳ ಪ್ರಕಟಣೆ.-** ಲೆಕ್ಕ ಪರಿಶೋಧಕನು ಪ್ರಮಾಣೀಕರಿಸಿದಂಥ ಮಂಡಲಿಯ ಲೆಕ್ಕಗಳನ್ನು ಮಂಡಲಿಯ ಕಚೇರಿಯ ಸೂಚನಾ ಫಲಕದಲ್ಲಿ ಅದರ ಒಂದು ಪ್ರತಿಯನ್ನು ಅಂಟಿಸುವ ಮೂಲಕ ಪ್ರಕಟಿಸತಕ್ಕದ್ದು.

(ನಂ.ಹೆಚ್.ಎಂ.ಎ. 165 ಎಂ.ಎನ್.ಎಂ. 74.)

* * *